॥ಶ್ರೀಮದ್ವೇಶಾಯನಮಃ॥ಪ್ರಾತಃ ಸಂಧ್ಯಾವಂದನೆ ಪ್ರಾರಂಭಃ॥

**1. ಆಚಮನ ವಿಧಿ :-**

(1) ಓಂ ಶ್ರೀಕೇಶವಾಯಸ್ವಾಹಾ ॥

(ವಿಶೇಷ ಸೂಚನೆ:- ಪರಮಾತ್ಮನ ಕೇಶವಾದಿ ನಾಮಗಳಿಗೆ ಅನೇಕ ಅರ್ಥವುಂಟು. ಶ್ರೀಮಧ್ವವಿಜಯ ಆರನೇ ಸರ್ಗದಲ್ಲಿ ಹೇಳಿದಂತೆ ಪರಮಾತ್ಮನ ಪ್ರತಿನಾಮಕ್ಕೂ ನೂರು- ಅರ್ಥಗಳುಂಟೆಂದು ತಿಳಿದು ಬರುತ್ತದೆ. ಮತ್ತು ತಂತ್ರಸಾರೋಕ್ತವಾಗಿ ಅಕಾರಾದಿ ಕ್ಷಕಾರಾಂತ ಪ್ರತಿ ಅಕ್ಷರವೂ ಪರಮಾತ್ಮನರೂಪಗಳೆಂದು ಹೇಳಿ ಆಯಾನಾಮಗಳು ವಿವರಣೆ ಮಾಡಿದ್ದಾರೆ. ಅವೆಲ್ಲ ವಿವರವಾಗಿ ಇಲ್ಲಿ ಹೇಳಲು ಸಾಧ್ಯವಿಲ್ಲ. ಅಧಿ ಕಾರಿಭೇದದಿಂದ ಸ್ವಲ್ಪವಾಗಿಯೂ ವಿಶೇಷಾಕಾರವಾಗಿಯೂ ಹೇಳತಕ್ಕದ್ದು ಆಗಿದೆ. ಮತ್ತು ಆ ನಾಮಗಳ ಸಮಸ್ತ ಅರ್ಥಗಳು ಇಲ್ಲಿ ಅನಾವಶ್ಯಕವಾಗಿಯೂ ಇದೆ. (ಪ್ರಸ್ತುತ ಅಷ್ಟು ಬೇಕಾಗಿಲ್ಲ) ಶಕ್ತ್ಯಾನುಸಾರ ನಮಗೆ ತೋರಿದಷ್ಟು ಕೆಲವೇ ಅರ್ಥಗಳನ್ನು ಮಾತ್ರ ಸಪ್ರಮಾಣಗಳಿಂದ ಇಲ್ಲಿ ವಿವರಿಸಲ್ಪಡುತ್ತದೆ. )

(1) 1. 'ಯಸ್ಮಾತ್ತ್ವಯೈವ ದುಷ್ಟಾತ್ಮಾಹತಃ ಕೇಶೀಜನಾರ್ದನ । ತಸ್ಮಾತ್ಕೇಶವನಾಮ್ನಾ ತ್ವಂ ಲೋಕೇ ಜ್ಞೇಯೋ ಭವಿಷ್ಯತಿ ॥'' ಯೆಂಬುವ ವಿಷ್ಣುಪುರಾಣ ವಾಕ್ಯದಿಂದ ಕೇಶಿಯೆಂಬ ದುಷ್ಟರಾಕ್ಷಸನನ್ನು ಸಂಹಾರಮಾಡಿದ ಕಡೆಯಿಂದ ಕೇಶವನೆಂದರ್ಥ.

2. 'ಕಶ್ಚ ಈಶಶ್ಚ ಕೇಶೌ ತೌ ವರ್ತಯತಿ ಇತಿ ಕೇಶವಂ।' ಯೆಂಬುವ ವ್ಯುತ್ಪತ್ತಿಯಿಂದ ಬ್ರಹ್ಮರುದ್ರನಿಯಾಮಕನೆಂದು ಅರ್ಥ.

3. 'ಕೋ ಬ್ರಹ್ಮೇತಿ ಸಮಾಖ್ಯಾತ ಈಶೋಽಹಂ ಸರ್ವದೇಹಿನಾಂ । ಆವಾಂತವಾಂಶಸಂಭೂತೌ ತತಃ ಕೇಶವನಾಮವಾನ್।' ಎಂಬುವ ಹರಿವಂಶಸ್ಥ ರುದ್ರವಾಕ್ಯದಿಂದ ಬ್ರಹ್ಮರುದ್ರರಲ್ಲಿ ಅಂಶವುಳ್ಳವನಾದ್ದರಿಂದ ಕೇಶವನೆಂದರ್ಥ.

4. 'ಕೇಶಾಃ ರಾಮಕೃಷ್ಣಾದಯೋ ಅಂಶಾಃ ಅಸ್ಯಸಂತೀತಿ ಕೇಶವಃ ' ಎಂಬುವ ಪ್ರಮಾಣದಿಂದ ರಾಮಕೃಷ್ಣಾದಿ ರೂಪಗಳಲ್ಲಿ ಅಂಶವುಳ್ಳ ಕಡೆಯಿಂದ ಕೇಶವನೆಂದರ್ಥ.

5. 'ಅಂಶವೋ ಯೇ ಪ್ರಕಾಶಂತೇ ಮಮೈತೇ ಕೇಶಸಂಜ್ಞಿತಾಃ । ಸರ್ವಜ್ಞಾಃಕೇಶವಂ ತಸ್ಮಾತ್ ಮಾಮಾಹುರ್ದ್ವಿಜಸತ್ತಮ ' ಎಂಬುವ ಮಹಾಭಾರತಸ್ಥ ಶ್ರೀಕೃಷ್ಣವಾಕ್ಯದಿಂದಲೂ,

6. ಅತಿಪ್ರಶಸ್ತವಾದ ಕೇಶಗಳುಳ್ಳ ಕಡೆಯಿಂದಲೂ, ಶ್ರೀಪರಮಾತ್ಮಗೆ ಕೇಶವನೆಂದು ಹೆಸರು. ಇಂಥಾ ಗುಣಪೂರ್ಣನಾದ ಶ್ರೀಪರಮಾತ್ಮನಿಗೋಸ್ಕರ ಈ ಉದಕವನ್ನು ಪಾನಮಾಡುತ್ತೇನೆಂದು ಅರ್ಥ.

(2) ಓಂ ನಾರಾಯಣಾಯ ಸ್ವಾಹಾ

1.ನರಜ್ಜಾತಾನಿ ತತ್ವಾನಿ ನಾರಾಣೀತಿ ತತೋ ವಿದುಃ। ತನ್ಯೇವಚಾಯನಂ ತಸ್ಯ ತೇನ ನಾರಾಯಣಸ್ಮೃತಃ ॥ ಎಂಬುವ ಭಾರತವಾಕ್ಯದಿಂದ ಸಮಸ್ತತತ್ವಗಳಿಗೆ ಉತ್ಪತ್ತಿದ್ವಾರಾ ಆಶ್ರಯನಾದ ಕಡೆಯಿಂದ ನಾರಾಯಣನೆಂದರ್ಥ.

2. 'ನಾರಾಯಣಮಯನಂ ಯಸ್ಮಾತಸ್ಮಾನ್ನಾರಾಯಣಸ್ಮೃತಃ।' ಎಂಬುವ ಬ್ರಹ್ಮವೈವರ್ತ ಪುರಾಣವಾಕ್ಯದಿಂದ ಉದಕಗಳಿಗೂ, ಮುಕ್ತರಿಗೂ ಆಶ್ರಯನಾದ ಕಡೆಯಿಂದ ನಾರಾಯಣನೆಂದರ್ಥ.

3. 'ಆಪೋನಾರಾ ಇತಿ ಪ್ರೋಕ್ತಾ ಆಪೋವೈ ನರಸೂನವಃ। ಅಯನಂ ತಸ್ಯತಾಃ ಪೂರ್ವಂ ತೇನ ನಾರಾಯಣಸ್ಮೃತಃ।' ಎಂಬುವ ಮನು ವಾಕ್ಯದಿಂದ ಸೃಷ್ಟಿಗೆ ಆದಿಕಾಲದಲ್ಲಿ ಪ್ರಳಯ ಉದಕಗಳಿಗೆ ಆಧಾರಭೂತನಾದವನೆಂದು ಅರ್ಥ.

4. 'ನಾರಾಯಣಾಯ ನಮ ಇತ್ಯಮುಮೇನ ಮಂತ್ರಂ ಸಂಸಾರಘೋರವಿಷಸಂಹಾರಣಾಯ ಸತ್ಯಂ । ಶೃಣ್ವಂತು ಭವ್ಯಮತಯೋ ಯತಯೋಸ್ತರಾಗಾ ಮೋಕ್ಷಾರ್ಥಿನಾಮುಪದಿಶಾಮ್ಯಹಮೂರ್ಧ್ವಬಾಹು '' ಎಂಬುವ ನೃಸಿಂಹಪುರಾಣವಾಕ್ಯದಿಂದ ನಾರಾಯಣ ಎಂದು ಸ್ಮರಣೆಮಾಡಿದಮಾತ್ರದಿಂದಲೇ ಈ ಘೋರವಾದ ಸಂಸಾರದುಃಖಗಳನ್ನು ಕಳೆದು ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುತ್ತಾನಾದ ಕಡೆಯಿಂದ ನಾರಾಯಣನೆಂದು ಅರ್ಥ.

5. ಅರಾಃ= ದೋಷಾಃ, ತದ್ವಿರುದ್ಧಾಗುಣಾಃ =ನಾರಾಃ ತೇಷಾಂ ಅಯನಂ= ಆಶ್ರಯಃ ಎಂಬುವ ಪ್ರಮಾಣದಿಂದ ಪರಮಾತ್ಮಗುಣಪೂರ್ಣ- ನೆಂತಲೂ ಜ್ಞಾನಿಗಳಿಗೆ ಆಶ್ರಯನೆಂತಲೂ ಅರ್ಥ.

6. ಜ್ಞಾನಾನಂದರೂಪವುಳ್ಳವನೆಂದರ್ಥ. ಇಂಥಾ ಗುಣಪೂರ್ಣನಾದ ನಾರಾಯಣನಾಮಕ ಪರಮಾತ್ಮನಿಗೋಸ್ಕರ ಉದಕಪಾನವನ್ನು ಮಾಡುತ್ತೇನೆಂದು ಅರ್ಥ.

**(3) ಓಂ ಮಾಧವಾಯ ಸ್ವಾಹಾ .**

1. ಮಾಯಾಃ= ಲಕ್ಷ್ಮ್ಯಾಃ ; ಧವಃ = ಪತಿಃಎಂಬುವ ವ್ಯುತ್ಪತ್ತಿದ್ವಾರಾ ಲಕ್ಷ್ಮೀಪತಿಯೆಂದು ಅರ್ಥ.

2. ಮಧುಕುಲೋತ್ಪನ್ನನಾದ ಕಡೆಯಿಂದ ಪರಮಾತ್ಮನಿಗೆ ಮಾಧವ ಎಂದು ಹೆಸರು.

3. 'ಮಾ ವಿದ್ಯಾ ಚ ಹರೇಃ ಪ್ರೋಕ್ತಾ ತಸ್ಯಾ ಈಶೋ ಯತೋ ಭವಾನ್ । ತಸ್ಮಾತ್ ಮಾಧವ ನಾಮಾಸಿ ।ಧವಸ್ವಾಮೀ ಶಬ್ದಿತಃ। ಎಂಬುವ ಹರಿವಂಶವಾಕ್ಯವನ್ನು ಅನುಸರಿಸಿ ವಿದ್ಯಾಪತಿಯೆಂದರ್ಥ.

4. 'ಮಾತ್ವಾಧ್ಯಾನಾಚ್ಚಯೋಗಾಚ್ಚ ವಿದ್ಧಿ ಭಾರತಮಾಧವಂ' ಎಂಬುವ ಭಾರತವಾಕ್ಯದಿಂದ ಧ್ಯಾನಯೋಗ ಜ್ಞಾನಯೋಗಗಳಿಂದ ತಿಳಿಸಿಕೊಂಬುವಿಯೆಂದರ್ಥ. ಇಂಥಾ ಮಾಧವನಾಮಕ ಪರಮಾತ್ಮನಿಗೋಸ್ಕರ ಉದಕವನ್ನು ಪಾನಮಾಡುತ್ತೇನೆಂದು ಅರ್ಥ.

**(4) ಓಂ ಶ್ರೀಗೋವಿಂದಾಯನಮಃ ।**

1.ನಷ್ಟಾಂ ವೈ ಧರಣಿಂಪೂರ್ವಮವಿಂದಂಯದ್ಗುಹಾಗತಾಮ್ । ಗೋವಿಂದ ಇತಿ ತೇನಾಹಂ ದೇವೈರ್ವಾಗ್ಭಿರಭಿಷ್ಟುತಃ ।'' ಎಂಬುವ ಮೋಕ್ಷಧರ್ಮಸ್ಥ ವರಾಹರೂಪಿಯಾದ ಪರಮಾತ್ಮನ ವಾಕ್ಯದಿಂದ ಪೂರ್ವದಲ್ಲಿ ಹಿರಣ್ಯಾಕ್ಷನಿಂದ ಅಪಹೃತವಾದ ಭೂಮಿಯನ್ನು ತಂದು ಯಥಾಸ್ಥಿತಿಯಾಗಿ ಸ್ಥಾಪಿಸಿದ ಕಡೆಯಿಂದ ದೇವರಿಗೆ ಗೋವಿಂದ ಎಂದು ಹೆಸರು.

2. 'ಅಹಂ ಕಿಲೇಂದ್ರೋ ದೇವಾನಾಂ ತ್ವಂ ಗವಾಮಿಂದ್ರತಾಂ ಗತಃ ।ಗೋವಿಂದ ಇತಿ ಲೋಕಾಸ್ತ್ವಾಂ ಸ್ತೋಷ್ಯಂತಿ ಭುವಿಶಾಶ್ವಿತಂ ।' ಯೆಂಬುವ ಗೋವರ್ಧನ ಪರ್ವತೋದ್ಧಾರಣಮಾಡುವ ಕಾಲದಲ್ಲಿ ದೇವೇಂದ್ರನು ನುಡಿದ ವಾಕ್ಯದಿಂದ ಗೋವುಗಳಿಗೆ ಇಂದ್ರನೆಂದರ್ಥ.

3. ' ಗೋರೇಷಾಭವತೋ ವಾಣೀ ತಾಂ ಚ ವಿಂದಯತೇ ಭವಾನ್ । ಗೋವಿಂದಸ್ತು ತತೋ ದೇವಮುನಿಭಿಃ ಕಥ್ಯತೇ ಭವಾನ್'। ಎಂಬುವ ಹರಿವಂಶಸ್ಥವಾಕ್ಯದಿಂದಲೂ;

4. ಗೋಭಿರ್ವೇದಾಂತವಾಕ್ಯೈಃ ವೇದ್ಯತ ಇತಿ ಗೋವಿಂದಃ ಎಂಬುವ ಪ್ರಮಾಣದಿಂದಲೂ;

5. ಗೋಭಿರೇವ ಯತೋ ವೇದ್ಯೋ ಗೋವಿಂದಸ್ಸಮುದಾಹೃತಃ ॥ ಎಂಬುವ ಪ್ರಮಾಣದಿಂದಲೂ;

6. 'ಗವಾ ಅವಿಂ ಅಜ್ಞಾನಂ ದ್ಯತಿ ಖಂಡಯತೀತಿ ವಾ ಗೋವಿಂದಃ । ಎಂಬುವ ವ್ಯುತ್ಪತ್ತಿಯಿಂದಲೂ ಅಜ್ಞಾನವನ್ನು ನಾಶಮಾಡ-ತಕ್ಕವನೆಂದರ್ಥ. ಇಂಥಾಗೋವಿಂದನಾಮಕ ಗುಣಪೂರ್ಣಭಗವಂತನಿಗೋಸ್ಕರ ನಮಸ್ಕಾರ.

(5) ಓಂ ವಿಷ್ಣವೇ ನಮಃ .

1. 'ವೇವೇಷ್ಟಿವ್ಯಾಪ್ನೋತೀತಿ ವಿಷ್ಣುಃ' ಎಂಬುವ ವ್ಯುತ್ಪತ್ತಿಯಿಂದಲೂ;

2. 'ವ್ಯಾಪ್ಯಮೇರೋದಸೀಪಾರ್ಥಕಾಂತಿರಭ್ಯಧಿಕಾಸ್ಥಿತಾ । ಕ್ರಮಣಾಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ ॥''ಯೆಂಬುವ ಮಹಾಭಾರತ ವಚನ ಪ್ರಮಾಣದಿಂದಲೂ ಪ್ರಪಂಚ- ಸರ್ವತ್ರದಲ್ಲಿ ವ್ಯಾಪ್ತನಾದವನೆಂದು ಅರ್ಥ.

3. 'ಣಕಾರೋ ಬಲಂ, ಷಕಾರಃ ಪ್ರಾಣ ಆತ್ಮ' ಎಂಬುವ ಶೃತಿಪ್ರಮಾಣದಿಂದ ವಿಶಿಷ್ಟಬಲ ಚೇಷ್ಟಾಸ್ವಭಾವವುಳ್ಳವನೆಂದರ್ಥ.

4. 'ವಿಶೇಷೇಣ ಸನೋತಿ ದದಾತಿ, ಭಕ್ತಾಯಾಭೀಷ್ಟಂ । ವಿಶೇಷೇಣ ಸ್ನೌತಿ ಪ್ರಸವತಿ ಫಲಂ ಯಸ್ಮಾತ್ ।' ಎಂಬುವ ಪ್ರಮಾಣಗಳಿಂದಲೂ ವ್ಯುತ್ಪತ್ತಿಯಿಂದಲೂ ಭಕ್ತರಅಭಿಲಾಷಗಳನ್ನು ವಿಶೇಷಾಕಾರವಾಗಿ ಕೊಡುತ್ತಾನೆಂದರ್ಥ.

ಇಂತಹ ವಿಷ್ಣುನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರವು.

(6) ಓಂ ಮಧುಸೂದನಾಯನಮಃ

1. 'ಮಧುನಾಮಕಂ ದೈತ್ಯಂಸೂದಯತೀತಿ ಮಧುಸೂದನಃ। ಎಂಬುವ ವ್ಯುತ್ಪತ್ತಿಯಿಂದ ಮಧುನಾಮಕ ದೈತ್ಯಸಂಹಾರಕನೆಂದರ್ಥ.

2. 'ಸ್ವಾದುಪಾಚಕಂ ಭೀಮಂ ನಯತಿ ನಿಯಮಯತೀತಿ ವಾ ಮಧೂಸೂದನಃ। ಭೀಮಸೇನ ದೇವರನ್ನು ನಿಯಮನಮಾಡುವನೆಂದು.

3. ಮಧುಕುಲೋತ್ಪನ್ನನಾದವನೆಂದರ್ಥ. ಇಂಥಾ ಮಧುಸೂದನನಾಮಕ ಗುಣಪೂರ್ಣ ಪರಮಾತ್ಮನಿಗೋಸ್ಕರ ನಮಸ್ಕಾರವು.

(7) ಓಂ ತ್ರಿವಿಕ್ರಮಾಯ ನಮಃ

1'ತ್ರಿಷುಲೋಕೇಷು ವಿಕ್ರಮತೇ ವಿಜಯತೇ ಪದಾನಿ ವಿನ್ಯಸ್ಯತಿ ವಾ ತ್ರಿವಿಕ್ರಮಃ ' ಎಂಬುವ ಪ್ರಮಾಣದಿಂದ ಮೂರುಲೋಕಗಳಲ್ಲಿ ಜಯಹೊಂದಿದವನೆಂದರ್ಥ.

2.'ಶ್ವೇತದ್ವೀಪ ಅನಂತಾಸನ ವೈಕುಂಠವೆಂಬ ಮೂರು ಲೋಕಗಳಲ್ಲಿ ವಾಸಮಾಡುವವನೆಂದರ್ಥ.

3. 'ತ್ರೀಣಿಪದಾವಿಚಕ್ರಮೇ' ಎಂಬುವ ಶ್ರುತ್ಯನುಸಾರವಾಗಿ, 'ತ್ರೀಣಿ ಪದಾನಿ ಅಸ್ಯೇತಿ ತ್ರಿವಿಕ್ರಮಃ' ಎಂಬುವ ವ್ಯುತ್ಪತ್ತಿ ಅನುಸಾರವಾಗಿ

ಮೂರುಪಾದಗಳು ಉಳ್ಳವನೆಂದು ಅರ್ಥ.

4. 'ತ್ರಯೋಗ್ನಯಂ ಪದಂ ಸ್ಥಾನಂ ಅಸ್ಯೇತಿ ತ್ರಿವಿಕ್ರಮಃ ' ಎಂಬುವ ಪ್ರಮಾಣದ್ವಾರಾ ಅಗ್ನಿಯಲ್ಲಿ ಗಾರ್ಹಪತ್ಯ , ಆಹವನೀಯ, ದಕ್ಷಿಣಾಗ್ನಿ ಎಂಬುವ ಮೂರುರೂಪಗಳಿಂದ ಇದ್ದಾನೆಂದು ಅರ್ಥ.

5. 'ತ್ರಿಷು ಜೀವೇಷು ಲೋಕೇಷು ವಿಕ್ರಮಃ ಪರಾಕ್ರಮೋ ಯಸ್ಯೇತಿ ತ್ರಿವಿಕ್ರಮಃ' ಎಂಬುವ ನ್ಯಾಯದಿಂದ ಮುಕ್ತಿಯೋಗ್ಯ ತಮೋಯೋಗ್ಯ ನಿತ್ಯಸಂಸಾರಿಗಳೆಂಬ ತ್ರಿವಿಧಜೀವರಲ್ಲಿಯೂ ಪರಾಕ್ರಮರೂಪದಿಂದ ಇರುವವನೆಂದು ಅರ್ಥ.

ಇಂಥಾ ತ್ರಿವಿಕ್ರಮನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರವು.

### (8) **ಓಂ ವಾಮನಾಯ ನಮಃ ।**

1. 'ಲಕ್ಷ್ಮೀಂ ವಾಮೇ ನಯತೀತಿ ವಾಮನಃ' ಎಂಬುವ ಪ್ರಮಾಣದಿಂದ ಲಕ್ಷ್ಮೀದೇವಿಯನ್ನು ಎಡದಕಡೆ ಇಟ್ಟುಕೊಂಡವನೆಂದು ಅರ್ಥ.

2. ಬಹುಸುಂದರನಾದವನೆಂದೂ ಮತ್ತು ಆಕಾರದಲ್ಲಿ ಸಂಕುಚಿತನಾದವನೆಂದೂ ಅರ್ಥ.

ಇಂಥಾ ವಾಮನನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರವು.

### (9) **ಓಂ ಶ್ರೀಧರಾಯ ನಮಃ ।**

1. 'ಶ್ರಿಯಂ ಧರತೀತಿ ಶ್ರೀಧರಃ' ಎಂಬುವ ಪ್ರಮಾಣದಿಂದ ಲಕ್ಷ್ಮೀದೇವಿಯರನ್ನು ವಕ್ಷಸ್ಥಳದಲ್ಲಿ ಧರಿಸಿದವನೆಂದು ಅರ್ಥ.

2. 'ಶ್ರಿಯಾಧಾರ್ಯತೀತಿ ಶ್ರೀಧರಃ' ಎಂಬುವ ಪ್ರಮಾಣದಿಂದ ಪ್ರಳಯ ಕಾಲದಲ್ಲಿ ಶ್ರೀಭೂದುರ್ಗಾರೂಪರಾದ ವಟಪತ್ರ ಪ್ರಳಯೋದಕ ಅಂಧಕಾರಗಳಲ್ಲಿ ಶಯನ ಮಾಡಿದವನೆಂದರ್ಥ. ಇಂಥಾ ಶ್ರೀಧರನಾಮಕ ಪರಮಾತ್ಮನಿಗೋಸ್ಕರ ನಮಸ್ಕಾರವು .

### (10) **ಓಂ ಹೃಷಿಕೇಶಾಯ ನಮಃ**

1. 'ಹೃಷೀಕಾಣಾಂ ಇಂದ್ರಿಯಾಣಾಂ ಈಶಃ ಸ್ವಾಮೀ' ಎಂಬುವ ಪ್ರಮಾಣದಿಂದ ಸರ್ವೇಂದ್ರಿಯಗಳಿಗೂ ಮುಖ್ಯನಿಯಾಮಕನಾದ ಹೃಷಿಕೇಶ ನಾಮಕ ಗುಣಪೂರ್ಣಪರಮಾತ್ಮನಿಗೆ ನಮಸ್ಕಾರ.

### (1) **ಓಂ ಪದ್ಮನಾಭಾಯ ನಮಃ ।**

1. 'ಅಜಸ್ಯನಾಭಾವಧ್ಯೇಕಮರ್ಪಿತಂ' ಎಂಬುವ ಶ್ರುತಿಪ್ರಮಾಣಾನುಸಾರವಾಗಿಯೂ,

2.'ಪದ್ಮಂ ನಾಭೌ ಯಸ್ಯ ಸಪದ್ಮನಾಭಃ' ಎಂಬುವ ಪ್ರಮಾಣದಿಂದಲೂ ನಾಭಿಯಲ್ಲಿ ಜಗದುತ್ಪತ್ತಿ ಕಾರಣವಾದ ಕಮಲವನ್ನು ಧರಿಸಿದವನೆಂದರ್ಥ. ಇಂಥಾ ಪದ್ಮನಾಭನಾಮಕ ಗುಣಪೂರ್ಣ ಪರಮಾತ್ಮನಿಗೋಸ್ಕರ ನಮಸ್ಕಾರ.

### (12) **ಓಂ ದಾಮೋದರಾಯ ನಮಃ ।**

''ದಾಮ ಉದರೇ ಯಸ್ಯ ಸಃ' ಎನ್ನುವ ಪ್ರಮಾಣದಿಂದಲೂ, 2. 'ತರ್ವೋರ್ಮಧ್ಯಗತಂ ಬದ್ಧಂ ದಾಮ್ನಾ ಗಾಢಂ ತಯೋದರೇ । ತತಶ್ಚ ದಾಮೋದರತಾಂ ಸ ಯಯೌ ದಾಮಬಂಧನಾತ್ ।' ಎಂಬುವ ಪ್ರಮಾಣಗಳಿಂದಲೂ ಯಶೋದಾದೇವಿಯರಿಂದ ಕಟಿಪ್ರದೇಶದಲ್ಲಿ ದಾಮವೆಂಬ ಕಣ್ಣಿ ಹಗ್ಗದಿಂದ ಬದ್ಧನಾದ ದೆಸೆಯಿಂದ, ದೇವರಿಗೆ ದಾಮೋದರನೆಂದು ಹೆಸರು. 3. ದಾಮಾನಿ ಲೋಕನಾಮಾನಿ ಯಸ್ಯೋದರಾಂತರೇ, ತೇನ ದಾಮೋದರೋ ದೇವಃ ಎಂಬುವ ಪುರಾಣ ವಾಕ್ಯದಿಂದಲೂ ಸಮಸ್ತಲೋಕಗಳನ್ನು ಪರಮಾತ್ಮನು ಉದರದಲ್ಲಿ ಧಾರಣೆ ಮಾಡಿದ್ದಾನೆಂದು ಅರ್ಥ. ಇಂಥಾ ದಾಮೋದರನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರ.

### (13) **ಓಂ ಸಂಕರ್ಷಣಾಯ ನಮಃ ।**

''ಸಂಹಾರಕಾಲೇ ಯುಗಪತ್ಪ್ರಜಾಃ ಸಂಕರ್ಷತ ಇತಿ ಸಂಕರ್ಷಣಃ'' ಎಂಬುವ ಪ್ರಮಾಣದಿಂದ ಪರಮಾತ್ಮನು ಪ್ರಳಯಕಾಲದಲ್ಲಿ ಸಮಸ್ತಜೀವರಾಶಿಗಳನ್ನು ಸಮೀಚೀನವಾಗಿ ಕರ್ಷಣಮಾಡುತ್ತಾನೆಂದು ಅರ್ಥ. ಇಂಥಾ ಸಂಕರ್ಷಣನಾಮಕ ಗುಣಪೂರ್ಣ-ಪರಮಾತ್ಮನಿಗೋಸ್ಕರ ನಮಸ್ಕಾರ.

### (14) **ಓಂ ವಾಸುದೇವಾಯ ನಮಃ ।**

'ವಸಂತಿ ಸರ್ವಭೂತಾನ್ಯಸ್ಮಿನ್ ಇತಿ ವಾಸುಃ ದಿವ್ಯತೀತಿ ದೇವಃ ವಾಸುಶ್ಚಾಸೌ ದೇವಸ್ಯ ವಾಸುದೇವಃ ಎಂಬುವ ವ್ಯುತ್ಪತ್ತಿಯಿಂದಲೂ; 'ಛಾದಯಾಮಿ ಜಗತ್ಸರ್ವಂ ಭೂತ್ವಾಸೂರ್ಯ ಇವಾಂಶುಭಿಃ । ಸರ್ವಭೂತಾದಿ ವಾಸಶ್ಚ ವಾಸುದೇವಸ್ತತಃ ಸ್ಮೃತಃ ॥ ಎಂಬುವ ಭಾರತ ಉದ್ಯೋಗಪರ್ವವಾಕ್ಯದಿಂದಲೂ, ಸರ್ವತ್ರಾಸೌ ಸಮಸ್ತಂಚ ವಸತ್ಯತ್ರೇತಿ ವೈಮತಃ । ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಶ್ಯತೇ।' ಎಂಬುವ ಪ್ರಮಾಣದಿಂದಲೂ; ''ಸರ್ವಾಣಿ ತತ್ರಭೂತಾನಿ ವಸಂತಿ ಪರಮಾತ್ಮನಿ । ಭೂತೇಷು ಚ ಸ ಸರ್ವಾತ್ಮಾ ವಾಸುದೇವಸ್ತತಃ ಸ್ಮೃತಃ । ಎಂಬುವ

ವಿಷ್ಣುಪುರಾಣವಾಕ್ಯದಿಂದಲೂ, ಸಮಸ್ತಪ್ರಪಂಚಕ್ಕೆ ತಾನು ಆಧಾರಭೂತನಾಗಿ ತಾನು ಸಮಸ್ತಪದಾರ್ಥಗಳಲ್ಲಿ ವಾಸ- ಮಾಡಿದವನೆಂದು ಅರ್ಥ. ''ವಾಸನಾತ್ ವಾಸುದೇವೋಸಿ ವಾಸಿತಂತೇ ಜಗತ್ರಯಂ ।ಸರ್ವಭೂತನಿವಾಸೋಸಿ ವಾಸುದೇವ ನಮೋಸ್ತುತೇ ॥'' ಎಂಬುವ ಪ್ರಮಾಣದಿಂದಲೂ, ಮೂರುಲೋಕಗಳನ್ನು ತನ್ನಲ್ಲಿ ವಾಸ ಮಾಡಿಸಿಕೊಂಡು ತಾನು ಮೂರುಲೋಕಗಳಲ್ಲಿ ವಾಸಮಾಡುವವನೆಂದು ಅರ್ಥ. ಇಂಥಾ ವಾಸುದೇವ ನಾಮಕ ಗುಣಪರಿಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರ.

### (15) **ಓಂ ಪ್ರದ್ಯುಮ್ನಾಯ ನಮಃ ॥**

''ಪ್ರಕೃಷ್ಟ ದ್ಯುಮ್ನಂ ಪ್ರಕಾಶಂ ಯಸ್ಯೇತಿ ಪ್ರದ್ಯುಮ್ನಃ'' ಎಂಬುವ ಪ್ರಮಾಣದಿಂದ ಪ್ರಕೃಷ್ಟವಾದ ಕಾಂತಿ ಯುಳ್ಳವನೆಂದು ಅರ್ಥ. ; ''ಪ್ರಕೃಷ್ಟಂ ದ್ಯುಮ್ನಂ ದ್ರವಿಣಂ ಯಸ್ಯೇತಿ ಪ್ರದ್ಯುಮ್ನಃ ।'' ಎಂಬುವ ಪ್ರಮಾಣದಿಂದ ವಿಶೇಷಾಕಾರವಾದ ದ್ರವ್ಯವುಳ್ಳವನೆಂದು ಅರ್ಥ. ಇಂಥಾ ಪ್ರದ್ಯುಮ್ನನಾಮಕ ಅದ್ವಿತೀಯಕೋಶಸ್ಥಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರ.

### (16) **ಓಂ ಅನಿರುದ್ಧಾಯನಮಃ ।**

'' ನ ನಿರುದ್ಧಃ ಕೈಶ್ಚಿದಪಿ ಅನಿರುದ್ಧಃ'' ಎಂಬುವ ಪ್ರಮಾಣದಿಂದ ಯಾರಿಂದಲೂ ನಿರೋಧವಿಲ್ಲದವನೆಂದು ಅರ್ಥ ; 'ಅನಭಿರ್ಭಕ್ತೈಃ ಪ್ರಾಣಿಭಿಃ ರುದ್ಯತ ಇತಿ ಅನಿರುದ್ಧಃ ' ಎಂಬುವ ಪ್ರಮಾಣದಿಂದ ತನ್ನ ಭಕ್ತರಿಂದ ನಿರೋಧನ ಮಾಡಿಸಿಕೊಳ್ಳಲ್ಪಟ್ಟವನೆಂದು ಅರ್ಥ.
ಇಂಥಾ ಗುಣಪರಿಪೂರ್ಣಭಗವಂತನಿಗೋಸ್ಕರ ನಮಸ್ಕಾರವು.

### (17) **ಓಂ ಪುರುಷೋತ್ತಮಾಯ ನಮಃ ।**

'ಯಸ್ಮಾತ್ ಕ್ಷರಮತೀತೋಹಮಕ್ಷರಾದಪಿಚೋತ್ತಮಃ। ಅತೋಸ್ತಿಲೋಕೇವೇದೇ ಚ ಪ್ರದಿತಃ ಪುರುಷೋತ್ತಮಃ।' ಎನ್ನುವ ಗೀತೋಕ್ತಿಯಂತೆ ಕ್ಷರಾಕ್ಷರಪುರುಷರಿಗಿಂತಲೂ ಉತ್ತಮನಾದವನೆಂದರ್ಥ ; 'ಪುರಾಃ ಗುಣಾಃ ಷಟ್ ಯಸ್ಯಾಸೌ ಪುರುಷಃ ಸ ಚಾ ಸೌ ಉತ್ತಮಶ್ಚ' ಎಂಬುವ ಪ್ರಮಾಣದಿಂದ ಸಮಸ್ತಗುಣಗಳಿಗೆ ಮುಖ್ಯಾಧಾರನಾದವನೆಂದು ಅರ್ಥ. ; ' ಪುರುಷುಜೀವೇಷು ವ್ಯಾಪಕತ್ವಾತ್ ಪುರುಷಃ' ಎಂಬುವ ಪ್ರಮಾಣದಿಂದ ಸಮಸ್ತಪುರುಷರಲ್ಲಿ ವ್ಯಾಪ್ತನಾದವನೆಂದರ್ಥ ; 'ಶ್ವೇತದ್ವೀಪಾನಂತಾಸನ ವೈಕುಂಠ ಸರ್ವಹೃದಯಾಕಾಶ ಸತ್ಯಲೋಕ ಅವ್ಯಾಕೃತ ಆಕಾಶಾಃ ಷಟ್ । ತತ್ರಸ್ಥಿತತ್ವಾತ್ಪುರುಷೋತ್ತಮಃ' ಎಂಬುವ ಪ್ರಮಾಣದಿಂದ ಶ್ವೇತದ್ವೀಪ ,ಅನಂತಾಸನ , ವೈಕುಂಠ, ಸರ್ವಜೀವರಹೃದಯಾಕಾಶ , ಸತ್ಯಲೋಕ , ಅವ್ಯಾಕೃತಾಕಾಶ ಈ ಆರುಸ್ಥಳಗಳಲ್ಲಿ ವ್ಯಾಪಕನಾದವ ಎಂದು ಅರ್ಥ. ಇಂಥಾ ಪುರುಷೋತ್ತಮನಾಮಕ ಗುಣಪೂರ್ಣ ಪರಮಾತ್ಮನಿಗೋಸ್ಕರ ನಮಸ್ಕಾರ.

### (18) **ಓಂ ಅಧೋಕ್ಷಜಾಯ ನಮಃ ॥**

'ಅಧೋನಕ್ಷೀಯತೇಜಾತು ಯಸ್ಮಾತ್ತಸ್ಮಾದಧೋಕ್ಷಜಃ' ಎಂಬುವ ಭಾರತ ಉದ್ಯೋಗಪರ್ವ ವಾಕ್ಯದಿಂದಲೂ; 'ಅಧಃಕೃತಾನಿ ಅಕ್ಷಜಾನಿ ಯೇನಾಸಾವಧೋಕ್ಷಜಃ' ಎಂಬುವ ಪ್ರಮಾಣದಿಂದಲೂ ಇಂದ್ರಿಯಜನ್ಯಜ್ಞಾನಕ್ಕೆ ಅವಿಷಯನಾದವನೆಂದು ಅರ್ಥ. ಇಂಥಾ ಗುಣಪರಿ-ಪೂರ್ಣನಾದ ಪರಮಾತ್ಮನಿಗೋಸ್ಕರ ನಮಸ್ಕಾರವು.

### (19) **ಓಂ ನಾರಸಿಂಹಾಯ ನಮಃ ।**

'ನರಶ್ಚಾಸೌ ಸಿಂಹಶ್ಚೇತಿ ನರಸಿಂಹಃ' ಎಂಬುವ ಪ್ರಮಾಣದಿಂದ ನರಶ್ರೇಷ್ಠನೆಂದರ್ಥ ; ನರಸಿಂಹ ರೂಪವನ್ನು ಹಿರಣ್ಯಕಶಿಪು- ವಿನಸಂಹಾರಕ್ಕಾಗಿ ಸ್ವೀಕರಿಸಿದವನೆಂದರ್ಥ. ಇಂಥಾ ನರಸಿಂಹ ನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರ.

### (20) **ಓಂ ಅಚ್ಯುತಾಯ ನಮಃ ।**

ವಿನಾಶರಹಿತನಾದ ಅಚ್ಯುತನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರ.

### (21) **ಓಂ ಜನಾರ್ದನಾಯ ನಮಃ ।**

'ಜನಾನ್ ಜನಯತೀತಿ ಜನಃ ಅರ್ದಯತೀತಿ ಅರ್ದನಃ' ಎಂಬುವ ಪ್ರಮಾಣದಿಂದ ಜನರನ್ನು ಸೃಷ್ಟಿಮಾಡುತ್ತಾನೆ, ಸಂಹಾರ ಮಾಡುತ್ತಾನೆಂದರ್ಥ 'ಜನಶ್ಚಾಸಾವರ್ದನಶ್ಚೇತಿ ವಾ, ಸಜ್ಜನಾನರ್ದಯತೀತಿ ವಾ , ಸದ್ಗತಿಂ ಪ್ರಾಪಯತೀತಿ ವಾ, ಅಸಜ್ಜನಾನರ್ದಯತೇ ಹಿನಂತೀತಿ ವಾ ಜನಾರ್ದನಃ ' ಎಂಬುವ ಪ್ರಮಾಣದಿಂದ ಜನರ ಮರ್ದನಮಾಡೋಣದರಿಂದಲೂ, ಸಜ್ಜನರ ಸದ್ಗತಿಗೆ ಹೊಂದಿಸುತ್ತಾನಾದ ಕಡೆಯಿಂದಲೂ, ದುರ್ಮಾರ್ಗರ ನಾಶ ಮಾಡುತ್ತಾನಾದ ಕಡೆಯಿಂದಲೂ, ದೇವರಿಗೆ ಜನಾರ್ದನ ನಾಮಕನೆಂದು ಅರ್ಥ. ; 'ಜನಾನ್ ಬಲ್ಯಾದೀನ್ ಅರ್ದಯತಿ ಯಾಚಯಾತ' ಎಂಬುವ ಪ್ರಮಾಣದಿಂದಲೂ ಬಲ್ಯಾದಿಗಳ ಯಾಚನ ಮಾಡಿದ್ದಾನಾದ ಕಡೆಯಿಂದಲೂದೇವರಿಗೆ ಜನಾರ್ದನನೆಂದು ಹೆಸರು. ; 'ಜನಾನ್ ಪ್ರಳಯ ಕಾಲೇ ನೀಡಯತೀತಿ ವಾ ಜನಾರ್ದನಃ' ಎಂಬುವ ಪ್ರಮಾಣದಿಂದ ಪ್ರಳಯಕಾಲದಲ್ಲಿ ಸಮಸ್ತ ಭೂತಗಳ ಪೀಡನ ಮಾಡತಕ್ಕವನೆಂದು

ಅರ್ಥ. ಇಂಥಾ ಜನಾರ್ದನನಾಮಕ ಗುಣಪೂರ್ಣಪರಮಾತ್ಮನಿ ಗೋಸ್ಕರ ನಮಸ್ಕಾರವು.

(22) **ಓಂ ಉಪೇಂದ್ರಾಯ ನಮಃ ।**

'ಇಂದ್ರಗೆ ಅನುಕೂಲನಾದವನಿಗೋಸ್ಕರ ಎಂದರ್ಥ. ; ಪರಮೈಶ್ವರ್ಯವುಳ್ಳವನಿಗೋಸ್ಕರ ಎಂದರ್ಥ. ಇಂಥಾ ಉಪೇಂದ್ರನಾಮಕ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರವು.

(23) **ಓಂ ಹರಯೇ ನಮಃ ।**

'ಸರ್ವಂ ಸಹತೀತಿ ಹರಿಃ' ಎಂಬುವ ಪ್ರಮಾಣದಿಂದ ಎಲ್ಲವನ್ನೂ ಸಹನಮಾಡುತ್ತಾನೆಂದರ್ಥ; 'ಭಕ್ತಾನಾಂ ಪಾಪಾನಾಂ ಹರತೀತಿ ಹರಿಃ' ಎಂಬುವ ಪ್ರಮಾಣದಿಂದ ಭಕ್ತರ ಪಾಪವನ್ನು ನಾಶ ಮಾಡುವವನೆಂದರ್ಥ ; 'ಸರ್ವಂ ವಶೀಕರೋತೀತಿ ಹರಿಃ' ಎಂಬುವ ಪ್ರಮಾಣದಿಂದ ಸಮಸ್ತವನ್ನೂ ವಶೀಕರಣಮಾಡಿಕೊಂಡವನೆಂದರ್ಥ ; 'ಪಾಪಹರಣಾದ್ಧರಿಃ' ಎಂಬುವ ಪ್ರಮಾಣದಿಂದ ಪಾಪನಾಶಕನೆಂದರ್ಥ ; 'ಅಶುಭಹರಣಾದ್ಧರಿಃ' ಎಂಬುವ ಪ್ರಮಾಣದಿಂದ ಅನಿಷ್ಟಪರಿಹಾರಕನೆಂದರ್ಥ ; 'ವಾಜಿರೂಪತ್ವಾದ್ಧರಿಃ' ಎಂಬುವ ಪ್ರಮಾಣಾನುಸಾರ ಹಯವದನನೆಂದರ್ಥ. ಇಂಥಾ ಹರಿಶಬ್ದವಾಚ್ಯನಾದ ಗುಣಪೂರ್ಣಪರಮಾತ್ಮನಿಗೋಸ್ಕರ ನಮಸ್ಕಾರವು.

(24)(ಶ್ರೀಮಧ್ವಾಂತರ್ಯಾಮಿನ್) **ಓಂ ಶ್ರೀಕೃಷ್ಣಾಯ ನಮಃ ।**

' ದೈತ್ಯಾನ್ ತಮಃ ಪ್ರತಿಕರ್ಷತೀತಿ ಕೃಷ್ಣಃ' ಎಂಬುವ ಪ್ರಮಾಣದಿಂದ ತನ್ನಲ್ಲಿ ದ್ವೇಷಮಾಡುವ ದೈತ್ಯರನ್ನು ತಮಸ್ಸನ್ನು ಕುರಿತು ಕರ್ಷಣ(ಸೆಳೆಯೋಣ) ಮಾಡುತ್ತಾನೆಂದರ್ಥ ; 'ಕೃಷಿರ್ಭೂವಾಚಕ ಶಬ್ದಃ ಣಶ್ಚ ನಿವೃತ್ತಿ ವಾಚಕಃ । ವಿಷ್ಣುಸ್ತದ್ಭಾವಯೋಗಾಚ್ಚ ಕೃಷ್ಣೋಭವತಿ ಶಾಶ್ವತಃ' ಎಂಬುವ ವ್ಯಾಸ ವಚನದಿಂದ ಪರಿಪೂರ್ಣಸುಖಜ್ಞಾನಾನಂದಾದಿ ರೂಪವುಳ್ಳವನೆಂದರ್ಥ. 'ಕೃಷತಿ , ವಿಲಿಖಿತಿ, ದಾರಯತಿ, ಮೋಹಪಟಲಮಿತಿ ಕೃಷ್ಣಃ' ಎಂಬುವ ಭಾಗವತಪ್ರಮಾಣದ್ವಾರಾ ಅಜ್ಞಾನಂಧಕಾರವೆಂಬ ಆವರಕವನ್ನು ಭೇದನಮಾಡಿ ಜ್ಞಾನವನ್ನು ಕೊಟ್ಟು ತದ್ವಾರಾ ಮೋಕ್ಷವನ್ನು ಕೊಡುವವನೆಂದರ್ಥ. ''ಸಕಲ ಲೋಕಕರ್ಷಣಾತ್ ಕೃಷ್ಣಃ'' ಎಂಬುವ ಗೀತಾಭಾಷ್ಯೋಕ್ತ ಪ್ರಮಾಣದ್ವಾರಾ ಸಮಸ್ತ ಪ್ರಪಂಚವನ್ನು ಶೆಳೆಯುವವನೆಂದರ್ಥ ; 'ಯತಃ ಕರ್ಷಸಿ ದೇವೇಶ ನಿಯಮ್ಯ ಸಕಲಂ ಜಗತ್ । ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನಃ ।' ಎಂಬುವ ಪುರಾಣವಾಕ್ಯದಿಂದ ಸಮಸ್ತಪ್ರಪಂಚವನ್ನು ನಿಯಮನದ್ವಾರಾ ಕರ್ಷಣಮಾಡುವನೆಂದರ್ಥ.

**(ಶ್ರೀ ತಿಮ್ಮಣ್ಣಾಚಾರ್ಯರು)ಕೇಶವಾದಿ ಮಂತ್ರಾರ್ಥಃ** :- **1.** ಕಃ ಬ್ರಹ್ಮಾ ಈಶಃ ರುದ್ರಃ ತೌ ಸೃಷ್ಟ್ಯಾದಿನಾ ವರ್ತಯತಿ ಪ್ರವರ್ತಯತೀತಿ ಕೇಶವಃ । ತದುಕ್ತಂ ಹರಿವಂಶೇ । ''ಹಿರಣ್ಯಗರ್ಭಃ ಕಃ ಪ್ರೋಕ್ತಃ ಈಶಃ ಶಂಕರ ಏವಚ । ಸೃಷ್ಟ್ಯಾದಿನಾ ವರ್ತಯಸಿ ತಸ್ಮಾತ್ ಕೇಶವೋ ಹರೇ'ತಿ॥ ಕೇಶಯೋಃ ವಾ ಗತಿ ಗಂಧನಯೋರಿತಿ ಧಾತುಃ ವಾ ಜ್ಞಾನಂ ಅಭೀಷ್ಟಂ ವಾ ಯಸ್ಮಾತ್ಕೇಶವ ಇತಿ ವಾ । ಕೇಶಾವವತೀತಿ ಕೇಶವಃ॥ (ಗೀತಾಭಾಷ್ಯೇ) ಕಃ ಈಃ ಲಕ್ಷ್ಮೀಃ ಈಶಃ । ತಾನ್ ಅವತೀತಿ ವಾ । ಆಕಾರಲೋಪೋನಿರ್ವಚನತ್ವಾತ್ । ಪ್ರಶಸ್ತ ಕೇಶವತ್ವಾದ್ವಾ ಕೇಶಿ ಮಾರಕತ್ವಾದ್ವಾ ಕೇಶವಃ॥ ಕಃ ವಾಯು ಈಶೋ ಏಷಾಂ ತೇ ಕೇಶಾಃ ವಾಯುದಾಸಾಃ ತೇಷಾಂ ವಾ ಜ್ಞಾನಂ ಯಸ್ಮಾದಿತಿ ಕೇಶವಃ॥

**2.** ನಾನಾ ಗುಣಾಃ ತದಾಶ್ರಯತ್ವಾದ್ವಾ ನಾನಾ ವೇದಾಃ ಪ್ರತಿಪಾದ್ಯತಯಾ ತದಯನತ್ವಾದ್ವಾ ನಾನಾಮುಕ್ತಾದಾತೃತಯಾ ತದಯನತ್ವಾದ್ವಾ ನಾನೋ ಮುಖ್ಯವಾಯುಃ ತದಯನತ್ವಾದ್ವಾ ನಾನ ಲಕ್ಷ್ಮೀಃ ತದಯನತ್ವಾದ್ವಾ ನಾರಂ ಸೃಷ್ಟ್ಯಾದ್ಯಷ್ಟಕಂ ತದಯನತ್ವಾದ್ವಾ ನಾನಾ ಆಪಃ ತದಯನತ್ವಾದ್ವಾ ನಾರಾಯಣಃ॥ ಏತಾನಿ ನಿರ್ವಚನಾನಿ ಅನುವ್ಯಾಖ್ಯಾನ ಶ್ರೀಮದ್ಭಾಷ್ಯಾದೌ ಸ್ಪಷ್ಟಾನಿ॥ **(3).** ಮಾಯಾಃ ಲಕ್ಷ್ಮ್ಯಾಃ ಧವಃ ಭರ್ತಾಃ ಮಾಂ ಧತ್ತೇ ಅವತೀತಿ ವಾ॥ ಮಾಂ ಜ್ಞಾನಂ ದಧತೀತಿ ಮಾಧಾಃ ಜ್ಞಾನಿನಃ ತಾನ್ ವರ್ತಯತೀತಿ ವಾ ಮಾಧವಃ॥ **(4.)** ಗೋಭಿರ್ವೇದವಾಕ್ಯೈಃ ವಿಂದತ ಇತಿ ವಾ ಗೋಭಿಃ ಗೋಗಣೈರ್ವಿಂದತ ಇತಿ ವಾ ಗಾಂ ಸ್ವರ್ಗಂ ಭೂಮಿಂಚ ವಿಂದತ ಇತಿ ವಾ ಗೋವಿಂದಃ ॥ **(5).** ವೇಷ್ಟಿಸ್ಸರ್ವಮಿತಿವಾ ಷಕಾರೋ ಬಲಂ ಣಕಾರಃ ಪ್ರಾಣಾತ್ಮೇತಿ ಶ್ರುತೇಃ ; ವಿಶೇಷೇಣ ಬಲಚೇಷ್ಟಕ ಇತಿ ವಾ ವಿಷ್ಣುಃ॥ **(6).**ಮಧುಂ ಸೂದಯತಿ ಸಂಹರತೀತಿ ವಾ ಮಧುಂ ಆನಂದಂ ಸುಷ್ಟುಂ ಉದಂ ಕರ್ಮ ನಯತಿ ಪ್ರಾಪಯತೀತಿ ವಾ ಮಧುಸೂದನಃ॥ **(7).** ತ್ರಯಃ ವಿಕ್ರಮಾಃ ಪಾದವಿಕ್ಷೇಪಾಃ ಯಸ್ಯೇತಿ ವಾ ತ್ರಿಷು ಲೋಕೇಷು ವಿಕ್ರಮಃ ಪರಾಕ್ರಮೋ ಯಸ್ಯೇತಿ ವಾ । ತ್ರಿಷು ಭೂತಭವಿಷ್ಯದ್ವರ್ತಮಾನಕಾಲೇಷು ಅಪ್ರತಿಹತಃ ಕ್ರಮ ಇತಿ ವಾ । ತ್ರಿಷುಧಾಮಸು ವಿಶೇಷೇಣ ಕ್ರಮತ ಇತಿ ವಾ ತ್ರಿಕಾಲೇಷು ಧಾಮಸು ವಿನಾ ಗರುಡೇಣ ಕ್ರಮತ ಇತಿ ತ್ರಿವಿಕ್ರಮಃ॥ **(8).** ವಾಮಂ ಸೌಂದರ್ಯಂ ವಾಮಂ ದ್ರವಿಣಂ ವಾಮಂ ಕಾಮಂ ನಯತಿ ವಾ ಪ್ರಾಪಯತೀತಿ ವಾ ವಾಮನರೂಪತ್ವಾದ್ವಾಮನಃ॥ **(9).** ಶ್ರಿಯಂ ಲಕ್ಷ್ಮೀಂ ವಕ್ಷಸಿ ಶ್ರಿಯಂ ಕಾಂತಿಂ ವಪುಷಿ ಶ್ರಿಯಂ ವೇದವಾಣಿಂ ವಾಚಿ ಧರತೀತಿ ವಾ । ಶ್ರೀಃ ಧರಾ ಯಸ್ಯೇತಿ ವಾ ಶ್ರೀಧರಃ॥**(10).**ಹೃಷೀಕಸ್ಯ ಇಂದ್ರಿಯಗಣಸ್ಯ ಈಶ ಇತಿ ವಾ ಹೃಷ ಕರ್ಷಣ ಇತಿ ಧಾತೋಃ ಹೃಷ್ಟಾಃ ಈಃ ಲಕ್ಷ್ಮೀ ಕೌ ಬ್ರಹ್ಮವಾಯೂ ಯಸ್ಯೇತಿ ವಾ ಹೃಷಿಕೇಶಃ॥ **(11).** ಪದ್ಮಂ ನಾಭೋ ಯಸ್ಯೇತಿ ವಾ ಪದೋಃ ಮಾಯಸ್ಯೇತಿ ವಾ

ಪದ್ಮಃ ನ ವಿದ್ಯತೇ ಆಭಾ ಆ ಕಾಂತಿಃ ಯಸ್ಯೇತಿ ವಾ ದ್ವಾ ನಞೌ ಪ್ರಕೃತಮರ್ಥಂ ಸಾತಿಶಯಂ ಗಮಯತ ಇತಿ ನಾಭಃ ಅತಿಕಾಂತಿಮಾನ್ ಪದ್ಮಶ್ಚಾಸೌ ನಾಭಶ್ಚೇತಿ ವಾ ಪದ್ಮನಾಭಃ ॥ **(12).** ದಾಮದರೇ ಯಸ್ಯೇತಿ ವಾ ದದಾತೀತಿ ದಃ ಆ ಸಮ್ಯಕ್ ಮಾಂ ಜ್ಞಾನಂ ಯಸ್ಯ ಆಮಃ ಸರ್ವಜ್ಞಃ ಉಃ ಉತ್ಕೃಷ್ಟಃ ದರಃ ಶಂಖೋ ಯಸ್ಯೇತ್ಯುದರಃ ದಶ್ಚಾಸೌ ಆಮಶ್ಚಾಸೌ ಉದರಶ್ಚೇತಿ ವಾ ದದಾತಿ ಸರ್ವಾಭೀಷ್ಟಾಮಿತಿ ದಾಮಾ ಲಕ್ಷ್ಮೀ ಯಸ್ಯೇತಿ ದಾಮಃ ದಾಮಶ್ಚಾಸೌ ಉದರಶ್ಚೇತಿ ವಾ ದಾ ದಾನಂ ಮಾ ಜ್ಞಾನಂ ಯೇಷಾಂ ತೇ ದಾಮಾಃ ದಾತಾರೋ ಜ್ಞಾನಿನಃ ತೇಷಾಮುದಂ ಸತ್ಕರ್ಮ ತದನುಸಾರೇಣರಾತಿ ದದಾತೀತಿ ವಾ ಉತ್ ಉತ್ಕೃಷ್ಟಾನಿ ಆರಾಣಿ ಯಸ್ಯೇತ್ಯುದರಂ ಚಕ್ರಂ ಆಮಂ ತೇಜಸಾಮಿತಿ ರಹಿತಂ ದಂ ಆಮಂ ಆಮಂ ಉದರಂ ಯಸ್ಯೇತಿ ವಾ ದಾಮೋದರಃ ॥ **(13). ಸಂ** ಸಮ್ಯಕ್ ಸರ್ವಂ ಸ್ವಾತ್ಮಾನಂ ಪ್ರತಿಕರ್ಷಯತೀತಿ ಸಂಕರ್ಷಣಃ। ಕಾರೋ ಬಲಂ ಷಕ್ತಾರಃ ಪ್ರಾಣ ಆತ್ಮೇತಿ ವಾ ಸಂಕರ್ಷಣಃ॥ **(14).** ವಾ ಗತಿ ಗಂಧನಯೋರಿತಿ ವಾ ಗತಿಃ ಅಸು ವಾಯುನಾ ಯಸ್ಯೇತಿ ವಾಸುಃ ವಾಯುವಾಹನ ಇತಿ ಯಾವತ್। ವಾಸುಶ್ಚಾಸೌ ದೇವಶ್ಚೇತಿ ವಾ ವಸತಿ ಸರ್ವತ್ರೇತಿ ವಾಸುಃ ವಾಸುಶ್ಚಾಸೌ ದೇವಶ್ಚೇತಿ ವಾ। ವಾ ಜ್ಞಾನಂ ಯೇಷಾಂ ತೇ ವಾಃ ಜ್ಞಾನಿನಃ ಅರ್ಶ ಆದಿಭ್ಯೋ ಅಜಂತಶ್ಚೇತಿ ಅಸವಶ್ಚ ಜ್ಞಾನಿನಃ ಪ್ರಾಣಿನಃ ಇತ್ಯರ್ಥಃ। ಅಸೂನಾಂ ದೇವಃ ಕ್ರೀಡನಂ ಯಸ್ಮಾದಿತಿ ವಾ ವಾಸಾಸೂತೇ ದೇವನಾದ್ವಾಸುದೇವ ಇತಿ ಕರ್ಮನಿರ್ಣಯೋದಾಹೃತ ಪ್ರಮಾಣಸಾನುಸಾರೇಣ ನಿರ್ವಚನಾಂತರಾಣಿ ದ್ರಷ್ಟವ್ಯಾನಿ ॥ **(15).** ಪ್ರಕೃಷ್ಟಾದ್ಯುತಿಮತ್ವಾದ್ವಾ ಪ್ರಕೃಷ್ಟ ಸ್ವರ್ಗವಂತೋ ಇಂದ್ರಾದ್ಯಾಃ ಪ್ರದ್ಯವಃ ತೈಃ ಪ್ರವಚನ-ಶ್ರವಣಧ್ಯಾನಸಖ್ಯಸಾರಥ್ಯಾದಿ ನಾಮ್ನಾ ಯಂ ತೇ ಅಭ್ಯಾಸ್ಯತ ಇತಿ ವಾ ಪ್ರದ್ಯುಮ್ನಃ॥ **(16).** ನಿರುದ್ಧೋ ನ ಭವತೀತಿ ವಾ ಅನಿಭಿಃ ಪ್ರಾಣಿಭಿಃ ರುಧ್ಯತೇ ಪೃಯತೇ(?) ವಾ ಅನಿರುದ್ಧಃ॥ ಅನಿನಾಂ ಪ್ರಾಣಿನಾಂ ಆವೃದ್ಧಿಃ ಸಮೃದ್ಧಿಃ ಯಸ್ಯೇತಿ ವಾ ಅನಿರುದ್ಧಃ ॥ **(17).** ಪುರುಷಾಭ್ಯಾಂ ಕ್ಷರಾಕ್ಷರಾಭ್ಯಾಂ ಉತ್ತಮ ಇತಿ ವಾ ಪೂರ್ಣಷಡ್ಗುಣತ್ವಾದ್ವಾ ಪುರು ಶೇತ ಇತಿ ಪುರುಷಃ ಸ ಚಾಸೌ ಉತ್ತಮ ಇತಿ ವಾ ಪುರುಷೋತ್ತಮಃ। ಪುರುಷಾಣಾಂ ಬ್ರಹ್ಮಾದೀನಾಂ ಉತ್ಕೃಷ್ಟಾತತಾವ್ಯಾಪ್ತಾ ಮಾ ಜ್ಞಾನಂ ಯಸ್ಮಾದ್ಭವತೀತಿ ವಾ ಪುರುಷೋತ್ತಮಃ॥ **(18).** ಅಧಃಕೃತಂ ಅಕ್ಷಜಂ ಇಂದ್ರಿಯಜನ್ಯಂ ಯಸ್ಯೇತಿ ಅಧೋಕ್ಷಜಃ। ಸ್ವಪ್ರಸಾದಮಂತರೇಣ ಪ್ರತ್ಯಕ್ಷಾವೇದ್ಯ ಇತಿ ವಾ ಅಥಾ ಮಂಗಲರೂಪಂ ಉಕ್ಷಃ ಅಭಿಷೇಚನಂ ಯೇಷಾಂ ತೇ ದಶರಥಾದ್ಯಾ ರಾಜಾನಃ ಅಧೋಕ್ಷಾಃ ತೇಭ್ಯೋ ಜಾತ ಪ್ರಾದುರ್ಭೂತ ಇತಿ ವಾ ॥ **(19).** ನರವತ್ ಸಿಂಹವತ್ ವಪುರ್ಯಸ್ಯೇತಿ ವಾ ನರೀಯಂತ ಇತಿ ನರಾಃ ಅವಧ್ಯಾಃ ದೈತ್ಯಾಃ ಹಿರಣ್ಯಕಶಿಪ್ವಾದಯಃ ತಾನ್ ಹಿನಸ್ತೀತಿ ವಾ ನಾರಸಿಂಹಃ॥ **(20).** ನ ವಿದ್ಯತೇ ದೇಶತಃ ಕಾಲತಃ ಗುಣತಃ ಚ್ಯುತಿ ರ್ಯಸ್ಯೇತಿ ಅಚ್ಯುತಃ ॥ **(21).** ಜನನಮರ್ದನಯತೀತಿ ವಾ ಜನಾನ್ ದುಷ್ಟಜನಾನ್ ಅರ್ದಯತೀತಿ ವಾ ಜನಾರ್ದನಃ ॥ **(22).** ಉಪ ಸಮೀಪೇ ಇಂದ್ರೋ ಯಸ್ಯೇತಿ ವಾ ಉಪಾಧಿಃ ಇಂದ್ರ ಇತಿ ವಾ ॥ **(23).** ಹರತಿ ಸರ್ವಾರಿಷ್ಟಮಿತಿ ವಾ ಹರತಿ ದುಷ್ಟಾನಿತಿ ವಾ ॥ ಹರತಿ ಸರ್ವಾನಿಷ್ಟ ಮಿತಿ ವಾ ಹರಿಃ। **(24).** ಕೃಷಿಃ ಭೂವಾಚಕ ಶಬ್ದೇಣಶ್ಚ ನಿವೃತ್ತಿವಾಚಕಃ। ತಯೋರೈಕ್ಯಂ ಪರಬ್ರಹ್ಮ ಕೃಷ್ಣ ಇತ್ಯಭಿಧೀಯತ ಇತಿ ವಾ॥ ಯತಃ ಕರ್ಷಸಿ ದೇವೇಶ ನಿಯಮಾತ್ಸಕಲಂ ಜಗತ್। ಅತೋ ವದಂತಿ ಮುನಯಃ ಕೃಷ್ಣಂ ತ್ವಾಂ ಬ್ರಹ್ಮವಾದಿನಃ ಇತಿ ವಾ ಕೃಷ್ಣಃ ॥ ಏಷಾಂ ನಿರ್ವಚನಾಂತರಾಣಿ ಆಚಮನೇ ನಿರ್ವಚನಾಂತರಾಣಿ ಉಕ್ತ ನಿರ್ವಚನೇಷ್ವೇವ ಪ್ರಮಾಣಾಂತರಾಣಿ ಸಂತಿ॥ ವಿಸ್ತರಭಯಾದುಪರಮ್ಯತೇ॥ ಇತ್ಯಾಚಮನವಿಧಿಃ॥

ಪ್ರಶ್ನೆ :-**ಈ ಕೇಶವಾದಿ ಚತುರ್ವಿಂಶತಿ ನಾಮಗಳಿಂದ ನ್ಯಾಸ ಕ್ರಮ ಹ್ಯಾಗೆ ?**

ಶ್ರೀ ಮಧ್ವಾಂತರ್ಯಾಮಿನ್॥

1) ಓಂ ಕೇಶವಾಯ-ಸ್ವಾಹಾಓಂ

2) ಓಂ ನಾರಾಯಣಾಯ ಸ್ವಾಹಾಓಂ

3) ಓಂಮಾಧವಾಯ-ಸ್ವಾಹಾಓಂ ((ಎಂದು ಮೂರಾವರ್ತಿ ನೀರನ್ನು ಉದ್ಧರಣೆಯಿಂದ ತೆಗೆದುಕೊಂಡು ಕುಡಿಯಬೇಕು))

4) ಓಂ ಗೋವಿಂದಾಯ ನಮಃ

5) ಓಂ ವಿಷ್ಣವೇ ನಮಃ (ಕೈಗಳನ್ನು ತೊಳೆದುಕೊಳ್ಳಬೇಕು. ಮೊದಲು ಮ್ಯಾಲೆ ಬಲಗೈ ಕೆಳಗೆ ಎಡಗೈ ; ನಂತರ ಮ್ಯಾಲೆ ಎಡಗೈ ಕೆಳಗೆ ಬಲಗೈ )

6) ಓಂ ಮಧುಸೂದನಾಯ ನಮಃ (ಮೇಲಿನ ತುಟಿಯನ್ನು ತರ್ಜನೀ ಬೆರಳ ಪಕ್ಕದಿಂದ ಮುಟ್ಟಬೇಕು)

7) ಓಂ ತ್ರಿವಿಕ್ರಮಾಯ ನಮಃ (ಕೆಳ ತುಟಿಯನ್ನು ತರ್ಜನೀ ಬೆರಳ ಪಕ್ಕದಿಂದ ಮುಟ್ಟಬೇಕು)

8) ಓಂವಾಮನಾಯ-ನಮಃ (ಬಲ ಕೆನ್ನೆಯನ್ನು ಅಂಗೈಯಿಂದ ಮುಟ್ಟಬೇಕು)

9) ಓಂ ಶ್ರೀಧರಾಯ-ನಮಃ (ಎಡ ಕೆನ್ನೆಯನ್ನು ಅಂಗೈಯಿಂದ ಮುಟ್ಟಬೇಕು)

10) ಓಂ ಹೃಷಿಕೇಶಾಯ-ನಮಃ (ಕೈಗಳನ್ನು ಜೋಡಿಸಿ ಪ್ರೋಕ್ಷಣ ಮಾಡಬೇಕು)

11) ಓಂ ಪದ್ಮನಾಭಾಯ-ನಮಃ (ಎರಡು ಕಾಲಿನ ಮಂಡಿಗಳನ್ನು ಬಲಗೈಯಿಂದ ಮುಟ್ಟಬೇಕು)

12) ಓಂ ದಾಮೋದರಾಯ-ನಮಃ (ಜುಟ್ಟನ್ನು ಮುಟ್ಟಬೇಕು)

13) ಓಂ ಸಂಕರ್ಷಣಾಯ-ನಮಃ (ಮೂಗಿನ ತುದಿಯನ್ನು ಮಧ್ಯಮ ಬೆಟ್ಟಿನ ಹಿಂಭಾಗದ ಗೆಣ್ಣಿನಿಂದ ಮುಟ್ಟಬೇಕು)

14) ಓಂ ವಾಸುದೇವಾಯ ನಮಃ (ಬಲ ಮೂಗಿನ ಹೊಳ್ಳೆಯನ್ನು ಅಂಗುಷ್ಠ-ತರ್ಜನಿಗಳಿಂದ ಮುಟ್ಟಬೇಕು)

15) ಓಂ ಪ್ರದ್ಯುಮ್ನಾಯ ನಮಃ ( ಎಡ ಮೂಗಿನ ಹೊಳ್ಳೆಯನ್ನು ಅಂಗುಷ್ಠ-ತರ್ಜನಿಗಳಿಂದ ಮುಟ್ಟಬೇಕು)

16) ಓಂ ಅನಿರುದ್ಧಾಯ ನಮಃ (ಬಲಕಣ್ಣನ್ನು ಅಂಗುಷ್ಠ-ಮಧ್ಯಮಗಳಿಂದ ಮುಟ್ಟಬೇಕು)

17) ಓಂಪುರುಷೋತ್ತಮಾಯ ನಮಃ( ಎಡ ಕಣ್ಣನ್ನು ಅಂಗುಷ್ಠ-ಮಧ್ಯಮಗಳಿಂದ ಮುಟ್ಟಬೇಕು)

18) ಓಂಅಧೋಕ್ಷಜಾಯ-ನಮಃ (ಬಲಕಿವಿಯನ್ನು ಅಂಗುಷ್ಠ-ಅನಾಮಿಕಗಳಿಂದ ಮುಟ್ಟಬೇಕು)

19) ಓಂ ನಾರಸಿಂಹಾಯ-ನಮಃ (ಎಡ ಕಿವಿಯನ್ನು ಅಂಗುಷ್ಠ-ಅನಾಮಿಕಗಳಿಂದ ಮುಟ್ಟಬೇಕು)

20) ಓಂ ಅಚ್ಯುತಾಯ-ನಮಃ( ಹೊಕ್ಕಳನ್ನು ಹೆಬ್ಬೆಟ್ಟು ಕಿರುಬೆಟ್ಟುಗಳಿಂದ ಮುಟ್ಟಬೇಕು)

21) ಓಂ ಜನಾರ್ದನಾಯ ನಮಃ( ಹೃದಯವನ್ನು ಅಂಗೈಯಿಂದ ಮುಟ್ಟಬೇಕು)

22) ಓಂ ಉಪೇಂದ್ರಾಯ ನಮಃ (ಶಿರಸ್ಸನ್ನು ಸಮಸ್ತ ಬೆಟ್ಟುಗಳಿಂದ ಮುಟ್ಟ ಬೇಕು)

23) ಓಂ ಹರಯೇ ನಮಃ( ಸಮಸ್ತ ಬೆಟ್ಟುಗಳನ್ನು ಮುಚ್ಚಿ ಬಲ ಭುಜವನ್ನು ಮುಟ್ಟಬೇಕು)

24) ಓಂ ಶ್ರೀ ಕೃಷ್ಣಾಯ ನಮಃ( ಸಮಸ್ತ ಬೆಟ್ಟುಗಳನ್ನು ಮುಚ್ಚಿ ಎಡ ಭುಜವನ್ನು ಮುಟ್ಟಬೇಕು)

ಪ್ರಶ್ನೆ:- **ಈ ನಾಮಗಳಿಂದ ಆಯಾಸ್ಥಳಗಳನ್ನು ಸ್ಪರ್ಶಮಾಡಲಿಕ್ಕೆ ಏನು ಪ್ರಮಾಣ ?**

ಉ:- ಪ್ರಯೋಗಸಾರದಲ್ಲಿ ಈ ಕೆಳಗೆ ಹೇಳಿದ ಪ್ರಕಾರ ಪ್ರಮಾಣ ಉಕ್ತವಾಗಿದೆ. '' ಕೇಶವಾದಿ ತ್ರಿಭಿಃ ಪೀತ್ವಾ ದ್ವಾಭ್ಯಾಂ ಪ್ರಕ್ಷಾಳಯೇತ್ಕರೌ । ದ್ವಾಭ್ಯಾಂಮೋಷ್ಠೌ ಚ ಸಂಮೃಜ್ಯ ದ್ವಾಭ್ಯಾಂ ಸಂಮಾರ್ಜಯೇದ್ಧನು ॥ ಏಕೇನ ಹಸ್ತೌ ಮುಕುಲೀಕೃತ್ಯೈಕೇನ ಪದೇ ಸ್ಪೃಶೇತ್ । ಏಕೇನ ತು ಶಿರಃ ಸ್ಪೃಷ್ಟ್ವಾ ನಾಸಿಕಾಧಃ ಪರೇಣಚ । ತರ್ಜನ್ಯಂಗುಷ್ಠಯೋಗೇನ ನಾಸಾರಂಧ್ರದ್ವಯಂ ಸ್ಪೃಶೇತ್ । ಮಧ್ಯಮಾಂಗುಷ್ಠ ಯೋಗೇನ ದ್ವಾಭ್ಯಾಂ ನೇತ್ರದ್ವಯಂ ಸ್ಪೃಶೇತ್। ಅಂಗುಷ್ಠಾನಾಮಿಕಾಭ್ಯಾಂ ಚ ಯೋಗೇನ ಶ್ರವಣೇಸ್ಪೃಶೇತ್ । ಕನಿಷ್ಠಾಂಗುಷ್ಠಯೋರ್ನಾಭಿಂ ನಾಮ್ನೈಕೇನ ಸ್ಪೃಶೇತ್ಸುಧೀಃ । ಜನಾರ್ದನೇನ ನಾಮ್ನೈವ ಹೃದಯಂ ತು ತಥೈವ ಚ । ಅಂಗುಲೀಭಿಶ್ಚ ಸರ್ವಾಭಿರುಪೇಂದ್ರೇಣ ಶಿರಃ ಸ್ಪೃಶೇತ್ । ದಕ್ಷಹಸ್ತಸ್ಯ ಮೂಲಂ ತು ಹರಿನಾಮ್ನೈವ ಸಂಸ್ಪೃಶೇತ್ । ಕನಿಷ್ಠಾಂಗುಷ್ಠಯೋಗೇನ ವಾಮಮೂಲಂ ಸ್ಪೃಶೇದನು ॥'' ಎಂದು ಹೇಳಿರುವ ಕಡೆಯಿಂದ ಮೇಲಿನ ಕ್ರಮಗಳು ಉಕ್ತವಾಗಿವೆ.

ಪ್ರಶ್ನೆ:- **ಈ ಕೇಶವಾದಿ ಭಗವನ್ನಾಮಗಳು ಯಾವರೀತಿಯಿಂದ ಉಚ್ಚಾರ ಮಾಡಬೇಕು.?**

''ಶ್ರೀಪೂರ್ವಕೈರ್ನಾಮಭಿಸ್ತು ನಮೋಂತೈಶ್ಚ ತತಃ ಕ್ರಮಾತ್ ।' ಯಂತ ಪ್ರಮಾಣವಿರುವುದರಿಂದ ಮೊದಲು 'ಶ್ರೀ' ಕಡೆಗೆ 'ನಮಃ' ಎಂದು ಉಚ್ಚಾರ ಮಾಡತಕ್ಕದ್ದು . ಈ ಪ್ರಕಾರ ಸಂಧ್ಯಾಕರ್ಮ ಪ್ರಾರಂಭದಲ್ಲಿಯೂ ಸಮಾಪ್ತಿಯಲ್ಲಿಯೂ ಎರಡಾವರ್ತಿ ಉಚ್ಚಾರಮಾಡಿ ಆಚಮನ ಮಾಡತಕ್ಕದ್ದು.

ಪ್ರಶ್ನೆ:- **ಆಚಮನ ಮಾಡುವ ಕ್ರಮ ಹ್ಯಾಗೆ ?**

''ಅಂತರ್ಜಾನುಃ ಶುಚೌ ದೇಶೇ ಉಪವಿಷ್ಟ ಉದಙ್ಮುಖಃ । ಪ್ರಾಶ್ಯ ಬ್ರಾಹ್ಮೇಣತೀರ್ಥೇನ ದ್ವಿಜೋ ನಿತ್ಯಮುಪಸ್ಪೃಶೇತ್ ।'' ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿದೆ. 'ಸುದೇಶೇ ಉಪವಿಶ್ಯೈವ ಪ್ರಾಙ್ಮುಖೋ ಬ್ರಹ್ಮಸೂತ್ರವಾನ್ । ಬದ್ಧಾಶಿಖಾಂ ಕುಶಕರೋದ್ವಿಜೋ ಜಲಮುಪಸ್ಪೃಶೇತ್ । ಎಂದು ಭಾರದ್ವಾಜಸ್ಮೃತಿಯಲ್ಲಿ ಇದೆ. ''ಭೋಜನೇ ಹವನೇ ದಾನೇ ಉಪಹಾರೇಪ್ರತಿಗ್ರಹೇ । ಸಂಧ್ಯಾತ್ರಯೇಂಬು ಪಾಸನೇ ಚ ಪೂರ್ವಂ ಪಶ್ಚಾದ್ವಿರಾಚಮೇತ್ ।'' ಎಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳುತದೆ . ಆದ್ದರಿಂದ ಕೈಕಾಲು ನೆಟ್ಟಗೆ ಕುಳಿತುಕೊಂಡು ಊರ್ಧ್ವಪುಂಡ್ರವನ್ನು, ಮುದ್ರಾವನ್ನು ಧಾರಣಮಾಡಿ , ಉತ್ತರೀಯವನ್ನು ಹೊದ್ದುಕೊಂಡು, ತಲೆಕೂದಲು ಗಂಟುಹಾಕಿಕೊಂಡು, ಆಸನದಲ್ಲಿ ಕೂತುಕೊಂಡು, ಪೂರ್ವಾಭಿಮುಖನಾಗಿ, ಪವಿತ್ರವನ್ನು ಧರಿಸಿ, ಹೆಬ್ಬೊಟ್ಟುಕಿರುಬೊಟ್ಟುಗಳನ್ನು ಬಿಟ್ಟು ಬಲಗೈಯನ್ನು ಗೋಕರ್ಣಾಕಾರಮಾಡಿ, ಸ್ವಚ್ಛವಾದ ಉದಕವನ್ನು ಉದ್ದಿನಕಾಳು ಮುಣುಗೋ ಅಷ್ಟುಮಾತ್ರ ಹೆಚ್ಚುಕಡಿಮೆ ಇಲ್ಲದಂತೆ ಹಾಕಿಕೊಂಡು, ಆ ಉದಕವನ್ನು ನೋಡುತ್ತಾ , ಬ್ರಹ್ಮತೀರ್ಥದಿಂದ ಆಚಮನ ಮಾಡತಕ್ಕದ್ದು. ಮತ್ತು ಊರ್ಧ್ವಪುಂಡ್ರವನ್ನು ಮೊದಲು ಧಾರಣಮಾಡಿ ನಂತರ ಸಂಧ್ಯಾವಂದನೆಯನ್ನು ಮಾಡತಕ್ಕದ್ದು . ಏನು ಕಾರಣವೆಂದರೆ, ಧೃತೋರ್ಧ್ವಪುಂಡ್ರದೇಹಸ್ತು ಸಂಧ್ಯೋಪಾಸನಂ ಆಚರೇತ್ ॥' ಎಂದು ವಸಿಷ್ಠಸ್ಮೃತಿಯಲ್ಲಿದೆ.

'ಉಪಾಸೀತದ್ವಿಜಸ್ಸಂಧ್ಯಾ ಪ್ರಾಙ್ಮುಖೌದಙ್ಮುಖೌ ವಾ ಎಂದು ವಸಿಷ್ಠಸ್ಮೃತಿಯಲ್ಲಿದೆ. ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಸಂಧ್ಯಾಮಾಡತಕ್ಕದ್ದು ಎಂದು ಅರ್ಥ.

'ಅಥಾಚಮ್ಯಕುಶೈರ್ಯುಕ್ತ ಆಸನೇ ಸಮುಪಸ್ಥಿತಃ। ಕರಸಂಪುಟಕಂ ಕೃತ್ವಾ ಸಂಧ್ಯಾನಿತ್ಯಂ ಸಮಾಚರೇತ್ ।' ಎಂದು ಸಂವರ್ತಕಸ್ಮೃತಿಯಲ್ಲಿದೆ. ಕುಶಸಹಿತವಾಗಿ ಆಚಮನಮಾಡಿ ಆಸನದಲ್ಲಿ ಕುಳಿತು ಕೈಗಳು ಜೋಡಿಸಿ ನಿತ್ಯವೂ ಸಂಧ್ಯಾವಂದನೆಯನ್ನು ಮಾಡತಕ್ಕದ್ದೆಂದು ಅರ್ಥ. 'ಸಗ್ರಂಥಿಕುಶಹಸ್ತೈಸ್ತು ಕರ್ಮಾಂಗಾಚಮನಂ ಚರೇತ್' ಎಂದು ಭಾರದ್ವಾಜ- ಸ್ಮೃತಿಯಲ್ಲಿದೆ.

ಪ್ರಶ್ನೆ:- **ಆಚಮನ ಉದಕದಲ್ಲಿ ಏನಾದರೂ ಯಂತ್ರಬರಿತಕ್ಕದ್ದಾ ಏನು ?**

ಉತ್ತರ:- ಆಚಮನ ಉದಕದಲ್ಲಿ ಈ ಕೆಳಗೆ ಬರೆದಿರುವ ಯಂತ್ರವನ್ನು ಬರೆಯಬೇಕು. ಶಂಖ ಸ್ಮೃತಿಯಲ್ಲಿ 'ಆದೌ ತ್ರಿಕೋಣಮಾಲಿಖ್ಯ ತನ್ಮಧ್ಯೇ ಪ್ರಣವಂ ಲಿಖೇತ್ । ಕೋಣಪಾರ್ಶ್ವೇ ವ್ಯಾಹೃತಯಃ ಕೋಣಾಗ್ರೇ ಪ್ರಣವಂ ನ್ಯಸೇತ್ । ಮಧ್ಯಮಾಂಗುಲಿನಾ ತತ್ರ ಉಲ್ಲಿಖೇತ್ತು ಯಥಾವಿಧಿ। ಲಿಖಿತ್ವಾ ಯಂತ್ರರಾಜಂ ತು ಪಶ್ಚಾದಾಚಮನಂ ಚರೇತ್ ॥'' ಎಂದು ಪ್ರಮಾಣ ವಿರುವುದರಿಂದ ಮೊದಲು ತ್ರಿಕೋಣವನ್ನು ಬರೆದು ಅದರ ಮಧ್ಯದಲ್ಲಿ ಓಂಕಾರವನ್ನು ಬರೆಯಬೇಕು. ಕೋಣಪಾರ್ಶ್ವಗಳಲ್ಲಿ ವ್ಯಾಹೃತಿಗಳನ್ನು ಕೋಣಾಗ್ರದಲ್ಲಿ ಓಂಕಾರವನ್ನು ನಡುವಿನ (ಮಧ್ಯದ)ಬೆಟ್ಟಿನಿಂದ ಬರೆಯಬೇಕು. ಇದಕ್ಕೆ ಯಂತ್ರರಾಜವೆಂದು ಹೆಸರು. ಮೊದಲು ಉದಕದಲ್ಲಿ ಈ ಯಂತ್ರವನ್ನು ಬರೆದು ನಂತರ ಆ ಉದಕವನ್ನು ಆಚಮನಮಾಡತಕ್ಕದ್ದು.

ಪ್ರಶ್ನೆ :- **ಆಚಮನ ಯೋಗ್ಯ ಜಲವು ಯಾವುದು?**

ಬೋಧಾಯನಸೂತ್ರದಲ್ಲಿ'' ನಬುದ್ಬುಧಾಭಿರ್ನಫೇನಾಭಿರ್ನ ಉಷ್ಣಾಭಿರ್ನಕ್ಷಾರಾಭಿನವಿವರ್ಣಾಭಿರ್ನಕಲುಷಾಭಿರ್ನೋಚ್ಛಿಷ್ಟಾಭಿಃ'' ಎಂದು ಹೇಳಿರುವಕಾರಣ ಗುಳ್ಳೆಗಳು ಇಲ್ಲದ, ನುರು(ನೊರೆ)ಗು ಇಲ್ಲದ, ಉಷ್ಣವಾಗದ, ಉಪ್ಪಿಲ್ಲದ ,ವಿವರ್ಣ ಇಲ್ಲದ, ಕೆಸರು ಇಲ್ಲದ , ಉಚ್ಛಿಷ್ಟವಲ್ಲದ ಉದಕವು ಆಚಮನಕ್ಕೆ ಯೋಗ್ಯವಾದುದು.

ಪ್ರಶ್ನೆ:- **ಆಚಮನಕ್ಕೆ ನಿಷಿದ್ಧಜಲವಾವುದು ?**

ವಿಷ್ಣುತೀರ್ಥೀಯದಲ್ಲಿ ಸಂವರ್ತನ ವಚನ ''ಅಗ್ನಿತಪ್ತಂ ಚ ದುರ್ಗಂಧಂ। ತಥಾ ಬುದ್ಬುದಫೇನಯುತ್ । ಏಲಾದಿವಾಸಿತಂ ಕ್ಷಾರಂ। ಜಲಂಶೌಚಾವಶೇಷಿತಂ। ಛನ್ನಂ ಪರ್ಯುಷಿತಂ ಸ್ಪೃಷ್ಟಂ ತ್ಯಜೇಚ್ಚ ಕ್ರಿಮಿಸಂಯುತಂ। ದೇವಾಭಿಷಿಕ್ತಶೇಷಂ ಚ। ತ್ಯಜೇದಾಚಮನಂ ಜಲಂ'' ಎಂದು ಇರುವುದರಿಂದ, ಬೆಂಕಿಮೇಲೆ ಕಾಸಿದ, ಕೆಟ್ಟವಾಸನೆಯುಳ್ಳ , ಅದೇಪ್ರಕಾರ ನುರುಗುಗಳುಳ್ಳ , ಯಾಲಕ್ಕಿಮೊದಲಾದ ವಾಸನಾದ್ರವ್ಯಮಿಶ್ರಿತವಾದ, ಉಪ್ಪು ಇರುವ, ಶೌಚಶೇಷವಾದಂತಹ, ಮುಚ್ಚಿಟ್ಟ, ತಂಗಳು ಆದ, ಮತ್ತೊಬ್ಬರು ತಾಕಿದ, ಹುಳದಿಂದ ಮಿಶ್ರವಾದ, ದೇವರ ಅಭಿಷೇಕ ಶೇಷವಾದ, ಮತ್ತೊಬ್ಬರು ಆಚಮನಮಾಡಿದ್ದ ಜಲ ಆಚಮನಕ್ಕೆ ಕೂಡದು.

ಪ್ರಶ್ನೆ:- **ಆಚಮನಮಾಡುವ ಪುರುಷನು ತಾನು ಯಾವರೀತಿಯಿಂದ ಇದ್ದು ಆಚಮನ ಮಾಡಬೇಕು ?**

ಬೋಧಾಯನ ಸೂತ್ರದಲ್ಲಿ, ' ನ ಹಸನ್, ನಪ್ರಹ್ವೋ, ನ ಮುಕ್ತಶಿಖೋ, ನಾಬದ್ಧಕಚ್ಛೋ, ನ ಬಹಿರ್ಜಾನುಃ , ನ ವೇಷ್ಟಿತಶಿರಾಃ, ನ ಬದ್ಧಕಕ್ಷೋ , ನತ್ವರಮಾಣೋ, ನಾಯಜ್ಞೋಪವೀತಿ, ನ ಪ್ರಸಾರಿತಪಾದಃ, ಶಬ್ದಮಕುರ್ವನ್'' ಎಂದಿರುವುದರಿಂದ, ನಗುತ್ತಾ ಇರಬಾರದು, ಬಗ್ಗಿರ ಬಾರದು, ನಮಸ್ಕಾರಮಾಡುತ್ತಾ ಇರಬಾರದು, ತಲೆಗಂಟುಬಿಚ್ಚಿರಬಾರದು, ಕಚ್ಚೆ ಬಿಚ್ಚಿಕೊಂಡಿರ ಬಾರದು, ಮೊಳಕಾಲುಗಳಿಂದ ಕೈಗಳು ಹೊರಗೆ ಚಾಚಿರಬಾರದು, ತಲೆಗೆ ಬಟ್ಟೆ ಸುತ್ತಿರಬಾರದು, ಕೊಂಕಳುಗಳು ಹೊರಗೆ ಬಿಟ್ಟಿರಬಾರದು, ತೀವ್ರವಿರಬಾರದು, ಯಜ್ಞೋಪವೀತರಹಿತನಾಗಿ ಇರಬಾರದು, ಕಾಲು ಚಾಚಿರಬಾರದು, ಶಬ್ದಮಾಡಬಾರದು, ಈ ಪ್ರಕಾರ ಆಚಮನ ಮಾಡತಕ್ಕದ್ದು.

ಪ್ರಶ್ನೆ:- **ಆಚಮನ ಕಾಲದಲ್ಲಿ ಯಾವಕಾರ್ಯಗಳನ್ನು ಬಿಡಬೇಕು ?**

ಉ:- ವಿಷ್ಣುತೀರ್ಥೀಯದಲ್ಲಿ, ''ತಿಷ್ಠನ್ ಮೇಹಂ ಚ ಸಂಜಲ್ಪನ್ । ಶೃಣ್ವನ್ ದುರ್ಜನ ಭಾಷಣಂ। ಅನ್ಯಂಸ್ಪೃಶನ್‌ದಿಶಂಪಶ್ಯನ್ । ಪಶ್ಯನ್ ದುಷ್ಟಪದಾರ್ಥಕಂ ॥ ಶಯಾನಃ ಪಾದುಕಸ್ಥಶ್ಚ। ಬಹಿರ್ಜಾನು ಕರೋಪಿ ಚ ॥ ಕಂಚುಕ್ಯಾಚ್ಛಾದಿತಶಿರಾಃ । ಸೋಪಾನತ್ಕೋನಚಾಚಮೇತ್ ॥ ಏಕಹಸ್ತೇನ ನಾಚಾಮೇ। ಮುಕ್ತಕೇಶೋಜಲಾಪ್ಲುತಃ ॥ ಸದಾ ಯಜ್ಞೋಪವೀತಿಸ್ಯಾತ್ । ತಥಾ ಬದ್ಧಶಿಖಸ್ಸದಾ । ತದ್ವಿನೋಯದ್ವಿಜಃ ಕುರ್ಯಾತ್ತತ್ಸರ್ವಂ ನಿಷ್ಫಲಂ ಭವೇತ್ ॥'' ಎಂದು ಇರುವುದರಿಂದ, ನಿಂತಿರಬಾರದು; ಅಲ್ಪಾಚಮನಮಾಡತಾ ಇರಬಾರದು ; ವ್ಯರ್ಥ ಹರಟೆ ಹೊಡೆಯುತ್ತಾ ಇರಬಾರದು; ದುರ್ಜನಭಾಷಣಗಳು ಕೇಳುತ್ತಾ ಇರಬಾರದು; ಮತ್ತೊಬ್ಬರನ್ನು ಮುಟ್ಟಬಾರದು; ದಿಕ್ಕುಗಳನ್ನು ನೋಡಬಾರದು; ದುಷ್ಟಪದಾರ್ಥವನ್ನು ನೋಡಬಾರದು; ಮಲಗಿರಬಾರದು; ಪಾದುಕಾಧಾರಣಮಾಡಿರಬಾರದು; ಕೈಗಳಿಗೆ ಹೊರಗೆ ಮೊಳಕಾಲು ಇರಬಾರದು; ಬಟ್ಟೆಯಿಂದ ತಲೆಯನ್ನು ಮುಚ್ಚಿರಬಾರದು; ಕಾಲಿಗೆ ಚಪ್ಪಲಿಮುಚ್ಚಿ ಮೊದಲಾದ್ದು ಧಾರಣ-

ಮಾಡಿರಬಾರದು; ಒಂದು ಕೈಯಿಂದ ಆಚಮನ ಮಾಡಬಾರದು; ತಲೆಕೂದಲು ಗಂಟು ಬಿಚ್ಚಿರಬಾರದು; ನೀರಿನಲ್ಲಿ ಮುಳುಗಿರಬಾರದು; ಸರ್ವಕಾಲದಲ್ಲಿಯೂ ಯಜ್ಞೋಪವೀತ ಧರಿಸಿರುವವನಾಗಿರಬೇಕು; ಅದೇ ಪ್ರಕಾರ ಸರ್ವಕಾಲದಲ್ಲಿಯೂ ತಲೆಗಂಟುಹಾಕಿಕೊಂಡಿ-ರುವವನಾಗಿರಬೇಕು; ಇವುಗಳನ್ನು ಬಿಟ್ಟು ಯಾವಬ್ರಾಹ್ಮಣನು ಆಚಮನ ಮಾಡುತ್ತಾನೋ ಅದೆಲ್ಲವೂ ನಿಷ್ಫಲವಾಗುವುದು.

**ಪ್ರಶ್ನೆ:- ಆಚಮನ ಎಷ್ಟು ಆವರ್ತಿಮಾಡಬೇಕು?**

ಉ:- ಬೋಧಾಯನಸೂತ್ರದಲ್ಲಿ ''ತ್ರಿರಪೋಹೃದಯಂಗಮಾಃ ಪಿಬೇತ್'' ಎಂದಿರುವುದರಿಂದ ಮೂರಾವರ್ತಿಹೃದಯದವರೆಗೆ ಕೈಯೆತ್ತಿ ಆಚಮನ ಮಾಡತಕ್ಕದ್ದು.

**ಪ್ರಶ್ನೆ:- ಯಾವನಿಮಿತ್ತಗಳಿಂದ ಆಚಮನಮಾಡತಕ್ಕದ್ದು ?**

ಉ:- ''ಅಧೋವಾಯುಸಮುತ್ಸರ್ಗೇ । ಆಕ್ರಂದೇ ಕ್ರೋಧಸಂಭವೇ ॥ ಮಾರ್ಜಾರಮೂಷಿಕಾ ಸ್ಪರ್ಶೇ । ಪ್ರಹಸೇನೃತಭಾಷಣೇ ॥ ನಿಮಿತ್ತೇಷ್ವೇಷುಸರ್ವೇಷು । ಕರ್ಮಕುರ್ವನ್ ಉಪಸ್ಪೃಶೇತ್ ಎಂದು ಪ್ರಮಾಣವಿದೆ. ವಸಿಷ್ಠಸ್ಮೃತಿಯಲ್ಲಿ- '' ಕ್ಷುತೇನಿಷ್ಠೀವನೇಸುಪ್ತೇ । ಪರಿಧಾನೇಶೃಪಾತನೇ। ಪಂಚಸ್ವೇತೇಷುಚಾಚಾಮೇ। ಛ್ರೋತ್ರಂ ವಾ ದಕ್ಷಿಣಂ ಸ್ಪೃಶೇತ್ ॥'' ಎಂದು ಪ್ರಮಾಣವಿದೆ.

ಕೂರ್ಮಪುರಾಣದಲ್ಲಿ- ''ಚಂಡಾಲಮ್ಲೇಚ್ಛಸಂಭಾಷಾ ಸ್ತ್ರೀಶೂದ್ರೋಚ್ಛಿಷ್ಟಭಾಷಣೇ । ಉಚ್ಛಿಷ್ಟಂ ಪುರುಷಂ ಸ್ಪೃಷ್ಟ್ವಾ ಭೋಜ್ಯಂ ಚಾಪಿ ಯಥಾವಿಧಿ। ಆಚಮೇದಶೃಪಾತೇ ವಾ। ಲೋಹಿತಸ್ಯ ಚ ತಥೈವಚ। ಸ್ತ್ರೀಣಾಮಪ್ಯಾತ್ಮನಃ ಸ್ಪರ್ಶೇ ನಿವೀಂ ವಾ ಪರಿಧಾಯಚ ॥' ಎಂದಿದೆ.

ಭಾರದ್ವಾಜಸಂಹಿತಾದಲ್ಲಿ; ''ಜಪೇಸ್ಮಶಾನಗಮನೇ। ಪರಿಧಾನೇ ಚ ವಾಸಸಃ। ಸ್ನಾನೇ ಪಾನೇ ಕ್ಷುತೇಸ್ವಾಪೇ। ಹೋಮಭೋಜನಕರ್ಮಸು। ರಥ್ಯೋಪಸರ್ಪಣೇಮೂತ್ರವಿಷ್ಟಾಸ್ಪೃಷ್ಟೋ ದ್ವಿರಾಚಮೇತ್ ॥'' ಎಂದು ಇದೆ.

ಪದ್ಮಪುರಾಣದಲ್ಲಿ- '' ದಾನೇ ಪ್ರತಿಗ್ರಹೇ ಹೋಮೇ । ಜಪೇ ಸಂಧ್ಯಾತ್ರಯೇ ತಥಾ ॥ ಬಲಿಕರ್ಮಣಿಚಾಚಾಮೇದಾದೌಸಕೃದಂತತಃ॥'' ಎಂದಿದೆ.

ಈ ಪ್ರಮಾಣಗಳ ಅಭಿಪ್ರಾಯವೇನೆಂದರೆ- ಅಪಾನವಾಯುವು ಬಿಟ್ಟರೆ, ರೋದನದಿಂದ ಕಣ್ಣೀರುಬಂದರೆ, ಕ್ರೋಧ ಉತ್ಪತ್ತಿ-ಯಾದರೆ, ಬೆಕ್ಕು ಇಲಿಗಳ ಸ್ಪರ್ಶವಾದರೆ, ವಿಶೇಷಾಕಾರವಾಗಿ ನಕ್ಕರೆ, ಅಬದ್ಧಮಾತನಾಡಿದರೆ, ಸಮಸ್ತವಾದಂಥಾ ನಿತ್ಯನೈಮಿತ್ತಿಕಕರ್ಮಗಳು ಮಾಡುವಾಗ, ಸೀನುವಾಗ , ಉಗುಳುವಾಗ, ನಿದ್ದೆಗೆ ಹೋಗುವಾಗ, ಧೋತ್ರ ಉಡು- ವಾಗ, ಚಂಡಾಲಮ್ಲೇಚ್ಛರಸಂಗಾತ ಮಾತನಾಡುವಾಗ, ಹೆಂಗಸರು ಶೂದ್ರರು ಇವರಕೂಡ ಮಾತನಾಡಿದರೆ, ಎಂಜಲುಮುಟ್ಟಿದರೆ, ಎಂಜಲುಕೈಯಿದ್ದ ಪುರುಷನನ್ನು ಮುಟ್ಟಿದರೆ, ವಿಧ್ಯುಕ್ತವಾದ ಭೋಜನಾನಂತರದಲ್ಲಿ, ರಕ್ತಸ್ರಾವದನಂತರ, ಸೀರೆ ಉಡುವಂಥಾ ಸ್ತ್ರೀಸ್ಪರ್ಶವಾದರೆ, ಜಪ ಪ್ರಾರಂಭದಲ್ಲಿ, ಸ್ಮಶಾನಗಮನಾನಂತರದಲ್ಲಿ, ಸ್ನಾನದಲ್ಲಿ, ಪಾನದಲ್ಲಿ, ಹೋಮದಲ್ಲಿ, ಹೊರಗಿಂದ ಮನೆವಳಕ್ಕೆ ಬಂದ ನಂತರ, ಮಲಮೂತ್ರವಿಸರ್ಜನೆ ಮಾಡಿದಾಗ(ಸ್ಪರ್ಶವಾದರೆ), ದಾನಮಾಡುವ ಕಾಲದಲ್ಲಿ, ಪ್ರತಿಗ್ರಹಮಾಡುವಕಾಲದಲ್ಲಿ, ಮೂರುಸಂಧ್ಯಾವಂದನೆಗಳಲ್ಲಿ, ಬಲಿ ಹರಣದಲ್ಲಿ, ಆಚಮನಮಾಡತಕ್ಕದ್ದು. ಅದರಲ್ಲಿ ಮಲಮೂತ್ರಸ್ಪರ್ಶ ಮಾಡಿದರೆ ಎರಡಾವರ್ತಿ ಆಚಮನಮಾಡತಕ್ಕದ್ದು. ದಾನಪ್ರತಿಗ್ರಹ, ಹೋಮ, ಜಪ, ಸಂಧ್ಯಾವಂದನ, ಬಲಿಹರಣ ಇವುಗಳಲ್ಲಿ ಮೊದಲು ಎರಡಾವರ್ತಿ, ಕಡೆಗೆ ಒಮ್ಮೆ ಆಚಮನ ಮಾಡತಕ್ಕದ್ದು.

**ಪ್ರಶ್ನೆ:- ಮೇಲೆ ಹೇಳಿದ ವಸಿಷ್ಠಸ್ಮೃತಿಯಲ್ಲಿ 'ಶ್ರೋತ್ರಂ ವಾ ದಕ್ಷಿಣಂ ಸ್ಪೃಶೇತ್' ಎಂದು ಹೇಳಿದರೆ, ಅದರ ಅಭಿಪ್ರಾಯವೇನು?**

ಉ:- ಬ್ರಾಹ್ಮಣನು ತನ್ನ ಬಲಗಿವಿಯನ್ನು ಸ್ಪರ್ಶಮಾಡುವುದು ಶ್ರೋತ್ರಾಚಮನವೆನ್ನಿಸಿಕೊಳ್ಳುತ್ತದೆ. ಮೇಲೆ ಕಂಡಕಾರ್ಯಗಳು ಮಾಡಿ ಆಚಮನ ಮಾಡತಕ್ಕ ಅವಶ್ಯಕಲ್ಪನವಾದ ಕಾಲಕ್ಕೆ ತದರ್ಥವಾದರೆ ಸಾಧ್ಯವಾದರೆ ಉದಕದಿಂದ ಆಚಮನ ಮಾಡತಕ್ಕದ್ದು. ಉದಕ ಸುಲಭಸಾಧ್ಯವಾಗದ ಪಕ್ಷದಲ್ಲಿ ಬ್ರಾಹ್ಮಣನು ತನ್ನ ಬಲಗಿವಿಯನ್ನು ಸ್ಪರ್ಶಮಾಡಿದರೆ ಆಚಮನ ಮಾಡಿದ ಫಲವು ಬರುತ್ತದೆ.

ಪರಾಶರಸ್ಮೃತಿಯಲ್ಲಿ''ಆದಿತ್ಯಾವಸವೋರುದ್ರಾವಾಯುರಗ್ನಿಶ್ಚಧರ್ಮರಾಟ್। ವಿಪ್ರಸ್ಯ ದಕ್ಷಿಣೇಕರ್ಣೇ ವಸಂತಿ ಹಿ ಸರ್ವದಾ। ಪುಷ್ಕರಾದ್ಯಾನಿ ತೀರ್ಥಾನಿ ಗಂಗಾದ್ಯಾಸ್ಸರಿತಸ್ತಥಾ । ವಿಪ್ರಸ್ಯ ದಕ್ಷಿಣ ಕರ್ಣೇ ಸಂತೀತಿ ಮನುರಬ್ರವೀತ್ । ಪಂಚಾಂಗುಲಿನ್ಮೇಳಯಿತ್ವಾ ದಕ್ಷಿಣಂ ಶ್ರವಣಂ ಸ್ಪೃಶೇತ್।'' ಎಂದು ಹೇಳುತ್ತದೆ. ಅಂದರೆ ಬ್ರಾಹ್ಮಣನ ಬಲಗಿವಿಯಲ್ಲಿ ಸೂರ್ಯವಸುಗಳು, ರುದ್ರದೇವರು, ವಾಯುದೇವರು, ಅಗ್ನಿ, ಧರ್ಮರಾಜ, ಪುಷ್ಕರಾದಿ ತೀರ್ಥಗಳು, ಗಂಗಾದಿ ನದಿಗಳು, ಸರ್ವದಾ ಇವೆಯೆಂತಲೂ ಆಚಮನಪ್ರತ್ಯಾಮ್ನಾಯವಾಗಿ ಐದು ಬೆಟ್ಟುಗಳು ಮೇಳನಮಾಡಿ ಬಲಗೈಯಿಂದ ಬಲಗಿವಿ ತಾಕಿದರೆ, ಆಚಮನಮಾಡಿದ ಫಲಬರುತ್ತದೆಂದು ಅಭಿಪ್ರಾಯ.

**ಪ್ರಶ್ನೆ:- ಆಚಮನ ಯಾಕೆ ಮಾಡಬೇಕು?**

ಉ:- ಶ್ವ , ವಿಡ್ವರಾಹ, ಖರ, ಕಾಕ, ಕುಕ್ಕುಟ, ವ್ರಾತ್ಯ ದೇವಲಕ, ಪತಿತ, ಪಾಷಂಡ, ಶೂದ್ರ, ರಜಸ್ವಲಾ, ಸೂತಕಾಂತ್ಯಜಚಿಕಿತ್ಸ , ನಟವಿಟ ಚಾಂಡಾಲಾದಿ ದರ್ಶನದೋಷ ಪರಿಹಾರಾರ್ಥ ವಾಗಿ ಮಾಡಬೇಕು ಎನಲಾಗಿ,

ನಾಯಿ ,ಹಂದಿ, ಕತ್ತೆ, ಕಾಗೆ, ಕೋಳಿ, ದುರಾಚಾರಿ, ಕೂಲಿತೆಗೆದುಕೊಂಡು ಪರಗೃಹದಲ್ಲಿ ಆರುಮಾಸ ದೇವರಪೂಜಾಮಾಡುವುದು, ಜಾತಿ-ಭ್ರಷ್ಟ , ಪಾಷಂಡ ಮತಾವಲಂಬಿ, ಶೂದ್ರ, ಬಹಿಷ್ಠಸ್ತ್ರೀ, ಜಾತಾಶೌಚ ಮೃತಾಶೌಚ ಉಳ್ಳವರು, ಅಂತ್ಯಜ, ವೈದ್ಯ, ನಾಟ್ಯಮಾಡುವವರು, ವೇಷಹಾಕುವವರು, ಚಂಡಾಲ ಮೊದಲಾದವರನ್ನು ನೋಡಿದ ಪಾಪಪರಿಹಾರಾರ್ಥವಾಗಿ ಆಚಮನ ಮಾಡತಕ್ಕದ್ದು.

**ಪ್ರಶ್ನೆ:- ಮೇಲೆ ಹೇಳಿದ ಜನರಲ್ಲಿ ಅಂತ್ಯಜರೆಂತಲೂ, ಚಾಂಡಾಲರೆಂತಲೂ ಎರಡಾವರ್ತಿಹೇಳಿದ್ದಾರೆ. ಅದಕ್ಕೆ ಕಾರಣವೇನು?**

ಉ:- ಶಾಸ್ತ್ರದಲ್ಲಿ ಅಂತ್ಯಜರು ಬೇರೆ; ಚಾಂಡಾಲರು ಬೇರೆ. ಅಂತ್ಯಜರೆಂದರೆ, ''ರಜಕಶ್ಚರ್ಮಕಾರಶ್ಚನಟೋಬರುಡ ಏವಚ, ಕೈವರ್ತಕಾಶ್ಚಭಿಲ್ಲಾಶ್ಚಸಪ್ತೈತೇ ಅಂತ್ಯಜಾಸ್ಮೃತಾಃ'' ಎಂದು ಪ್ರಮಾಣವಿದೆ. ಚಂಡಾಲರು ದ್ವಿವಿಧರು. ಜಾತಿಚಂಡಾಲರು, ಹೊಲೇರು, ಮಾದಿಗರು ಮೊದಲಾದವರು ಕರ್ಮಚಂಡಾಲರು- ವಿಹಿತಕರ್ಮವನ್ನು ಬಿಟ್ಟವರು.

**ಪ್ರಶ್ನೆ:- ಆಚಮನಕ್ಕೆ ಪೂರ್ವದಲ್ಲಿ ಪವಿತ್ರವನ್ನು ಧಾರಣೆ ಮಾಡಬೇಕಾ?**

ಉ:- ಹೌದು, '' ಪವಿತ್ರಂಧಾರಯೇದ್ಧೀಮಾಂಸ್ತತ್ತತ್ಕರ್ಮಫಲಾಪ್ತಯೇ'' ಎಂದು ಪ್ರಮಾಣವಿರುವುದರಿಂದ ಕರ್ಮಫಲಪ್ರಾಪ್ತ್ಯರ್ಥವಾಗಿ ಪವಿತ್ರವನ್ನು ಧಾರಣಮಾಡಬೇಕು. ''ಹೇಮ್ನಾ - ರೌಪ್ಯೇಣ ತಾಮ್ರೇಣ ಮಿಶ್ರೇಣೈವಾಥವಾ ಸದಾ ।' ಎಂದು ವಾಕ್ಯವಿರುವುದರಿಂದ ಆ ಪವಿತ್ರ ಬಂಗಾರ, ಬೆಳ್ಳಿ, ತಾಮ್ರ ಅಥವಾ ಈ ಲೋಹಗಳಮಿಶ್ರಣದಿಂದಲಾದರೂ ಇರಬಹುದು.

**ಪ್ರಶ್ನೆ:-ಊರ್ಧ್ವಪುಂಡ್ರ ಯಾವಕ್ರಮದಿಂದ ಹಚ್ಚಬೇಕು?**

ಉ:- ಊರ್ಧ್ವಪುಂಡ್ರ ಹಚ್ಚುವವಿಷಯದಲ್ಲಿ ಪರಾಶರಸ್ಮೃತಿಯಲ್ಲಿ ಈ ಕೆಳಗೆ ಕಂಡ ಪ್ರಮಾಣವಿದೆ. ಬ್ರಹ್ಮಾಂಡಪುರಾಣೇ - '' ಪರ್ವತಾಗ್ರೇ ನದೀತೀರೇ ಧರ್ಮಕ್ಷೇತ್ರೇ ವಿಶೇಷತಃ । ಸಿಂಧುತೀರೇ ಚ ವಲ್ಮಿಕೇ ತುಲಸೀ ಮೂಲಮೃತ್ತಿಕಾ । ಮೃದಯೇತಾಸ್ತು ಸಂಗ್ರಾಹ್ಯ-ವರ್ಜಯೇತ್ವನ್ಯಮೃತ್ತಿಕಾಃ ।

'ಶ್ಯಾಮಂಶಾಂತಿಕರಂ ಪ್ರೋಕ್ತಂ। ರಕ್ತಂ ವಶ್ಯಕರಂ ಭವೇತ್ । ಶ್ರೀಕರಂ ಪೀತಮಿತ್ಯಾಹುರ್ವೈಷ್ಣವಂ ಶ್ವೇತಮುಚ್ಯತೇ। ಅಂಗುಷ್ಠಃ ಪುಷ್ಟಿದಃ ಪ್ರೋಕ್ತೋ ಮಧ್ಯಮಾಯುಷ್ಕರೀಭವೇತ್ । ಅನಾಮಿಕಾನ್ನದಾನಿತ್ಯಮ್ । ಮುಕ್ತಿದಾನಪ್ರದೇಶಿನೀ । ಏತೈರಂಗುಲಿಭೇದಸ್ತು ಕಾರಯೇನ್ನನಖೈಸ್ಪೃಶೇತ್ ॥ ವರ್ತದೀಪಾಕೃತಿಂ ವಾಪಿ ವೇಣುಪತ್ರಾಕೃತಿಂ ತಥಾ । ಪದ್ಮಸ್ಯ ಮುಕುಳಾಕಾರಂ ತಥೈವ ಕುಮುದಸ್ಯ ಚ । ಮತ್ಸ್ಯಕೂರ್ಮಾಕೃತಿಂ ವಾಪಿ । ಶಂಖಾಕಾರಮತಃ ಪರಂ।ದಶಾಂಗುಲಃ ಪ್ರಮಾಣಂತು ಉತ್ತಮೋತ್ತಮಮುಚ್ಯತೇ। ನವಾಂಗುಲಂ ಮಧ್ಯಮಂ ಸ್ಯಾ।ದಷ್ಟಾಂಗುಲಮತಃ ಪರಂ । ಸಪ್ತಷಟ್ಪಂಚಭಿಃ ಪುಂಡ್ರಂ। ಕನಿಷ್ಠಂ ತ್ರಿವಿಧಂ ಭವೇತ್॥ ಲಲಾಟೇ ಕೇಶವಂ ವಿಂದ್ಯಾನ್ನಾರಾಯಣಮಥೋದರೇ।ಮಾಧವಂ ಹೃದಿವಿನ್ಯಸ್ಯಾತ್ ಗೋವಿಂದಂ ಸ್ಕಂಧಮೂಲಕೇ। ಉದರೇ ದಕ್ಷಿಣೇ ಪಾರ್ಶ್ವೇ ವಿಷ್ಣುರಿತ್ಯಭಿಧೀಯತೇ। ತತ್ಪಾರ್ಶ್ವೇ ಬಾಹುಮಧ್ಯೇ ಚ ಮಧುಸೂಧನ-ಮನುಸ್ಮರನ್। ತ್ರಿವಿಕ್ರಮಂ ಕಂಠದೇಶೇ ವಾಮೇಕುಕ್ಸೌ ತು ವಾಮನಂ। ಶ್ರೀಧರಂ ಬಾಹುಕೇ ವಾಮೇ। ಹೃಷಿಕೇಶಂ ತು ಕರ್ಣಕೇ। ಪೃಷ್ಠೇಚ ಪದ್ಮನಾಭಂ ತು ಕಕುದ್ದಾಮೋದರಂ ಸ್ಮರೇತ್ । ದ್ವಾದಶೈತಾನಿ ನಾಮಾನಿ ವಾಸುದೇವೇತಿ ಮೂರ್ಧನಿ। ಪೂಜಾಕಾಲೇಚ ಹೋಮೇಚ। ಸಾಯಂ ಪ್ರಾತಃ ಸಮಾಹಿತಃ। ನಾಮಾನುಚ್ಚಾರ್ಯ ವಿಧಿನಾ ಧಾರಯೇದ್ ಊರ್ಧ್ವಪುಂಡ್ರಕಂ॥

ಪರಿಮಾಣವಿಷಯದಲ್ಲಿ ಆ ಗ್ರಂಥಕರ್ತನು ಉತ್ತಮ, ಮಧ್ಯಮ, ಅಧಮ ಎಂಬುವ ಮೂರುಭೇದಗಳನ್ನು ಮಾಡಿಕೊಂಡು ಈ ಮೂರರಲ್ಲಿ ಪುನಃ ಉತ್ತಮ, ಮಧ್ಯಮ, ಅಧಮ ಎಂಬ ಮೂರು ಪ್ರಭೇದಕಲ್ಪನ ಮಾಡಿದ್ದಾನೆ. ಅಂದರೆ, 1. ಉತ್ತಮೋತ್ತಮ; 2.ಉತ್ತಮ-ಮಧ್ಯಮ; 3.ಉತ್ತಮಅಧಮ; 4ಮಧ್ಯಮೋತ್ತಮ; 5.ಮಧ್ಯಮಮಧ್ಯಮ; 6.ಮಧ್ಯಮಅಧಮ; 7.ಅಧಮೋತ್ತಮ; 8.ಅಧಮಮಧ್ಯಮ; 9.ಅಧಮಅಧಮ ಎಂಬುದಾಗಿ ಒಂಭತ್ತು ವಿಧವಾಗಿ ವಿಭಾಗವನ್ನು ಮಾಡಿ ಕ್ರಮವಾಗಿ 10-9-8-7-6-5-4-3-2 ಅಂಗುಲ ಪರಿಮಾಣಗಳನ್ನು ಹೇಳಿದ್ದಾನೆ. ಆ ಸಂಖ್ಯಾಗಳಲ್ಲಿ ಯಾವಸಂಖ್ಯಾ ಪ್ರಮಾಣ ಹಚ್ಚಿದರೆ ಆ ಸಂಖ್ಯಾಕ್ಕೆ ಹೇಳಿದ ಫಲಭಾಗಿಯಾಗುತ್ತಾನೆಂದು ಅಭಿಪ್ರಾಯ ಅದರಲ್ಲಿ ಕೊಟ್ಟಿದ್ದಾನೆ. ಆಕಾರವಿಷಯದಲ್ಲಿಯೂ ಕ್ಲುಪ್ತವನ್ನು ಹೇಳಲಿಲ್ಲ, ಬತ್ತಿ, ದೀಪ, ಬಿದುರು ಎಲೆ, ಮುಕುಳಿತಪದ್ಮ ಅಥವಾ ಕುಮುದ, ಮತ್ಸ್ಯಕೂರ್ಮಶಂಖಾಕಾರಗಳನ್ನು ಐಚ್ಛಿಕವಾಗಿ ಹೇಳಿದಂತೆ ಕಾಣುತ್ತದೆ. ಮುಕುಳಿತಪದ್ಮ ಅಥವಾ ಕುಮುದ, ಮತ್ಸ್ಯಕೂರ್ಮಶಂಖಾಕಾರಗಳನ್ನು ಈ ದೇಶದ ವೈಷ್ಣವರಲ್ಲಿ ಧರಿಸುವ ಸಂಪ್ರದಾಯ ಕಾಣೆ. ಕಾಶಿ ಮೊದಲಾದ ಉತ್ತರದೇಶದಲ್ಲಿ ಆ ಪ್ರಕಾರ ಹಚ್ಚುವಂತೆ ಕಾಣುತ್ತದೆ. ಮತ್ತು ಕೆಲವರು ತಲೆಯಮೇಲೆ ಧನುರ್ಬಾಣಗಳು , ಸ್ತನಗಳ ಮೇಲುಭಾಗದಲ್ಲಿ ಖಡ್ಗ- ಚರ್ಮಗಳು, ಬಲಗಡೆ ಎದೆಯಮೇಲೆ ಕಮಲಗಳ ಮಧ್ಯೆ ದಕ್ಷಿಣ ಪಾದಾಕೃತಿಯನ್ನು ಹಚ್ಚುವುದು ಕಂಡಿದೆ. ಇದಕ್ಕೆ ಆಧಾರ ಮೇಲೆಕಂಡ ಪ್ರಮಾಣದಲ್ಲಿ ಕಾಣೆ. ಸಂಪ್ರದಾಯಭೇದ ಇರಬಹುದು ಎಂದು

ತೋರುತ್ತದೆ.

ಮೃತ್ತಿಕಾ (ಇದಕ್ಕೆ ಗೋಪೀಚಂದನವೆಂದು ಕರೆಯುತ್ತಾರೆ) ಶ್ಯಾಮವರ್ಣವಿದ್ದರೆ ಶಾಂತಿಕರವೆಂತಲೂ, ಕೆಂಪಗೆ ಇದ್ದರೆ ವಶ್ಯಕರವೆಂತಲೂ, ಹಚ್ಚಗೆ ಇದ್ದರೆ ಸಂಪತ್ಕರವೆಂತಲೂ, ಬೆಳ್ಳಗಿದ್ದರೆ ವಿಷ್ಣುಪ್ರೀತಿಕರವೆಂತಲೂ, ಅಂಗುಷ್ಠದಿಂದ ಹಚ್ಚುವುದು ಪುಷ್ಟಿಕರವೆಂತಲೂ, ನಡುವಿನ ಬೆಟ್ಟಿನಿಂದ ಹಚ್ಚುವುದು ಅನ್ನಪ್ರದವೆಂತಲೂ, ತರ್ಜನೀಬೆಟ್ಟಿನಿಂದ ಹಚ್ಚುವುದು ಮುಕ್ತಿಪ್ರದವೆಂತಲೂ, ಈ ಪ್ರಮಾಣದ ಅರ್ಥ. ವೈಷ್ಣವರಲ್ಲಿ ಪ್ರಾಯಶಃ ಬೆಳ್ಳಗಿನ ಮೃತ್ತಿಕಾವನ್ನು ತರ್ಜನೀಬೆಟ್ಟಿನಿಂದ ಹಚ್ಚುವ ಸಂಪ್ರದಾಯ ವಿಶೇಷವಾಗಿ ಇದ್ದಂತೆ ಕಾಣುತ್ತದೆ. ಉಗುರುಗಳಿಂದ ಮೃತ್ತಿಕಾ ಸ್ಪರ್ಶಮಾಡಕೂಡದು.

**ಮತ್ತು ಪ್ರಯೋಗಪಾರಿಜಾತದಲ್ಲಿ** ''ಬಾಹ್ವೋ ವೇಣುಪತ್ರವತ್ । ಕರ್ಣಯೋರ್ದಂಡವತ್ । ಉದರೇ ದೀಪವತ್ । ಪೃಷ್ಠೇ ಜಂಬೂಪತ್ರವತ್ । ಕಕುದಿ ಪಲಾಶಪತ್ರವತ್।'' ಎಂದು ಹೇಳಿದೆ.

ಮತ್ತು **ಪದ್ಮಪುರಾಣದಲ್ಲಿ-** ''ಶ್ರೀರಂಗೇದ್ವಾರಕಾಯಾಂ ಚ ಶ್ರೀಕೂರ್ಮೇಚ ತಥಾಸ್ಥಿತಾಂ । ಸಿಂಹಾದ್ರೌ ಚ ಪ್ರಯಾಗೇಚ ವಾರಾಹೇ ತುಳಸೀವನೇ । ಗೃಹೀತ್ವಾ ಮೃತ್ತಿಕಾಂ ಭಕ್ತ್ಯಾಶಾಲಗ್ರಾಮ -ಜಲೈಃ ಸಹ । ಸ್ನಾತ್ವಾಪುಂಡ್ರಂ ಮೃದಾ ಕುರ್ಯಾತ್ ।.... ನಾಸಾದಿಕೇಶಪರ್ಯಂತಂ ದಂಡಾಕಾರಃ ಸುಶೋಭನಃ ।................ಚತುರಂಗುಲ ದೀರ್ಘಃ ಸ್ಯಾಲ್ಲಲಾಟೇ ತೂರ್ಧ್ವಪುಂಡ್ರಕಃ ದಶಾಂಗುಲಸ್ತೂದರೇಸ್ಯಾದ್ವಕ್ಷಃ ಸಪ್ತಾಂಗುಳಸ್ಮೃತಃ । ಚತುರಂಗುಲಃ ಕಂಠದೇಶೇ ಪಾರ್ಶ್ವಯೋಸ್ತು ದಶಾಂಗುಳಃ । ಅಷ್ಟಾಂಗುಳಸ್ತು ಬಾಹ್ವೋಃ ಸ್ಯಾದಂಸಯೋಶ್ಚತುರಂಗುಲಃ । ಊರ್ಧ್ವಾಧೋ ಭಾಗಯೋಃ ಪೃಷ್ಠೇಮೂರ್ಧ್ನಿ ಚ ದ್ವ್ಯಂಗುಲಸ್ಮೃತಃ । ದಕ್ಷಸ್ತನೋರ್ಧ್ವಭಾಗೇ ಸ್ಯಾತ್ ಶ್ರೀವತ್ಸಂತು ಷಡಂಗುಲಂ । ಲಲಾಟೋದರವಕ್ಷಸ್ಸು ಕಂಠೇಪಾರ್ಶ್ವೇತು ದಕ್ಷಿಣೇ । ದಕ್ಷೇ ಭುಜೇಚಾಂಸಭಾಗೇ ವಾಮೇ ಪಾರ್ಶ್ವೇಭುಜೇಂಸಕೌ । ಪೃಷ್ಠಾಧೋಭಾಗ ಊರ್ಧ್ವೇ ಚ ಕೇಶವಾದೀನಿ ವಿನ್ಯಸೇತ್ । ಚತುರ್ಥ್ಯಂತೇ ನಮೋಂತೈಶ್ಚ ಕ್ರಮಾದ್ವಾದಶನಾಮಭಿಃ । ಏವಂ ಶೀರ್ಷೇವಾಸುದೇವಂ ಶ್ರೀವತ್ಸಂ ದಕ್ಷಿಣಸ್ತನೇ । ದಂಡಾಕಾರಂ ಲಲಾಟೇ ಚ ಪದ್ಮಾಕಾರಂ ತು ವಕ್ಷಸಿ । ವೇಣುಪತ್ರಾಕೃತಿಂ ಬಾಹ್ವೋರನ್ಯಾನ್ ದೀಪಾಕೃತೀನ್ಯಸೇತ್ ।'' ಈ ವಾಕ್ಯಗಳಿಗೂ ಪರಾಶರ ಸ್ಮೃತಿ ಪ್ರಮಾಣಕ್ಕೂ ಕೆಲವುಭಾಗಗಳಲ್ಲಿ ವ್ಯತ್ಯಾಸಬರುವಂತೆ ಕಾಣುತ್ತದೆ.

ಮೇಲೆ ಕಂಡ ಕ್ಷೇತ್ರಗಳ ಪೈಕಿ ದ್ವಾರಕಾಮೃತ್ತಿಕಾ ಶ್ರೇಷ್ಠವೆಂದು ಸಂಪ್ರದಾಯವಿದೆ. ದ್ವಾರಕಾದಲ್ಲಿ 'ಗೋಪೀತಲಾವು' ಎಂದು ಒಂದು ಪ್ರದೇಶವಿದೆ. ಅಲ್ಲಿ ಗೋಪೀಸ್ತ್ರೀಯರ ಸಂಗಡ ಶ್ರೀಕೃಷ್ಣಮೂರ್ತಿ ಲೀಲಾರ್ಥವಾಗಿ ಕ್ರೀಡಾಮಾಡಿದಂತೆ ಅಲ್ಲಿನ ಸ್ಥಳಪುರಾಣದಲ್ಲಿ ಇದೆ. ಆ ಸ್ಥಳದ ಮೃತ್ತಿಕಾವನ್ನೇ ಈ ದೇಶಕ್ಕೆ ತಂದು ಗೋಪಿಚಂದನವೆಂದು ಮಾರುತ್ತಾರೆ.

ಮತ್ತು ವರಾಹ ಪುರಾಣದಲ್ಲಿ:- ''ಲಲಾಟವಮೂರ್ಧ್ನ್ಯೋದರಹೃದ್ಗಲೇಷು ಪಾರ್ಶ್ವೇ ಭುಜೇ ಕರ್ಣಮೂಲೇ ಚ ದಕ್ಷೇ । ತದ್ವದ್ವಾಮೇಪೃಷ್ಠದೇಶೇ ಚ ಮೂರ್ಧ್ನಿ । ಶುಕ್ಲೇ ನ್ಯಸೇತ್ಕೇಶವಾದೀನಿ ತೇಷು ಸಂಕರ್ಷಣಾದೀನ್ಯಥಕೃಷ್ಣಪಕ್ಷೇ । ನಾಮಾನಿ ವಿಷ್ಣೋರ್ಬ್ರಾಹ್ಮಣೋದ್ವಾದಶೇ ವಾ ।'' ಎಂದು ಹೇಳಿರುವುದರಿಂದ ಅದರ ವಿವರಗಳು ಈ ಕೆಳಗೆ ಬರೆಯೋಣವಾಗಿವೆ.

ಈ ಪುಂಡ್ರಗಳು ಹಚ್ಚುವ ವಿಷಯದಲ್ಲಿ ದೇಶಭೇದದಿಂದಲೂ ಆಚಾರಭೇದದಿಂದಲೂ ಬೇರೆ ಬೇರೆ ಇದ್ದಂತೆ ಕಾಣುತ್ತದೆ. ಮೇಲೆಕಂಡ ಪ್ರಮಾಣಗಳಿಗೆ ಅನುಸರಿಸಿ, ಸಂಪ್ರದಾಯಗಳನ್ನು ಅನುಸರಿಸಿ ಈ ಕೆಳಗೆ ಹೇಳುವ ಕ್ರಮವು ಬಹುಜನಸಮ್ಮತವಾದಂತೆ ಕಾಣುತ್ತದೆ.

### ಪ್ರಶ್ನೆ: ಊರ್ಧ್ವಪುಂಡ್ರದ ಮೇಲೆ ಮುದ್ರೆ ಯಾವ ಕ್ರಮದಿಂದ ಹಚ್ಚತಕ್ಕದ್ದು ?

ಉ:- ಆಗ್ನೇಯ ಪುರಾಣದಲ್ಲಿ ಮುದ್ರಾಧಾರಣ ಕ್ರಮ ಈ ಕೆಳಗೆ ಹೇಳುವ ಪ್ರಕಾರ ಹೇಳಿದ್ದಾರೆ. ''ಚಕ್ರಮೇಕಂ ನ್ಯಸೇತ್ ಗಂಡೇ ದಕ್ಷಿಣೇ ದ್ವಿಜಸತ್ತಮಃ । ಶಂಖಮೇಕಂ ವಾಮಗಂಡೇ ಲಲಾಟೇ ಧಾರಯೇದ್ಗದಾಂ । ಚಕ್ರದ್ವಯಂ ದಕ್ಷಕುಕ್ಷೌ ವಾಮೇ ಶಂಖದ್ವಯಂ ತಥಾ । ದಕ್ಷಭಾಗೇ ತು ಚಕ್ರಸ್ಯ ದ್ವಯಂ ಧಾರ್ಯಂ ತಥೈವ ಚ । ದಕ್ಷಬಾಹೋರ್ಧ್ವಭಾಗೇತುನ್ಯಸೇಚ್ಚಕ್ರದ್ವಯಂ ಬುಧಃ ತದಧಃ ಶಂಖಮೇಕಂ ಚ ಮಧ್ಯೇ ಪದ್ಮದ್ವಯಂ ತಥಾ । ವಾಮಬಾಹೋರ್ಧ್ವಭಾಗೇತು ನ್ಯಸೇತ್ ಶಂಖದ್ವಯಂ ಬುಧಃ । ತದಧಶ್ಚಕ್ರಮೇಕಂ ತು ಮಧ್ಯೇ ಚೈವ ಗದಾದ್ವಯಂ । ಏಕೈಕಸ್ಮಿನ್ ಭುಜೇನ್ಯಸ್ಯೇತ್ ನಾಮಮುದ್ರಾ ಚತುಷ್ಟಯಂ । ಹೃದಿಕಂಠೇ ದಕ್ಷಿಣಾಂಸೇ ಚಕ್ರತ್ರಯಮುದಾಹೃತಂ । ಶಂಖತ್ರಯಂಸ್ಯಾದ್ವಾಮಾಂಸೇ ಕುಕ್ಷೌಚಕ್ರಚತುಷ್ಟಯಂ । ಅಸ್ಯೋರ್ಧ್ವಪುಂಡ್ರೇಷು ತಥಾ ಚಕ್ರಶಂಖಾದಿ ವಿನ್ಯಸೇತ್ । ಸರ್ವತ್ರನಾಮಮುದ್ರಾಚ ಏಕೈಕಾಚ ನ ಸಂಶಯಃ ಚಕ್ರದ್ವಯಂ ದಕ್ಷಕುಕ್ಷೌ ಪದ್ಮಮೇಕಂನ್ಯಸೇತ್ ಸ್ತನೇ । ವಾಮೇತು ಶಂಖದ್ವಿತಯಂ ಗದಾಮೇಕಂ ತು ಪೃಷ್ಠತಃ । ಅಧೋರ್ಧ್ವಭಾಗದ್ವಿತಯಂ ಏಕಮೇಕಂ ಸುದರ್ಶನಂ ॥

ಈ ಪ್ರಮಾಣದ ಅಭಿಪ್ರಾಯವನ್ನು ಈ ಕೆಳಗೆ ಸಂಕೋಚವಾಗಿ ಬರೆಯಲಾಗಿದೆ.

ಈ ಪ್ರಕಾರ ಮುದ್ರಧಾರಣ ಮಾಡಬೇಕು. ಮುಂದಿನ ಪುಟ (13 ಮತ್ತು 14ರಲ್ಲಿ) ಬರೆದಿದೆ.

**ಪ್ರಶ್ನೆ:- ಊರ್ಧ್ವಪುಂಡ್ರದೋಪಾದಿಯಲಿ ಮುದ್ರಾಧಾರಣಕ್ಕೂ ಏನಾದರೂ ಭಗವನ್ನಾಮಸ್ಮರಣವಾಗಲೀ, ಮಂತ್ರವಾಗಲೀ ಉಂಟೋ?**

**ಉ-** ಉಂಟು. ಅವನ್ನು ಈ ಕೆಳಗೆ ಹೇಳುತ್ತೇವೆ. ''ಸುದರ್ಶನಮಹಾಜ್ವಾಲ ಕೋಟಿಸೂರ್ಯ ಸಮಪ್ರಭ । ಅಜ್ಞಾನಾಂಧಸ್ಯ ಮೇ ನಿತ್ಯಂ ವಿಷ್ಣೋರ್ಮಾರ್ಗಂ ಪ್ರದರ್ಶಯ ॥''; ''ಪಾಂಚ ಜನ್ಯ ನಿಜಧ್ವಾನಧ್ವಸ್ತಪಾತಕಸಂಕ್ಷಯ । ತ್ರಾಹಿಮಾಂ ಪಾಪಿನಂ ಘೋರಂ ಸಂಸಾರಾರ್ಣವ ಸಾಗರಂ ।''; ''ಸಂಸಾರಭಯಭೀತಾನಾಂ ಯೋಗಿನಾಂ ಅಭಯಪ್ರದಂ। ಪದ್ಮಹಸ್ತೇನ ಯೋ ದೇವೋ ಯೋಗೀಶಂ ತಂ ನಮಾಮ್ಯಹಂ।''; ''ಬ್ರಹ್ಮಾಂಡ ಭುವನಾರಂಭೇ ಮೂಲಸ್ತಂಭೋ ಗದಾಧರಂ । ಕೌಮೋದಕೀ ಕರೇಯಸ್ಯ ತಂ ನಮಾಮಿ ಗದಾಧರಂ॥''; '' ನಾರಾಯಣ ನಮಸ್ತೇಸ್ತು ನಾಮಮುದ್ರಾಂಕಿತಂ ನರಂ । ದೃಷ್ಟ್ವೈವ ಲಭತೇ ಮುಕ್ತಿ ಚಂಡಾಲೋ ಬ್ರಹ್ಮಘಾತಕಃ ॥'' ಎಂಬುವ ಧ್ಯಾನಶ್ಲೋಕದಿಂದ ಮುದ್ರಾಧಾರಣ ಮಾಡತಕ್ಕದ್ದು.

**ಪ್ರಶ್ನೆ:- ಮೇಲೆ ಬ್ರಹ್ಮತೀರ್ಥವೆಂದು ಹೇಳಿದ್ದಾರೆ? ಬ್ರಹ್ಮತೀರ್ಥವೆಂದರೇನು ?**

**ಉ:-** 'ಅಂಗುಷ್ಠಮೂಲಂ ಬ್ರಾಹ್ಮಂಸ್ಯಾತ್ಪ್ರಾಜಾಪತ್ಯಂ ತದೇವ ಚ। ಪೈತೃಕಂ ತರ್ಜನೀಮೂಲಂ ಕರಾಗ್ರೇ ದೈವತಂ ಸ್ಮೃತಂ। ಆಗ್ನೇಯಂ ಕರಮಧ್ಯಂ ಸ್ಯಾತ್ ತೀರ್ಥಾಸ್ಯೇವಂ ದ್ವಿಜಸ್ಯಹಿ ॥ ದಕ್ಷಿಣೇತು ಕರೇ ಸಂತಿ ಜ್ಞಾತ್ವಾ ಕರ್ಮಸಮಾಚರೇತ್ ॥'' ಎಂದು ಪ್ರಮಾಣವಿರುವುದರಿಂದ; ಬ್ರಾಹ್ಮಣನ ಬಲಗೈ ಅಂಗುಷ್ಠಮೂಲ ಬ್ರಹ್ಮತೀರ್ಥ ಸ್ಥಾನ ; ಇದಕ್ಕೆ ಪ್ರಾಜಾಪತ್ಯ ತೀರ್ಥವೆಂತಲೂ ಹೆಸರು. ತರ್ಜನೀಮೂಲದಲ್ಲಿ ಪಿತೃತೀರ್ಥವೆಂದು ಹೆಸರು. ಪಿತೃತರ್ಪಣಾದಿಗಳನ್ನು ಆ ಸ್ಥಳದಲ್ಲಿ ಕೊಡಬೇಕು. ಕೈಕಡೆಯ(ಬೆರಳುಗಳ ತುದಿ)ಭಾಗಕ್ಕೆ ದೈವತೀರ್ಥವೆಂದು ಹೆಸರು. ದೇವತಾ ತರ್ಪಣಗಳು ಆ ಸ್ಥಳದಲ್ಲಿ ಮಾಡಬೇಕು. ಅಂಗೈಮಧ್ಯದಲ್ಲಿ ಅಗ್ನಿತೀರ್ಥವೆಂದು ಹೆಸರು. ಅಗ್ನಿನಾಮಕ ಪರಮಾತ್ಮಗೆ, (ಅಗ್ನ್ಯಂತರ್ಗತ ಶ್ರೀಮಧ್ವಾಂತರ್ಯಾಮಿನ್- ಪರಶುರಾಮದೇವರಿಗೆ) ಆ ಸ್ಥಳದಲ್ಲಿ ತರ್ಪಣ,ಹೋಮ ಮಾಡತಕ್ಕದ್ದು.

**ಪ್ರಶ್ನೆ:- ಉತ್ತರೀಯವನ್ನು ಏನು ಕಾರಣದಿಂದ ಹೊದೆಯಬೇಕು?**

**ಉ:-** ''ಹೋಮದೇವಾರ್ಚನಾದ್ಯಾಸು ಕ್ರಿಯಾಸು ಪಠನೇ ತಥಾ । ನೈಕವಸ್ತ್ರಃ ಪ್ರವರ್ತೇತ ದ್ವಿಜಶ್ಚಾಮನೇ ಜಪೇ ।'' ಎಂದು ವಿಷ್ಣುಪುರಾಣದ ವಚನವಿರುವುದರಿಂದ ಸಂಧ್ಯಾವಂದನೆ ದೇವಪೂಜಾಕಾಲದಲ್ಲಿ ಏಕವಸ್ತ್ರನಾಗಿರಕೂಡದು. 'ಸವ್ಯಾದಂಸಾತ್ಪರಿಭ್ರಷ್ಟಂ ನಾಭಿದೇಶೇ ವ್ಯವಸ್ಥಿತಂ। ಏಕವಸ್ತ್ರಂ ಚ ತದ್ವಿಂದ್ಯಾದ್ದೇವೇಪಿತ್ರೇಚ ಕರ್ಮಣಿ।' ಎಂದು ಶಾತಾತಪ ವಾಕ್ಯವಿರುವುದರಿಂದ ಮೇಲೆ ಹೊದ್ದಿರುವ ಉತ್ತರೀಯವನ್ನು ಎಡಭುಜವನ್ನುಬಿಟ್ಟು ನಾಭಿ- ಪ್ರದೇಶದಲ್ಲಿ ಪ್ರಾಪ್ತವಾಗಿದ್ದರೆ ಅದಕ್ಕೆ ಏಕವಸ್ತ್ರವೆಂದು ಹೆಸರು.

**ಪ್ರಶ್ನೆ:-ಬ್ರಾಹ್ಮಣನ ಯಜ್ಞೋಪವೀತ ಯಾವರೀತಿಯಿಂದ ಇರಬೇಕು? ಎಷ್ಟು ಉದ್ದ ಇರಬೇಕು? ಅದರ ವಿವರ ಹೇಳಿರಿ?**

**ಉ**:- ''ಕಾರ್ಪಾಸಮುಪವೀತಂಸ್ಯಾದ್ವಿಪ್ರಸ್ಯೋರ್ಧ್ವಂವೃತಂ ತ್ರಿವೃತ್ । ತ್ರಿವೃತಂ ಚೋಪವೀತಂ ಚ ತತ್ರೈಕೋಗ್ರಂಥಿರಿಷ್ಯತೇ। ನಾಭೇರೂರ್ಧ್ವಮನಾಯುಷ್ಯಮಧೋನಾಭೇಸ್ತಪಕ್ಷಯಃ । ತಸ್ಮಾನ್ನಾಭಿಸಮಂ ಕುರ್ಯಾದ್ಯುಪವೀತಂ ವಿಚಕ್ಷಣಃ । ಸ್ತನಾದೂರ್ಧ್ವ-ಮಧೋನಾಭೇಸ್ತನ್ನಧಾರ್ಯಂ ಕದಾಚನ ॥'' ಎಂದು ಮನುಸ್ಮೃತಿವಾಕ್ಯವಿರುವುದರಿಂದ ಬ್ರಾಹ್ಮಣನ ಯಜ್ಞೋಪವೀತ ಹತ್ತಿಯಿಂದ ಮಾಡಲ್ಪಟ್ಟಿದ್ದಾಗಿರಬೇಕು. ಮೂರು ಎಳೆ ಇರಬೇಕು. ಅದರಲ್ಲಿ ಒಂದು ಗಂಟು ಇರಬೇಕು. ನಾಭಿಯಿಂದ ಕೆಳಗೆ ವ್ಯಾಪಿಸಿರಬಾರದು. ಅಂದರೆ ಧಾರಣ ಮಾಡಿದಕಾಲಕ್ಕೆ ನಾಭಿಗೆ ಕೆಳಗೆ ಹೋಗುವಷ್ಟು ಉದ್ದ ಇರಬಾರದು. ಸ್ತನಪ್ರದೇಶಕ್ಕೆ ಮೇಲೆ ಇರಬಾರದು. ನಾಭಿಯಿಂದ ಮೇಲೆ ಇದ್ದರೆ ಧಾರಕನಿಗೆ ಅನಾಯುಷ್ಯಕರವಾದದ್ದು. ನಾಭಿಯಿಂದ ಕೆಳಗೆ ಇದ್ದರೆ ತಪಸ್ಸು ಕ್ಷೀಣವಾಗುತ್ತದೆ.

''ಯಜ್ಞೋಪವೀತೇದ್ವೇ ಧಾರಯೇಶ್ರೌತಸ್ಮಾರ್ತೇಚ ಕರ್ಮಣಿ । ವಸ್ತ್ರಾಭಾವೇ ತೃತೀಯಂತು ಗೃಹಸ್ಥೋ ಧಾರಯೇದ್ವಿಜಃ । ಚತುರ್ಥಮುತ್ತರೀಯಾರ್ಥಮಾಯುಷ್ಕಾಮೋ ಬಹೂನ್ಯಪಿ ।' ಎಂದು ಪ್ರಮಾಣವಿರುವುದರಿಂದ,

ಗೃಹಸ್ಥನು ಶ್ರೌತಕರ್ಮಾರ್ಥವಾಗಿ ಒಂದು, ಸ್ಮಾರ್ತಕರ್ಮಾರ್ಥವಾಗಿ ಒಂದು, ವಸ್ತ್ರಾಭಾವದೋಷಪರಿಹಾರಾರ್ಥವಾಗಿ ಒಂದು, ಉತ್ತರೀಯಾರ್ಥವಾಗಿ ಮತ್ತೊಂದು ಈ ಪ್ರಕಾರವಾಗಿ ನಾಲ್ಕು ಯಜ್ಞೋಪವೀತಗಳನ್ನು ಧಾರಣಮಾಡಬೇಕು. ಆಯುಷ್ಕಾಮಿಯು ನಾಲ್ಕಕ್ಕಿಂತಾ ಹೆಚ್ಚು ಹಾಕಬಹುದು.

ಬ್ರಹ್ಮಚಾರಿಗಳಿಗೆ ಸಮಸ್ತಕರ್ಮಗಳಿಗೂ ಒಂದೇ.

ಪ್ರಾತಃ ಸಂಧ್ಯಾವಂದನೆ ಅರ್ಘ್ಯದವರೆಗೆ

| ಕ್ರಮ ಸಂಖ್ಯೆ | ದೇಹ ಭಾಗ | ಆಕಾರ | ಪ್ರಮಾಣ ಉದ್ದ | ಶುಕ್ಲಪಕ್ಷದ ನಾಮಸ್ಮರಣೆ | ಕೃಷ್ಣಪಕ್ಷದ ನಾಮಸ್ಮರಣೆ |
|---|---|---|---|---|---|
| 1 | ಲಲಾಟದಲ್ಲಿ (ಹಣೆಯಲ್ಲಿ) | ದಂಡಾಕಾರ ಮಧ್ಯ ಭೇದ | ಚತುರಂಗುಲ (4) | ಕೇಶವಾಯ ನಮಃ | ಸಂಕರ್ಷಣಾಯ ನಮಃ |
| 2 | ಉದರದಲ್ಲಿ | ದೀಪಾಕಾರ | ದಶಾಂಗುಲ | ನಾರಾಯಣಾಯ ನಮಃ | ವಾಸುದೇವಾಯ ನಮಃ |
| 3 | ವಕ್ಷಸ್ಥಳದಲ್ಲಿ | ಪದ್ಮಾಕಾರ | ಸಪ್ತಾಂಗುಲ | ಮಾಧವಾಯ ನಮಃ | ಪ್ರದ್ಯುಮ್ನಾಯ ನಮಃ |
| 4 | ಕಂಠದಲ್ಲಿ | ದೀಪಾಕಾರ | ಚತುರಂಗುಲ (4) | ಗೋವಿಂದಾಯ ನಮಃ | ಅನಿರುದ್ಧಾಯ ನಮಃ |
| 5 | ಹೊಟ್ಟೆಮೇಲೆ ಬಲದಕಡೆ | ದೀಪಾಕಾರ | ದಶಾಂಗುಲ | ವಿಷ್ಣವೇನಮಃ | ಪುರುಷೋತ್ತಮಾಯ ನಮಃ |
| 6 | ಬಲಕಡೆ ಭುಜದಲ್ಲಿ | ಬಿದುರು ಎಲೆಯಂತೆ | ಅಷ್ಟಾಂಗುಲ | ಮಧುಸೂದನಾಯ ನಮಃ | ಅಧೋಕ್ಷಜಾಯ ನಮಃ |
| 7 | ಬಲಕಡೆ ಕಂಠದಲ್ಲಿ | ದೀಪಾಕಾರ | ಚತುರಂಗುಲ | ತ್ರಿವಿಕ್ರಮಾಯ ನಮಃ | ನಾರಸಿಂಹಾಯ ನಮಃ |
| 8 | ಹೊಟ್ಟೆಮೇಲೆ ಎಡಕಡೆ | ದೀಪಾಕಾರ | ದಶಾಂಗುಲ | ವಾಮನಾಯ ನಮಃ | ಅಚ್ಯುತಾಯ ನಮಃ |
| 9 | ಎಡಕಡೆ ಭುಜದಲ್ಲಿ | ಬಿದುರು ಎಲೆಯಂತೆ | ಅಷ್ಟಾಂಗುಲ | ಶ್ರೀಧರಾಯ ನಮಃ | ಜನಾರ್ದನಾಯ ನಮಃ |
| 10 | ಎಡಕಡೆ ಕಂಠದಲ್ಲಿ | ದೀಪಾಕಾರ | ಚತುರಂಗುಲ | ಹೃಷಿಕೇಶಾಯ ನಮಃ | ಉಪೇಂದ್ರಾಯ ನಮಃ |
| 11 | ಪೃಷ್ಠಾಧೋ ಭಾಗದಲ್ಲಿ | ದೀಪಾಕಾರ | ದ್ವ್ಯಂಗುಲ | ಪದ್ಮನಾಭಾಯ ನಮಃ | ಹರಯೇ ನಮಃ |
| 12 | ಪೃಷ್ಠಊರ್ಧ್ವ ಭಾಗದಲ್ಲಿ | ದೀಪಾಕಾರ | ದ್ವ್ಯಂಗುಲ | ದಾಮೋದರಾಯ ನಮಃ | ಶ್ರೀಕೃಷ್ಣಾಯ ನಮಃ |
| 13 | ಶಿರಸ್ಸಿನಲ್ಲಿ | ದೀಪಾಕಾರ | ದ್ವ್ಯಂಗುಲ | ವಾಸುದೇವಾಯ ನಮಃ | ವಾಸುದೇವಾಯ ನಮಃ |
| 14 | ದಕ್ಷಿಣ ಸ್ತನದಲ್ಲಿ | ದೀಪಾಕಾರ | ಷಡಂಗುಲ | ಶ್ರೀವತ್ಸಾಯ ನಮಃ | ಶ್ರೀವತ್ಸಾಯ ನಮಃ |

*// ನಾಮಧಾರಣ ಕ್ರಮ //*

ಉಪವೀತಮಲಂಕಾರಂಸ್ರಜಂಕನಕಮೇವಚ । ಉಪೋನಹೌಚವಾಸಶ್ಚ ಧೃತಮನ್ಯೈರ್ನ ಧಾರಯೇತ್ ।'' ಎಂದಿರುವುದರಿಂದ ಒಮ್ಮೆ ಒಬ್ಬಪುರುಷನಿಂದ ಧಾರಣೆ ಮಾಡಲ್ಪಟ್ಟು ವಿಸರ್ಜಿಸಿದ ಉಪವೀತವನ್ನು ಪುನಃ ಧಾರಣಮಾಡಬಾರದು.

**ಪ್ರಶ್ನೆ:- ಬ್ರಾಹ್ಮಣರು ಧಾರಣಮಾಡುವ ಜನಿವಾರಕ್ಕೆ ಯಜ್ಞೋಪವೀತವೆಂದು ಹೆಸರು ಯಾಕೆ?**

**ಉ:-** ಪೂರ್ವಕಾಲದಲ್ಲಿ ಸ್ವರ್ಗಾಧಿಪತ್ಯವನ್ನು ಇಚ್ಛೈಸಿ ದೈತ್ಯರುಗಳು ಪ್ರತ್ಯೇಕವಾಗಿ ಯಜ್ಞಮಾಡಿದರು. ದೈತ್ಯರು ಮೂಢತ್ವದಿಂದ

**ಚಕ್ರ:-**
ಬಲಗಡೆ ಕಪಾಲದಲ್ಲಿ-1;
ಬಲಗಡೆ ಹೊಟ್ಟೆ ಮೇಲೆ -2 ;
ಮೇಲಿನ ಚಕ್ರಕ್ಕೆ ಬಲಕ್ಕೆ -2;
ಬಲಗೈ ಊರ್ಧ್ವ ಭಾಗದಲ್ಲಿ -2;
ಎಡಗೈ ಬಾಹುವಿನಲ್ಲಿ ಹಚ್ಚಿದ ಶಂಖದ ಕೆಳಭಾಗದಲ್ಲಿ -1;
ಹೃದಯದಲ್ಲಿ -3;
ಕಂಠದಲ್ಲಿ -3;
ದಕ್ಷಿಣಾಂಸದಲ್ಲಿ- 3;
ಕುಕ್ಷಿಯಲ್ಲಿ - 4;
ಇತರಪುಂಡ್ರಗಳಲ್ಲಿ-2;

**ಶಂಖ :-**
ವಾಮಗಂಡಸ್ಥಲ- 1;
ವಾಮಕುಕ್ಷಿಯಲ್ಲಿ- 2;
ವಾಮಸ್ತನದಲ್ಲಿ- 2;
ಬಲಕೈ ಊರ್ಧ್ವಭಾಗದ ಕೆಳಗೆ 1;
ವಾಮ ಬಾಹು ಊರ್ಧ್ವಭಾಗದಲ್ಲಿ -2 ;
ವಾಮಾಂಸದಲ್ಲಿ -3;
ಇತರ ಪುಂಡ್ರಗಳಲ್ಲಿ -1 ;

**ಗದಾ :-**
ಲಲಾಟದಲ್ಲಿ -1;
ವಾಮಬಾಹು ಚಕ್ರ ಶಂಖಗಳ ಮಧ್ಯ -2
ಪೃಷ್ಠದಲ್ಲಿ -1;
ಇತರಪುಂಡ್ರದಲ್ಲಿ -1;

**ನಾರಾಯಣ ಮುದ್ರಾ:**
ಪ್ರತಿಭುಜದಲ್ಲಿ -4;
ಪ್ರತಿಪುಂಡ್ರದಲ್ಲಿ --1 ;

**ಪದ್ಮ :-**
ಸ್ತನದಲ್ಲಿ ಬಲಭಾಗ-1;
ಬಲಬಾಹುವಿನಲ್ಲಿ ಚಕ್ರಶಂಖಗಳ ಕೆಳಗೆ -1;
ಇತರಪ್ರತಿಪುಂಡ್ರದಲ್ಲಿ -1;
**(ಸಂಪ್ರದಾಯ ಭೇದಗಳು ಕಂಡುಬಂದಿವೆ. ಆದರಂತೆ ಅನುಸರಿಸುವುದು )**

ಸ್ವಬಾಹುಬಲದಿಂದ ಉಪವೀತರಹಿತರಾಗಿ ಯಜ್ಞಮಾಡಿದುದರಿಂದ ಸ್ವರ್ಗಹೊಂದಲಿಲ್ಲ. ದೇವತೆಗಳು ಉಪವೀತಸಹಿತರಾಗಿ ಯಜ್ಞಮಾಡಿದ ದೆಸೆಯಿಂದ ಅದರ ಸಾಮರ್ಥ್ಯದಿಂದ ಸ್ವರ್ಗವನ್ನು ಹೊಂದಿದರು. ಅದುಮೊದಲು ಈ ಉಪವೀತಕ್ಕೆ ಯಜ್ಞೋಪವೀತವೆಂದು ಹೆಸರು ಬಂದಿದೆ. (ತೈ.ಆ॥2 ಪ್ರ॥1 ಅನು)

**ಪ್ರಶ್ನೆ:- ಉದ್ದಿನಕಾಳು ಮುಣುಗೋಮಾತ್ರ ಉದಕವೇ ಯಾಕೆ ಆಚಮನ ಮಾಡಬೇಕು?**

**ಉ:-** ''ಗೋಕರ್ಣಾಕೃತಿಹಸ್ತೇನ ಮಾಷಮಾತ್ರಜಲಂ ಪಿಬೇತ್ । ತಸ್ಯ ಊನಮಧಿಕಂ ಪೀತ್ವಾ ಸುರಾಪಾನಸಮಂ ಭವೇತ್ ॥'' ಎಂದು ಪ್ರಮಾಣವಿರುವುದರಿಂದ ನ್ಯೂನಾಧಿಕಗಳು ಕೂಡದು.

**ಶ್ರುತಿಸ್ಮೃತ್ಯರ್ಣವ:-**2.ಶೌಚಂ ಸ್ನಾನಂ ದ್ವಯಂ ಮಾತಾಪಿತರೌ ಸರ್ವಕರ್ಮಣಾಮಿತಿ ॥ 'ಯಜ್ಞೋದಾನಂ ತಪೋಹೋಮಃ ಸ್ವಾಧ್ಯಾಯಃ ಪಿತೃತರ್ಪಣಂ। ತತ್ಸರ್ವಂ ನಿಷ್ಫಲಂ ಜ್ಞೇಯಂ ಊರ್ಧ್ವಪುಂಡ್ರಂ ವಿನಾಕೃತಂ' ಇತ್ಯುಕ್ತೇಃ। ಸ್ನಾತ್ವಾ ಊರ್ಧ್ವಪುಂಡ್ರಾದಿ ಧೃತ್ವಾ ಆಚಮನಂ ಚರೇತ್ । ತದುಕ್ತಂ ॥ ಪವಿತ್ರಕರ ಆಚಾಮೇಚ್ಛುಚಿಃ ಕರ್ಮಾರ್ಥಮಾದರಾತ್ । ಕುಶಮಾತ್ರಕರೋವಾಪಿ ಧರ್ಮಮಾತ್ರಕರೋಪಿವಾ। ಪವಿತ್ರಂ ವೈ ಹಿರಣ್ಯಮಿತಿ ಶ್ರುತಿಃ॥ ಪವಿತ್ರಾಣಿಚ ಯಾನೀಹ ಕುಶದರ್ಭಮಯಾನಿ ಚ। ಹೇಮಾತ್ಮಕ ಪವಿತ್ರಸ್ಯ ಕಳಾನಾರ್ಹಂತಿ ಷೋಡಶೀಮಿತ್ಯುಕ್ತೇಃ । ಪವಿತ್ರಾಕಾರ ಸುವರ್ಣಾಂಗುಲೀಯಕಃ ಕೇವಲ ಹೇಮಾಂಗುಲೀಯಕೋ ವಾ ಪವಿತ್ರಕರ ಇತ್ಯುಚ್ಯತೇ ॥ ಸಮ್ಯಗಾಚಮ್ಯ ತೋಯೇನ ಕ್ರಿಯಾಃ ಕುರ್ವೀತ ಶುಚಿಃ। ದೇವತಾನಾಂ ಋಷೀಣಾಂ ಚ ಪಿತೄಣಾಂ ಚಾಪಿ ಯತ್ನತಃ। ಅನಾಚಮ್ಯ ದ್ವಿಜೋಯಸ್ತು ಕರ್ಮಕುರ್ವೀತ ವಾ ಯದಿ। ನ ತತ್ಫಲವಾಪ್ನೋತಿ ನರಾನ್ನನಿವರ್ತತೇ ॥ ದ್ವಿಜನ್ಮನಾಂ ವೈ ಶುದ್ಧ್ಯರ್ಥಂ ಸ್ನಾತ್ವಾಚಮನ ಮುಚ್ಯತ ಇತಿ ಚ ॥ ಸಂಧ್ಯಾದೌ ಆಚಮನಂ ದ್ವಿವಾರಂ। ತದುಕ್ತಂ ॥ ಹೋಮಭೋಜನಕಾಲೇಚ ಸಂಧ್ಯಾಯೋ-ರುಭಯೋರಪಿ । ಆಚಾಂತಃ ಪುನನಾಚಾಮೇಜ್ಜಪಹೋಮಾರ್ಚನಾದಿಷು ॥ ಆಚಾಂತಃ ಕೃತಾಚಮನಃ ಪುನರಾಚಾಮೇದಿತ್ಯರ್ಥಃ । ರೇತೋಮೂತ್ರಪುರೀಷಾಣಾಮುತ್ಸರ್ಗೇಚಾಶ್ರುಪಾತನೇ। ಚತುರ್ವಾರಂ ತ್ರಿವಾರಂ ವಾ ಸಮಾಚಮ್ಯ ದ್ವಿಜೋತ್ತಮಃ। ಸಂಧ್ಯಯೋರು-ಭಯೋಸ್ತು ದ್ವಿರಾಚಮೇಂತತಃ ॥ ಸ್ನಾತ್ವಾ ಪೀತ್ವಾ ಸುಪ್ತೌ ಭುಕ್ತ್ವಾ ರತ್ಯಾಪ್ರಸರ್ಪಣೇ । ಆಚಾಂತಃ ಪುನರಾಚಾಮೇದ್ವಾಸೋಪಿ ಪರಿಧಾಯಚ ॥ ಭೋಜನೇ ಹವನೇ ದಾನೇ ಉಪಹೂತಃ ಪ್ರತಿಗ್ರಹೇ। ಹವಿರ್ಭಕ್ಷಣಕಾಲೇಚ ತದ್ವಿರಾಚಮನಂ ಸ್ಮೃತಂ ॥ ಪ್ರಕ್ಷಾಳ್ಯೇ ಪಾಣಿಪಾದೌ ಚ ಭುಂಜಾನೋ ದ್ವಿರುಪಸ್ಪೃಶೇತ್ । ಶುಚೌ ದೇಶೇ ಸಮಾಸೀನಃ ಭುಕ್ತ್ವಾಚ ದ್ವಿರುಪಸ್ಪೃಶೇತ್। ಓಷ್ಠಾವಲೋಮಕೌ ಸ್ಪೃಷ್ಟ್ವಾ ವಾಸೋಪಿ ಪರಿಧಾಯಚ। ಸಂಧ್ಯಾವಿಷಯಣ್ಯಾಚಮನಾನಿ ಸಂಧ್ಯಾದುತ್ತರರೋರರ್ಘ್ಯಾದ್ಯಂತಯೋ ಜಲಪ್ರಾಶನಾ- ನಂತರಂ ಚೇತಿ ಪಂಚಸ್ಥಲೇಷು ನವ ಭವಂತಿ ॥ ತದುಕ್ತಂ॥ ಆದಾವಂತೇ ಚ ಸಂಧ್ಯಾಯಾದ್ವಿದ್ವಿರಾಚಮನಂ ಭವೇತ್ । ತಥೈವಾರ್ಘ್ಯಪ್ರದಾನಸ್ಯ ಮಧ್ಯೇ ಚೈವಸಕೃಚ್ಚರೇತ್। ಅರ್ಘ್ಯಪ್ರದಾನಸ್ಯಾದಾವಂತೇ ಚೇತ್ಯನುವರ್ತತೇ॥ ಮಧ್ಯೇ ಜಲಪ್ರಾಶನಾನಂತರಂ। ತದುಕ್ತಂ॥ ಆದಾವಂತೇ

ಚ ಸಾಯಮಗ್ನಿಶ್ಚೇತಿ ಚೋಕ್ತ್ವಾ ಪ್ರಾತಃ ಸೂರ್ಯೇತ್ಯಪಃ ಪಿಬೇತ್ । ಆಪಃ ಪುನಂತು ಮಧ್ಯಾಹ್ನೇ ತತ ಆಚಮನಂ ಭವೇದಿತಿ ॥ ಆಚಾರ್ಯೈರಪಿ, ' ಸರ್ವಕರ್ಮ- ಮೂಲಸ್ನಾನಾದೌ ಉಪಲಕ್ಷಣಯಾಭಿಪ್ರಾಯೇಣ, ಆಚಮ್ಯ ಸ್ನಾನಂ ಕುರ್ಯಾತ್ ವಿಧಾನತಃ ಇತ್ಯಾದಾವಾಚಮನಮಭಿಧಾಯ ಸರ್ವಕರ್ಮಾಂತೇ ಭೋಜನಾಂತೇ ॥ ಭುಂಜೀತ ಹೃದ್ಗತಂ ವಿಷ್ಣುಂ ಸ್ಮರಂಸ್ತದ್ಗತಮಾನಸಃ ॥ ಆಚಮ್ಯ ಮೂಲಮಂತ್ರೇಣ ಕೋಷ್ಟಂ ಸ್ವಮಭಿಮಂತ್ರಯೇದಿತಿ ಉಪಲಕ್ಷಣಾಭಿಪ್ರಾಯೇಣ ಸರ್ವಕರ್ಮಾದ್ಯಂತಯೋರಾಚಮನಸ್ಯ ಸೂಚಿತ-ತ್ವಾತ್ ॥ ಶಿಷ್ಟಸ್ಥಲಾಚಮನಂತು ॥ ಆಚಮ್ಯ ಪ್ರೋಕ್ಷ್ಯಾಚಮ್ಯ ಚ ಮಂತ್ರತಃ । ಗಾಯತ್ರ್ಯಾಂಜಲಿಂ ದತ್ವಾ ಧ್ಯಾತ್ವಾ ಸೂರ್ಯಗಂ ಹರಿಮ್ । ಮಂತ್ರತಃ ಪರಿವೃತ್ಯಾಥ ಸಮಾಚಮ್ಯ ಸುರಾದಿಕಾನ್ ತರ್ಪಯಿತ್ವೇತ್ಯುಕ್ತಂ । ಅಸ್ಯಾರ್ಥಃ ॥ ಸಮಾಚಮ್ಯಸಮಿತ್ಯನೇನ ಸಂಧ್ಯಾದ್ಯಾಚಮನ-ಸ್ಯೋಕ್ತತ್ವೇನ । ಆಚಮ್ಯಪ್ರೋಕ್ಷ್ಯೇತ್ಯತ್ರ ಪ್ರೋಕ್ಷ್ಯೇತಿ ಪದಂ ಪೂರ್ವಂ ಪಶ್ಚಾದನ್ವೇತಿ ।

ತಥಾಚ ಸಂಕಲ್ಪಾನಂತರಂ ಪ್ರೋಕ್ಷ್ಯಜಲಪ್ರಾಶನಾನಂತರಂ ಆಚಮ್ಯ ಪ್ರೋಕ್ಷ್ಯೇತ್ಯನೇನ ಋಗ್ವೇದೀನಾಂ ಆಪೋಹಿಷ್ಠೇತಿ ನವ ಋಙ್ಮಾರ್ಜನಂ । ಯಜುರ್ವೇದೀನಾಂ ಧಧಿಕ್ರಾವ್ಣೋತ್ಯಷ್ಟ ಋಙ್ಮಾರ್ಜನಂ ಚಾಭಿಧಾಯ ಆಚಮ್ಯಚೇತ್ಯನೇನ ಅರ್ಘ್ಯಾತ್ ಪೂರ್ವಾಚಮನಂ ಪರಿವೃತ್ಯಾಥಸಮಾಚಮ್ಯೇತ್ಯನೇನ ಅರ್ಘ್ಯಾನಂತರಾಚಮನಂ ಚೋಕ್ತಂ । ಆಚಮ್ಯ ಮಂತ್ರತಃ ಇತಿ ತೃತೀಯಾಸ್ತಸಿಃ ।ಮಂತ್ರೇಣೇತ್ಯರ್ಥಃ । ಮಂತ್ರತಃ ಇತಿ ಪದಂ ಪ್ರೋಕ್ಷ್ಯಾಚಮ್ಯೇತ್ಯನೇನ ಅನ್ವೇತಿ । ಆಪೋಹಿಷ್ಠೇತಿ ಮಂತ್ರೇಣ ಪ್ರೋಕ್ಷಣಂ ಕೇಶವಾದಿಭಿಃ ದ್ವಿರಾಚಮನಂ ಚ ಕರ್ತವ್ಯಮಿತಿ ಭಾವಃ । ಮಂತ್ರತಃ ಪರಿವೃತ್ಯೇತ್ಯನೇನ ಆಸಾವಾದಿತ್ಯೋ ಬ್ರಹ್ಮೇತಿ ಮಂತ್ರೇಣ ಇತ್ಯರ್ಥಃ । ಆಚಮ್ಯಚೇತಿ ಚ ಶಬ್ದೇನ ದ್ವಿರಾಚಮನಂ । ಪರಿವೃತ್ಯಾಥ- ಸಮಾಚಮ್ಯೇತ್ಯತ್ರ ಸಮಿತ್ಯುಪಸರ್ಗೇಣ ದ್ವಿರಾಚಮನಂ ಚೋಕ್ತಂ । ಅನ್ಯಥಾ ಆಚಮ್ಯೇ-ತ್ಯನೇನೈವ ಚರಿತಾರ್ಥತ್ವಾತ್ ಸಮಿತ್ಯುಪಸರ್ಗೇ ವ್ಯರ್ಥಃ । ಚ ಶಬ್ದಶ್ಚ ತಥಾ ವ್ಯರ್ಥಃ । ಆಚಮ್ಯೇತ್ಯೇತತ್ ವಸ್ತ್ರಪರಿಧಾನಾನಂತರಮಾತ್ರ ವಿಷಯಂ । ತಥಾ ಸಮಾಚಮ್ಯ ಸುರಾದಿಕಾನಿತಿ ತರ್ಪಣಾದ್ಯಾಚಮನಮಾತ್ರವಿಷಯಂ ಇತಿ ಚೇನ್ನ । ತಥಾತ್ವೇ ಧ್ಯಾನಪ್ರವಚನಾಭ್ಯಾಂ ಚ ಯಥಾಯೋಗ್ಯಮುಪಾಸನಂ । ಸ್ನಾತ್ವಾ ಸಂಪೂಜಯೇದ್ವಿಷ್ಣುಮಿತ್ಯತ್ರ ವೈಶ್ವದೇವಂ ಬಲಿಂ ಚೈವ ಕುರ್ಯಾನ್ನಿತ್ಯಂ ತದರ್ಪಣಂ ಇತ್ಯಾದಿ ಪ್ರತಿ ಸತ್ಕರ್ಮಾಚಮನಾಭಿಧಾನಾಪತ್ತೇಃ । ಏವಮುಪಲಕ್ಷಣಾಭಿಪ್ರಾಯೇ ಸತ್ಯಾಚಾರ್ಯವಚಃ ಸ್ಮೃತ್ಯೋರೇಕವಾಕ್ಯತಾಸ್ಯಾತ್ । ಚಮಿ ಅದನ ಇತ್ಯಸ್ಯಾದದನಾರ್ಥಸ್ಯ ಚಮೇಃ ನಂದಿ ಗ್ರಹೇತ್ಯಾದಿ ಲ್ಯುಜಂತಸ್ಯಾಙ ಪೂರ್ವಸ್ಯೇದಂ ರೂಪಂ ಆಚಮನಂ ॥ ಯೋಗ್ಯತಯಾ ಜಲಾದನಂ । ಮಂತ್ರಪೂರ್ವಕತ್ವದನ್ನಿಯಮ ಜಲಪ್ರಮಾಣ ಪಾತ್ರನಿಯಮಾದಿ ಸಮ್ಯಕ್ತ್ವಮಾಙೋರ್ಥಃ । ಸಂಧ್ಯಾಚಮನಾದಿಕಂ ನದ್ಯಾದಿ-ಸ್ಥಿತೋದಕೇನ ಕರಣಂ ಮುಖ್ಯಂ । ಪಾತ್ರಾಂತರೇಣ ಗೃಹೀತ್ವಾ ಯಥಾ ಧಾರೋದಕಂ ನ ಸ್ಯಾತ್ ತಥಾ ಗೋಕರ್ಣಾದಿ ಪಾತ್ರ ಜಲೇನ ಕರಣಂ ಮಧ್ಯಮಂ । ಧಾರಾಜಲೇನ ಕರಣಂ ನಿಷಿದ್ಧಂ ॥ ತದುಕ್ತಂ ॥ ಧಾರಾಚ್ಯುತೇನ ತೋಯೇನ ಸಂಧ್ಯಾಕರ್ಮವಿಗರ್ಹಿತಾ । ನದ್ಯಾಂ ತೀರ್ಥೇ ಹ್ರದೇವಾಪಿ ಮೃಣ್ಮಯೇ ದಾರು ಸಂಭವಂ । ಧೌತಾಂಬರೇ ವಾ ಸೌವರ್ಣೇ ರಾಜತೇ ತಾಮ್ರಭಾಜನೇ । ಕ್ಷಿಪ್ತ್ವಾಪೋ ವಾಮಹಸ್ತೇವಾ ಸಂಧ್ಯೋಪಾಸನಮಾಚರೇತ್। ತಥಾನ್ಯದ್ವಚನಂ ॥ ಮಾರ್ಜನಂ ತರ್ಪಣಂ ಸಂಧ್ಯಾಂ ನ ಕುರ್ಯಾದ್ವಾರಿಧಾರಯಾ । ಕೃತ್ವಾಪೋ ವಾಮಹಸ್ತೇ ವಾ ಸಂಧ್ಯೋಪಾಸನಮಾಚರೇತ್ । ಉದ್ಧೃತ್ಯ ಸಲಿಲಂ ಸಂಧ್ಯಾಮುಪಾಧಿಶ್ಚೇ ಸಮಾಚರೇತ್ । ನೈವೋಪಾಧಿಂ ವಿನಾ ಕುರ್ಯಾತ್ಸಂಧ್ಯಾಂ ನಿರ್ಜೀವ ಉಚ್ಯತೇ । ರಾಜಚೋರವ್ಯಾಘ್ರಾದ್ಯುಪಾಧಿಂ ವಿನಾ ಪಾತ್ರೋಧೃತಜಲೇನ ಸಂಧ್ಯಾಂ ನ ಕುರ್ಯಾತ್ । ಯದಿ ಉಪಾಧಿಂ ವಿನಾ ಕುರ್ಯಾತ್ಸಃ ನಿರ್ಜೀವಃ ಶವ ಉಚ್ಯತೇ ।ಜೀವನ್ಮೃತ ಇತಿ ಯಾವತ್ । ಅಮೃತಂ ಪಿಬತೇ ಪೂರ್ವೇ ಸೋಮಂ ಸೋಮಸ್ಯ ವೈ ದಿಶಿ। ಪಶ್ಚಿಮೇ ರಕ್ತಪಾನೀಯಂ ದಕ್ಷಿಣೇತು ಸುರಾಂ ಪಿಬೇತ್ । ಪೂರ್ವಾಭಿಮುಖಮಾಚಮನಂ ಅಮೃತಪಾನ ತುಲ್ಯಂ । ಉತ್ತರಾಭಿಮುಖಮಾಚಮನಂ ಸೋಮಪಾನತುಲ್ಯಂ । ಪಶ್ಚಿಮಾಭಿಮುಖಮಾಚಮನಂ ರಕ್ತಪಾನ ತುಲ್ಯಂ । ದಕ್ಷಿಣಾಭಿಮುಖ-ಮಾಚಮನಂ ಸುರಾಪಾನ ಸಮಮಿತಿ ಭಾವಃ । ಸಂಹಿತಾಂಗುಲಿನಾ ತೋಯಂ ಗೃಹೀತ್ವಾ ಬ್ರಹ್ಮತೀರ್ಥತಃ ಮುಕ್ತ್ವಾಂಗುಷ್ಠ ಕನಿಷ್ಠೇ ಚ ಶೇಷೇಣಾಚಮನಂ ಚರೇತ್ । ಗೋಕರ್ಣಾಕೃತಿಹಸ್ತೇನ ಮಾಷಮಗ್ನಂ ಜಲಂ ಪಿಬೇತ್ । ನ್ಯೂನಾತಿರಿಕ್ತ ಮಾತ್ರೇಣ ತಜ್ಜಲಂ ಸುರಯಾ ಸಮಂ । ನ ಪಾದುಕಸ್ಥೋ ನೋತಿಷ್ಠನ್ ಕುರ್ಯಾದಾಚಮನಂ ಬುಧಃ । ತಥಾ ಕಾಷ್ಠರ್ಣಾಯಸೈಃ ತ್ರಪುಸೀಸಕಪಿತ್ತಳೈಃ । **ಆಚಮನಂ ಚತುರ್ವಿಧಂ** ॥ ಶೃತಿ-ಸ್ಮೃತಿಪುರಾಣಶ್ರೋತ್ರಾಚಮನಭೇದೇನ । ಶ್ರುತ್ಯಾಚಮನ ಪ್ರಕಾರಃ ॥ ಗಾಯತ್ರೀಪಾದತ್ರಯೇಣ ತ್ರಿರಾಚಮ್ಯ। ಆಪೋಹಿಷ್ಠೇತಿ ನವಪಾದೈಃ ಅಂಗಾನಿ ಯಥಾಕ್ರಮಂ ಸ್ಪೃಷ್ಟ್ವಾ ವ್ಯಾಹೃತಿಭಿಃ ಪುನಃ ಗಾಯತ್ರೀಪಾದತ್ರಯೇಣ ತುರ್ಯದ್ವಯೇನ ಅಂಗಾಂತರಾಣಿಸ್ಪೃಶೇತ್ ॥ ತದುಕ್ತಂ॥ ಪಾದತ್ರಯಂ ನವಪದಂ ಸಪ್ತವ್ಯಾಹೃತಿ ಸಂಖ್ಯಯಾ । ಪುನಃ ಪಾದತ್ರಯಂ ಚೋಕ್ತ್ವಾ ಶಿರಸ್ತುರ್ಯದ್ವಯಂ ನ್ಯಸೇತ್ । ಯಜುರ್ವೇದಿನಾಂ ಶ್ರುತ್ಯಾಚಮನ ಪ್ರಕಾರಃ । ತ್ರಿರಾಚಮೇದ್ವಿಃಪರಿಮೃಜ್ಯ ಸಕೃದುಪಸ್ಪೃಶ್ಯಯತ್ಸವ್ಯಪಾಣಿಂ ಪಾದೌ ಪ್ರೋಕ್ಷ್ಯತಿ- ಶಿರಶ್ಚಕ್ಷುಷೀನಾಸಿಕೇಶ್ರೋತ್ರೇ ಹೃದಯಮಾಲಭ್ಯೇತಿ ತಕಾರಾದಿ ಯಕಾರಾಂತ ಗಾಯತ್ರೀ ಚತುರ್ವಿಂಶತಿವರ್ಣೈಃ

ಸ್ಮೃತ್ಯಾಚಮನಂ ಇತಿ ಕೇಚಿತ್ । ಹರಿಸ್ಮೃತಿಃ ॥ ಸ್ಮೃತ್ಯಾಚಮನಮಿತಿ ಸಂಪ್ರದಾಯವಿದಃ । ನೋಚೇಚ್ಛ್ರುತಿ ಸ್ಮೃತ್ಯಾಚಮನಯೋಃ ಸ್ಮೃತಿಪುರಾಣಾಚಮನಯೋಶ್ಚ ಭೇದಾಭಾವಪ್ರಸಂಗಾತ್ । ಕೇಶವಾದಿ ನಾಮಭಿಃ ಪೀತ್ವಾ ದ್ವಾಭ್ಯಾಂ ಪ್ರಕ್ಷಾಲಯೇತ್ಕರೌ ॥ ದ್ವಾಭ್ಯಾಂಮೋಷ್ಠೌ ಚ ಸಂಮೃಜ್ಯ ದ್ವಾಭ್ಯಾಂ ಸಂಮಾರ್ಜಯೇದ್ದನು ॥ ಏಕೇನ ಹಸ್ತೌ ಮುಕುಲೀಕೃತ್ಯೈಕೇನ ಪದೇ ಸ್ಪೃಶೇತ್ । ಏಕೇನ ತು ಶಿರಃ ಸ್ಪೃಷ್ಟ್ವಾ ನಾಸಿಕಾಧಃ ಪರೇಣಚ । ತರ್ಜನ್ಯಂಗುಷ್ಠಯೋಗೇನ ನಾಸಾರಂಧ್ರದ್ವಯಂ ಸ್ಪೃಶೇತ್ । ಮಧ್ಯಮಾಂಗುಷ್ಠಯೋಗೇನ ದ್ವಾಭ್ಯಾಂ ನೇತ್ರದ್ವಯಂ ಸ್ಪೃಶೇತ್। ಅಂಗುಷ್ಠಾನಾಮಿಕಾಭ್ಯಾಂ ಚ ಯೋಗೇನ ಶ್ರವಣೇಸ್ಪೃಶೇತ್ । ಕನಿಷ್ಠಾಂಗುಷ್ಠಯೋರ್ನಾಭಿಂ ನಾಮ್ನೈಕೇನ ಸ್ಪೃಶೇತ್ ಸುಧೀಃ । ಜನಾರ್ದನೇನ ನಾಮ್ನೈವ ಹೃದಯಂ ತು ತಥೈವ ಚ । ಅಂಗುಲೀಭಿಶ್ಚ ಸರ್ವಾಭಿರುಪೇಂದ್ರೇಣ ಶಿರಃ ಸ್ಪೃಶೇತ್ । ದಕ್ಷಹಸ್ತಸ್ಯ ಮೂಲಂ ತು ಹರಿನಾಮ್ನೈವ ಸಂಸ್ಪೃಶೇತ್ । ಕನಿಷ್ಠಾಂಗುಷ್ಠಯೋಗೇನ ವಾಮಮೂಲಂ ಸ್ಪೃಶೇದನು । ನಾಮಾನಿ ಪ್ರಣವನಮೋಂತಾನಿ ಪಾಠ್ಯಾನಿ। ಚತುರ್ವಿಂಶತಿ ನಾಮಾನಿ ಚತುರ್ವಿಂಶತಿ ವರ್ಣಕಂ। ಚತುರ್ವಿಂಶತಿ ಪಾದಾನಿ ಪ್ರಣವಾದಿ ನಮೋಂತಕಂ ಪಠೇದಿತಿ ಶೇಷಃ ॥

### ಪ್ರಾಣಯಾಮ ಮತ್ತು ಸಂಕಲ್ಪ

**(1) ಓಂ ಪ್ರಣವಸ್ಯ ಪರಬ್ರಹ್ಮ ಋಷಿಃ ಪರಮಾತ್ಮಾ ದೇವತಾ । ದೈವೀ ಗಾಯತ್ರೀ ಛಂದಃ । ಪ್ರಾಣಾಯಾಮೇ ವಿನಿಯೋಗಃ ॥ ಶ್ರೀಮಧ್ವಾಂತರ್ಯಾಮಿನ್** (ಶ್ರೀಮದಾಚಾರ್ಯರು ಮತ್ತು ಋಜುಗಣಸ್ಥದೇವತೆಗಳು ಮಾತ್ರವೇ ಶ್ರೀಹರಿಗೆ ಮುಖ್ಯಪ್ರತಿಮಾಸ್ಥಾನೀಯ-ರಾಗಿರುವುದರಿಂದ ಅವರಪ್ರತಿಮೆಯಲ್ಲಿಯೇ ಭಗವಂತನ ಚಿಂತನೆ ಮಾಡುವುದು ಕರ್ತವ್ಯವಾದ್ದರಿಂದ ಅವರ ಸ್ಮರಣೆಯನ್ನು ಮಾಡಿಯೇ ಹರಿಯ ಸ್ಮರಣೆ ಮಾಡುವುದು ಆವಶ್ಯಕ.)

**(2) ಓಂ ಭೂಃ ।** (ಪರಮಾತ್ಮನು ಗುಣಪೂರ್ಣನು)

**(3)ಓಂ ಭುವಃ ।**(ನಿರವಧಿಕ ಐಶ್ವರ್ಯವುಳ್ಳವನು)

**(4)ಓಂ ಸ್ವಃ ।** (ಸಂಪೂರ್ಣ ಸುಖಸ್ವರೂಪನು )

**(5)ಓಂ ಮಹಃ ।** (ಸಂಪೂರ್ಣ ಪೂಜ್ಯನು. ಎಲ್ಲಾ ಲೋಕಗಳಲ್ಲೂ ಪೂಜಿಸಲ್ಪಡುವವನು)

**(6) ಓಂ ಜನಃ ।** (ಸೃಷ್ಟಿಕರ್ತನು. ಜನ್ಮಾದಿ ಅಷ್ಟಕಗಳಿಂದ)

**(7)ಓಂ ತಪಃ ।** (ಜ್ಞಾನರೂಪನು.)

**(8) ಓಂ ಸತ್ಯಂ ।**(ಮುಕ್ತಾಮುಕ್ತ ನಿಯಾಮಕನು. )

**(9)ಓಂ ತತ್ಸ ವಿತು- ರ್ವರೇಣ್ಯಂ-ಭರ್ಗೋ ದೇವಸ್ಯಧೀಮಹಿ- ಧಿಯೋ ಯೋ ನಃ ಪ್ರಚೋದಯಾತ್॥**

**(10)ಓಂ ಆಪೋ ಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಸ್ಸ್ವಃ ಓಂ॥** (ತೈ. ಆ. 10 । ಪ್ರ।।27 ಅನು)

**(1)** ಇದು ಗಾಯತ್ರ್ಯಾವಾಹನದ ಪೂರ್ವದ ಪ್ರಾಣಾಯಾಮ ಮಂತ್ರ । ಇದಕ್ಕೆ ಗುಣಪೂರ್ಣನಾದ ಪರಮಾತ್ಮನೇ ಋಷಿ ದೇವತಾ ಲಕ್ಷ್ಮೀದೇವೇರು ಛಂದಸ್ಸು.

**(2-8)** ಈ ಏಳಕ್ಕೆ ಸಪ್ತವ್ಯಾಹೃತಿಗಳೆಂದು ಹೆಸರು. ಅವುಗಳಲ್ಲಿ5,6,7,8 ಇವುಗಳಿಗೆ ವಿಶ್ವಾಮಿತ್ರ ವ್ಯಾಹೃತಿಗಳೆಂದು ಹೆಸರು. ಈ ಏಳನ್ನು ಸರ್ವದಾ ''ಓಂ''ಕಾರ ಪೂರ್ವಕವಾಗಿಯೇ ಉಚ್ಚಾರ ಮಾಡತಕ್ಕದ್ದು. ಇವುಗಳು ಲೋಕವಾಚಕಗಳಲ್ಲ, ಪರಬ್ರಹ್ಮವಾಚಕಗಳು. ಇವುಗಳ ಅರ್ಥ ಮೇಲ್ಕಂಡಂತೆ ಇದೆ.

**(9)**ಇದು ಗಾಯತ್ರಿ ಸಂಧ್ಯಾವಂದನೆಗೆ ಇದೇ ಮುಖ್ಯವಾದ ಮಂತ್ರ. ಯಃ=(ಇಂಥಾ ಗುಣವುಳ್ಳ ಸವಿತೃನಾಮಕ ಸವಿತೃನಿಯಾಮಕನಾದ ಯಾವ ಪರಮಾತ್ಮನು; ನ=ನಮ್ಮಗಳಿಗೆ; ಧಿಯಃ= ಬುದ್ಧಿ ವೃತ್ತಿ ಅಥವಾ ಜ್ಞಾನೇಂದ್ರಿಯ-ಕರ್ಮೇಂದ್ರಿಯಗಳನ್ನು ; ಪ್ರಚೋದಯಾತ್= ಪ್ರೇರಣವನ್ನು ಮಾಡುತ್ತಾ ಇರುವನೋ ; ತಸ್ಯ=ಆ ; ದೇವಸ್ಯ=ಕ್ರೀಡಾದಿ ಗುಣವಿಶಿಷ್ಟತ್ವೇನ ಪ್ರಕಾಶಮಾನನಾದ; ಸವಿತುಃ=ಜಗತ್ತಿಗೆ ಜನಕನಾದಂತಹ ಅಂದರೆ ಸೃಷ್ಟಿಕರ್ತನಾದ; ತತ=ಗುಣಗಳಿಂದ ವ್ಯಾಪ್ತನಾದ; ವರೇಣ್ಯಂ= ಸರ್ವರಿಂದಲೂ ಭಜನೀಯನಾದಂಥಾ; ಭರ್ಗಃ= ಪರಿಪೂರ್ಣಕಾಂತಿ ಕ್ರೀಡಾ-ಜ್ಞಾನಸ್ವರೂಪನಾದಂಥಾ ಪರಮಾತ್ಮನ ಸ್ವರೂಪವನ್ನು; ಧೀಮಹಿ=ಧ್ಯಾನ ಮಾಡುತ್ತೇವೆ.

**(10)** ಇದು ಗಾಯತ್ರೀ ಶಿರಸ್ಸು .( ಆ ಸವಿತೃನಾಮಕ ಪರಮಾತ್ಮನು) ಆಪಃ=ಪಾಲನರೂಪನು; ಜ್ಯೋತಿಃ=ಪ್ರಕಾಶರೂಪನು; ರಸಃ=ಸಾರಭೂತವಾದ ಆನಂದರೂಪನು; ಅಮೃತಂ=ಮರಣ ರಹಿತನು; ಬ್ರಹ್ಮ=ಗುಣಪೂರ್ಣನು; ಇಂಥಾ ರೂಪನಾದ ಶ್ರೀಪರಮಾತ್ಮನನ್ನು ನಾವುಗಳು ಧ್ಯಾನ ಮಾಡುತ್ತೇವೆ.

**ಜ್ಞಾಪಿಕಾ**:-ಈ ಮಂತ್ರಾನಂತರ ದೇಶಕಾಲಾದಿಗಳನ್ನು ಮುಂದೆ ಹೇಳುವ ಪ್ರಕಾರ(ಸಂಕಲ್ಪದ ಪ್ರಕಾರ) ಸ್ಮರಣೆ ಮಾಡಬೇಕು.

''ಪ್ರಾಣಾಯಾಮಂ ತತಃ ಕೃತ್ವಾ ಪ್ರಣವಸ್ಮೃತಿಪೂರ್ವಕಂ।'' ಎಂದು ಪ್ರಮಾಣವಿರುವುದರಿಂದ ಓಂಕಾರಪೂರ್ವಕವಾಗಿ ಈ ಮಂತ್ರವನ್ನು **ಮೂರಾವರ್ತಿ ಉಚ್ಚರಿಸಬೇಕು.**

''**ಯೋ ಹವಾ ಅವಿದಿತ ಆರ್ಷಚ್ಛಂದೋದೇವತಾ ಬ್ರಾಹ್ಮಣೇ**'' ಇತ್ಯಾದಿ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಹೇಳಿದ ಪ್ರಮಾಣಾನುಸಾರ ಪ್ರತಿಮಂತ್ರಕ್ಕೂ ಋಷಿಛಂದಸ್ಸು ದೇವತಾ ಇವುಗಳನ್ನು ತಿಳಿದುಕೊಂಡು ಉಚ್ಚಾರ ಮಾಡತಕ್ಕದ್ದು ಹೊರ್ತು ಅವುಗಳನ್ನು ಉಚ್ಚಾರಣೆ ಮಾಡದೆ ಬಿಡಕೂಡದು. ಆ ಪ್ರಕಾರ ಮಂತ್ರೋಚ್ಚಾರಣೆ ಮಾಡಿದರೆ ಫಲವಿಲ್ಲ.

**ಪ್ರಶ್ನೆ:- ಪ್ರಾಣಾಯಾಮದ ಮಂತ್ರದ ಫಲವೇನು?**

**ಉ:-**ಹಿಂದಿನ ರಾತ್ರಿಕಾಲದಲ್ಲಿ ಮಾಡಿದ ಪಾಪ ಪ್ರಾತಸ್ಸಂಧ್ಯಾ ಪ್ರಾಣಾಯಾಮದಿಂದಲೂ, ಹಗಲು ಮಾಡಿದ ಪಾಪ ಮಧ್ಯಾಹ್ನ ಸಾಯಂಕಾಲ ಪ್ರಾಣಾಯಾಮದಿಂದಲೂ ನಾಶವಾಗುತ್ತದೆಂದು ಈ ಕೆಳಗೆ ಹೇಳುವ ಪ್ರಮಾಣವು ತಿಳಿಸುತ್ತದೆ.

'' ಯದಾತ್ರ್ಯಾತ್ಕುರುತೇ ಪಾಪಂ। ಕರ್ಮಣಾಮನಸಾಗಿರಾ।
ತಿಷ್ಠಂತ್ವೇಪೂರ್ವಸಂಧ್ಯಾಯಾಂ। ಪ್ರಾಣಾಯಾಮೈರ್ವ್ಯಪೋಹತಿ॥
ಯದಹ್ನಾತ್ ಕುರುತೇ ಪಾಪಂ। ಕರ್ಮಣಾಮನಸಾಗಿರಾ।
ಆಸೀನಃ ಪಶ್ಚಿಮಾಂ ಸಂಧ್ಯಾಂ। ಪ್ರಾಣಾಯಾಮೈರ್ವ್ಯಪೋಹತಿ॥''

**ಪ್ರಶ್ನೆ :- ಪ್ರಾಣಾಯಾಮ ಯಾವ ಪ್ರಕಾರ ಮಾಡಬೇಕು?**

**ಉ:-** ''ಬಧ್ವಾಸನಂ ನಿಯಮ್ಯಾಸೂನ್ ಸ್ಮೃತ್ವಾಚಾರ್ಯಾದಿಕಂ ತಥಾ।
ಸನ್ನಿಮೀಲಿತದೃಜ್ ಮೌನೀ।ಪ್ರಾಣಾಯಾಮಂ ಸಮಭ್ಯಸೇತ್॥''
ಎಂದು ಬೃಹಸ್ಪತಿವಾಕ್ಯವನ್ನು ಅನುಸರಿಸಿ ಆಸನವನ್ನು ಹಾಕಿಕೊಂಡು ವಾಯುನಿರೋಧನಮಾಡಿ ಗುರುಗಳನ್ನು ಸ್ಮರಣೆಮಾಡುತ್ತಾ ಕಣ್ಣುಗಳನ್ನು ಮುಚ್ಚಿಮೌನವನ್ನು ಧಾರಣಮಾಡಿ ಪ್ರಾಣಾಯಾಮವನ್ನು ಆಚರಿಸತಕ್ಕದ್ದು.

**ಪ್ರಶ್ನೆ:- ಪ್ರಾಣಾಯಾಮದ ಲಕ್ಷಣವೇನು?**

**ಉ:- ''**ಸವ್ಯಾಹೃತಿಂ ಸಪ್ರಣವಾಂ ಗಾಯತ್ರೀ ಶಿರಸಾಂ ಸಹ।
ತ್ರಿಃ ಪಠೇದಾಯತಪ್ರಾಣಃ ಪ್ರಾಣಾಯಾಮಸ್ಸ ಉಚ್ಯತೇ॥'' ಎಂದು ಮನುಸ್ಮೃತಿಯಲ್ಲಿ ಇರುವುದರಿಂದ ವ್ಯಾಹೃತಿ ಪ್ರಣವ, ಗಾಯತ್ರಿ ಶಿರಸ್ಸು ಸಹಿತ ಗಾಯತ್ರಿಯನ್ನು ಮೂರಾವರ್ತಿ ಪಠನಮಾಡುವುದು ಪ್ರಾಣಾಯಾಮವೆಂದು ಕರೆಯಲ್ಪಡುತ್ತದೆ.

'ಗಾಯತ್ರೀಂ ಶಿರಸಾಸಾರ್ಧಂ ಜಪೇದ್ವ್ಯಾಹೃತಿಪೂರ್ವಿಕಾಃ।
ಪ್ರತಿಪ್ರಣವಸಂಯುಕ್ತಾಂ ತ್ರಿರಯಂ ಪ್ರಾಣಸಂಯಮಃ॥
ಭೂರ್ಭುವಸ್ಸ್ವರ್ಮಹರ್ಜನಸ್ತಪಃಸತ್ಯಂ ತಥೈವ ಚ।
ಪ್ರತ್ಯೋಂಕಾರೇಣಸಂಯುಕ್ತಂ ತಥಾತತ್ಸವಿತುಃ ಪರಂ॥
ಓಮಾಪೋಜ್ಯೋತಿರಿತ್ಯೇತಚ್ಛಿರಃ ಪಶ್ಚಾತ್ಪ್ರಯೋಜಯೇತ್।' ಎಂದು ಯಾಜ್ಞವಲ್ಕ್ಯಸ್ಮೃತಿಯಲ್ಲಿ ಇದೆ. ಮತ್ತು,
''ತ್ರಿರಾವರ್ತನಯೋಗಾತ್ತುಪ್ರಾಣಾಯಾಮಸ್ಸಶಬ್ದಿತಃ।
ತಪಃ ಸತ್ಯಂ ತತಃ ಪೂರ್ವಂ ಭೂರ್ಭುವಃ ಸ್ವರ್ಮಹರ್ಜನಃ॥
ಪೃಥಗೋಂಕಾರಸಂಯುಕ್ತಂ ತಥಾ ತತ್ಸವಿತುಃ ಪರಂ।
ಓಮಾಪೋಜ್ಯೋತಿರಿತ್ಯಾದಿ ಶಿರಃ ಪಶ್ಚಾತ್ಪ್ರಯೋಜಯೇತ್॥
ಇತಿ ಮಂತ್ರಂ ತ್ರಿರಾವೃತ್ಯಾ ಪ್ರಾಣಾಯಾಮಂ ಚರೇದ್ಬುಧಃ।' ಎಂದು ಇನ್ನೊಂದು ಪ್ರಮಾಣವಿದೆ.

**ಪ್ರಶ್ನೆ:- ಈ ಪ್ರಾಣಾಯಾಮ ಎಷ್ಟುವಿಧವಾದದ್ದು ?**

**ಉ:-** ''ದಕ್ಷಿಣೇರೇಚಯೇದ್ವಾಯುಂ ವಾಮೇನಾಪೂರ್ಯಚೋದರಂ।
ಮಧ್ಯತಃ ಕುಂಭಕಂ ಕುರ್ಯಾತ್॥'' ಎಂದು ವ್ಯಾಸಸ್ಮೃತಿಯಲ್ಲಿ ಹೇಳುತ್ತದೆ.
''ಪೂರಕಃ ಕುಂಭಕೋರೇಚ್ಯಃ। ಪ್ರಾಣಾಯಾಮಸ್ತ್ರಿಲಕ್ಷಣಃ।

ನಾಸಿಕಾ ಕೃಷ್ಣ ಉಚ್ಛ್ವಾಸೋಧ್ಮಾತಃ ಪೂರಕ ಉಚ್ಯತೇ॥
ಕುಂಭಕೋ ನಿಶ್ಚಲಶ್ವಾಸೋರಿಚ್ಯಮಾನಸ್ತು ರೇಚಕಃ॥'' ಎಂದು ಯೋಗಯಾಜ್ಞವಲ್ಕ್ಯ ಪ್ರಮಾಣ- ವಿರುವುದರಿಂದ ಈ ಪ್ರಾಣಾಯಾಮವು ಪೂರಕ, ಕುಂಭಕ, ರೇಚಕ ಎಂಬ ನಾಮಗಳಿಂದ ತ್ರಿವಿಧವಾದದ್ದು. ಒಳಗಿನ ವಾಯುವನ್ನು ಬಲಕಡೆ ಮೂಗಿನಹೊಳ್ಳೆಯಿಂದ ಹೊರಕ್ಕೆ ಬಿಡುವುದು ರೇಚಕವು; ವಾಯುವನ್ನು ನಿಶ್ಚಲವಾಗಿ ಧಾರಣಮಾಡುವುದು ಕುಂಭಕ; ಹೊರಗಿನ ವಾಯುವನ್ನು ಎಡಹೊಳ್ಳೆಯಿಂದ ತೆಗೆದುಕೊಳ್ಳೋಣವು ಪೂರಕವೆಂದು ಹೆಸರುಳ್ಳದ್ದು. ''ರೇಚಯೇದ್ದಕ್ಷಿಣ ಯಾ ನಾಸಾ ಪೂರಯೇದ್ವಾಮನಸ್ತತಃ।'' ಎಂದು ಪ್ರಮಾಣವಿದೆ.

ಪ್ರಾಣಾಯಾಮ ಕಾಲದಲ್ಲಿ ಗೃಹಸ್ಥ, ವಾನಪ್ರಸ್ಥಾಶ್ರಮಿಗಳು ಐದು ಬೊಟ್ಟುಗಳಿಂದ ಪ್ರಣವ (ಓಂ)ಮುದ್ರಾದಿಂದ ನಾಸಾಗ್ರವನ್ನು ಹಿಡಿಯತಕ್ಕದ್ದು. ಯತಿ, ಬ್ರಹ್ಮಚಾರಿಗಳು ಓಂಕಾರಮುದ್ರಾ ನಾಮಕವಾದ ಕನಿಷ್ಠ, ಅನಾಮಿಕ, ಅಂಗುಷ್ಠ ಬೆಟ್ಟುಗಳಿಂದ ನಾಸಾಗ್ರವನ್ನು ಹಿಡಿಯತಕ್ಕದ್ದು.

ಮತ್ತು ಪ್ರಾಣಾಯಾಮವು ಅಗರ್ಭ, ಸಗರ್ಭಭೇದಗಳಿಂದ ಎರಡುವಿಧವಾದದ್ದು. ಅಗರ್ಭಕ್ಕಿಂತಲೂ ಸಗರ್ಭವು ವಿಶೇಷ ಉತ್ತಮವಾದದ್ದು.

**ಶ್ರೀತಿಮ್ಮಣ್ಣಾರ್ಯರು:-ಅಥ ಪ್ರಾಣಾಯಾಮಃ :-** ಪ್ರಾಣಸ್ಯಾಂತಃ ಸಂಚಾರಿಣಃ ಶ್ವಾಸವಾಯೋರಾಯಾಮಃ । ನಿರೋಧನಂ ಪ್ರಾಣಾಯಾಮಃ । ಮಂತ್ರ ಮಂತ್ರಾರ್ಥಾನುಸಂಧಾನ ಪೂರ್ವಕ ಪ್ರಾಣಾಯಾಮೇನಾಪಿ ಆಚಮನಾಚ್ಛುಚಿಃ ॥ ತದುಕ್ತಂ ॥ ಪ್ರಣವ-ವ್ಯಾಹೃತಿಃ ಸಪ್ತಗಾಯತ್ರೀ ಶಿರಸಾ ಸಹ। ತ್ರಿಃ ಪಠೇದಾಯತ ಪ್ರಾಣಃ ಪ್ರಾಣಾಯಾಮಃ ಸ ಉಚ್ಯತೇ॥ ರೇಚಯಿತ್ವಾ ದಕ್ಷಿಣತಃ ಪೂರಯಿತ್ವಾ ಚ ವಾಮತಃ॥ ಕುಂಭಕೇ ಶ್ವಾಸರೋಧಶ್ಚ ಪ್ರಾಣಾಯಾಮ ಸ್ಸಉಚ್ಯತೇ॥ ಅಗರ್ಭಶ್ಚ ಸಗರ್ಭಶ್ಚ ಪ್ರಾಣಾಯಾಮೋ ದ್ವಿಧಾ ಮತಃ॥ ಅಗರ್ಭಾತ್ ಕೋಟಿಗುಣಿತಂ ಸಗರ್ಭೋಽಧ್ಯಾನ ಸಂಯುತಃ । ತಂತ್ರಸಾರೇ ಚ ॥ ಪ್ರಾಣಾಯಾಮೋ ರೇಚಯಿತ್ವಾ ಪೂರಯಿತ್ವಾ ಚ ಕುಂಭಕೇ । ತಾನೈಸ್ತ್ರಿದ್ವಾದಶಾವೃತ್ತ್ಯೈದ್ಯೇಕದ್ವಾದಶಕೇನ ವಾ। ತತ್ತನ್ಮಂತ್ರೇಣ ವಾ ಕಾರ್ಯೋಽಗಾಯತ್ರ್ಯಾದಶತಾನಕೈರಿತಿ॥ ಉಕ್ತಲಕ್ಷಣ ಪ್ರಾಣಾಯಾಮಾಃ ಸಂಧ್ಯಾವಿಷಯೇ ಅಷ್ಟೌ ಭವಂತಿ । ಸಂಧ್ಯಾದಾವರ್ಘ್ಯದಾನೇ ಚ ಪ್ರಾಣಾಯಾಮೈಕಮಾಚರೇತ್ । ಆದಾವಂತ್ಯೇ ಚ ಗಾಯತ್ರ್ಯಾಃ ಪ್ರಾಣಾಯಾಮಃ ತ್ರಯಸ್ತ್ರಯಃ। ಋಷಿಛಂದೋದೇವತಾನುಸ್ಮರಣ ಪೂರ್ವಕಂ ದಶಪ್ರಣವಯುಕ್ತ ಸ ವ್ಯಾಹೃತಿ ಗಾಯತ್ರೀಂ ಶಿರಸಾ ಸಹ ವದನ್ ಪ್ರಾಣಾಯಾಮಂ ಕುರ್ಯಾತ್।

ಪ್ರಣವಸ್ಯ ಪರಬ್ರಹ್ಮಋಷಿಃ ದೈವೀಗಾಯತ್ರೀ ಛಂದಃ ಪರಮಾತ್ಮಾ ದೇವತಾ ॥ ಪ್ರಾಣಾಯಾಮೇ ವಿನಿಯೋಗಃ॥ ಓಂ ಭೂಃ। ಓಂ ಭುವಃ। ಓಂ ಸ್ವಃ। ಓಂ ಮಹಃ। ಓಂ ಜನಃ। ಓಂ ತಪಃ। ಓಂ ಸತ್ಯಂ। ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್ ॥ ಓಂ ಆಪೋಜ್ಯೋತಿರಸೋಮೃತಂ ಬ್ರಹ್ಮ ಭೂರ್ಭುವಸ್ವರೋಂ॥ ಇತಿ ಮಂತ್ರಃ॥

''ಯೋ ಹ ವಾ ವಿದಿತ ಆರ್ಷಛಂದೋದೈವತಬ್ರಾಹ್ಮಣೇನ ಮಂತ್ರೇಣ ಯಜತಿ ಯಾಜಯತಿ ವಾಧ್ಯಾಪಯತಿ ವಾ ಸ್ಥಾಣುಂ ವರ್ಛತಿ ಗಂತ್ರೇ ವಾಪದ್ಯತೇ ಪ್ರವಾಮೀಯತೇ ಪಾಪೀಯಾನೂಭವತೀ''ತಿ ಶ್ರುತೇಃ ಯಜುರ್ವೇದೀನಾಮಪಿ ಋಷಿಛಂದೋ- ದೇವತಾನುಸ್ಮರಣಂ ಆವಶ್ಯಕಂ॥ ಆಚಾರ್ಯೈರಪಿ ಯಜುಃ ಪ್ರಭೇದೇಶಾವಸ್ಯತೈತರ್ಯಬೃಹದಾರಣ್ಯಕಭಾಷ್ಯೇಷು ಋಷ್ಯಾದ್ಯುಕ್ತೇಃ॥ ಓಂ ಇತ್ಯೇಕಾಕ್ಷರಮಿತಿ ಗಾಯತ್ರೀ ಹೃದಯೇ ಪ್ರಣವಗಾಯತ್ರ್ಯೋಃ ಋಷ್ಯಾಭಿಧಾನಾಚ್ಚ ॥ ಪ್ರಧಾನ ಪ್ರಣವ ಗಾಯತ್ರ್ಯೋರುಕ್ತತ್ವಾತ್ ಋಷ್ಯಾದ್ಯನುಸ್ಮರಣಸ್ಯೋಕ್ತಿಮಂತರೇಣ ಮನನಾಸಂಭವಾಚ್ಚ ತದಿತರಮಂತ್ರಾಣಾಂ ಯಾಜುಷೈಃ ಋಷ್ಯಾದ್ಯವಚನಂ ನ ದೋಷಾಯ । ಪೂರ್ವಂ ಋಷಿಃ ತತಃ ಛಂದಃ ತತೋ ದೇವತಾ। ಅಯಮೇವ ಕ್ರಮಃ ಋಷ್ಯಾದ್ಯಭಿಧಾಯಕ ''ಯೋಹವೇತಿ'' ಮಂತ್ರೇ ಅಸ್ಯೈವ ಕ್ರಮಸ್ಯ ಶ್ರುತತ್ವಾತ್ । ಮಹಾಭಾರತೇ ಚ ವಿಷ್ಣೋರ್ನಾಮಸಹಸ್ರಸ್ಯ ವೇದವ್ಯಾಸೋ ಮಹಾ ಋಷಿಃ ಛಂದೋನುಷ್ಟುಪ್ ತಥಾ ದೇವೋ ಭಗವಾನ್ ವಿಶ್ವರೂಪಧೃಗಿತಿ ಏತತ್ ಕ್ರಮೋಕ್ತೇಃ। ತಂತ್ರಸಾರೇಪಿ। ವ್ಯಾಹೃತೀನಾಂ ಪ್ರಜಾಪತಿಃ। ಮುನಿಶ್ಛಂದಸ್ತು ಗಾಯತ್ರೀ ದೇವತಾ ಭಗವಾನ್ ಹರಿರಿತ್ಯಸ್ಯೈವ ಕ್ರಮಸ್ಯೋಕ್ತೇಃ॥ ಮಂತ್ರಪದ್ಧತಾವಪಿ ಅಯಂ ಕ್ರಮಃ ಶ್ರೂಯತೇ॥ ಜಾಪಕೈರಪಿ ಪಠ್ಯತೇ। ಋಷಿರ್ಮಂತ್ರದ್ರಷ್ಟಾ। ಛಂದಃ ಅಕ್ಷರಸಂಕೇತೇನ ಗಾಯತ್ರ್ಯಾದಿ ದೇವತಾ ಪ್ರತಿಪಾದ್ಯಾ। ಸರ್ವಸ್ಯ ವೇದಸ್ಯ ಪ್ರಥಮಪ್ರತಿಪತ್ತೌ ಹಯಗ್ರೀವಃ ದ್ವಿತೀಯಃ ಹಿರಣ್ಯ-ಗರ್ಭಃ ತೃತೀಯಃ ಗರುಡಾದಿಃ। ಚತುರ್ಥಾದ್ಯಾ ಇಂದ್ರಸೂರ್ಯಾದಯಃ। ತದನಂತರಂ ಋಗ್ವೇದಸ್ಯ ಪೈಲಾದಯಃ। ಯಜುರ್ವೇದಸ್ಯ ವೈಶಂಪಾಯನಾದಯಃ । ಸೂಕ್ತವರ್ಣ ಋಗಾದಿಮಂತ್ರಾಣಾಂ ಮಧುಚ್ಛಂದ ಸಿಂಧುದ್ವೀಪಾದಯೋ ದ್ರಷ್ಟವ್ಯಾಃ । ಗಾಯತ್ರ್ಯಾದಿ ಛಂದಸಾಂ ರಮಾವಾರುಣೀ ಸೌಪರ್ಣೀ ರುದ್ರಾಣೀಂದ್ರಾಣೀ ವರುಣಾನೀ ಸಂಜ್ಞಾ ಸ್ವಾಹಾದಯೋ ದೇವತಾಃ। ಮಂತ್ರಪ್ರತಿಪಾದ್ಯ ದೇವತಾಃ॥ ಶ್ರೀಹರಿಮಾರಭ್ಯಶಕ್ರಾಂತಾಃ। ಅವಾಂತರ ದೇವತಾಸ್ತು ತತ್ತಲ್ಲಿಂಗೇನ ಜ್ಞೇಯಾಃ॥ ಏತತ್ಸರ್ವಂ ಋಗ್ಭಾಷ್ಯೇ ಸ್ಪಷ್ಟಂ।

**ಅಥ ಮಂತ್ರಾರ್ಥಃ** :-ಓಮಿತಿ ಬ್ರಹ್ಮೇತಿ ಶ್ರುತೇಃ । ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ ಇತಿ ಗೀತೋಕ್ತೇಃ॥ ಅಹಮೇಕೋಽಖಿಲಗುಣೋ ವಾಚಕಃ ಪ್ರಣವೋ ಮಮೇತಿ ತಂತ್ರಸಾರೋಕ್ತೇಃ। ಓತತ್ವವಾಚೀಹ್ಯೋಂಕಾರೋ ವಕ್ಷ್ಯಸೌ ತದ್ಗುಣೋ

ತತಾಮಿತ್ಯನುವ್ಯಾಖ್ಯಾನೋಕ್ತೇಃ ॥ ಓಂ ಗುಣಪರಿಪೂರ್ಣೋ ವಿಷ್ಣು ಸರ್ವಛಂದೋಭಿದೋಹ್ಯೇಷ ಸರ್ವದೇವಾಭಿದೋಹ್ಯಸೌ । ಸರ್ವಲೋಕಾಭಿಧೋಹ್ಯೇಷ ತೇಷಾಂ ತದುಪಚಾರತ ಇತಿ ಭಾಷ್ಯೋದಾಹೃತ ಪಾದ್ಮ ವಚನಾತ್ ॥ ಭೂರಾದಿ ಸಪ್ತವ್ಯಾಹೃತಯಃ ಲೋಕತಃ ಪ್ರಸಿದ್ಧ್ಯಾ ಸಪ್ತಲೋಕವಾಚಕಾಃ ಅಪಿ ತತ್ತಚ್ಛಬ್ದಗುಣಯೋಗೇನ ಸಪ್ತಲೋಕಸ್ಥಿತ ಭಗವದ್ವಾಚಕಾಃ । ತಥಾ ಹಿ ॥ ವ್ಯಾಹೃತೀನಾಂ ಚ ಭೂಮತಃ ಭಾವನಾಚ್ಚೈವಸುತ್ವಾಚ್ಚೈತ್ಯನುವ್ಯಾಖ್ಯಾನೋಕ್ತ ದಿಶಾ ॥ ಪೂರ್ಣೋ ಭೂತಿವರೋನಂತಸುಖೋಯದ್ವ್ಯಾಹೃತೀರಿತ ಇತಿ ಋಗ್ಭಾಷ್ಯೋಕ್ತ ದಿಶಾ ಭೂಃ ಪೂರ್ಣಃ ಭೂಮಿಸ್ಥಿತಃ ಭುವಃ ಚಿದ್ಭಾವನಾತಃ । ಭೂತಿ ವರತ್ವಾಚ್ಚ ಭುವರ್ಲೋಕಾಂತರ್ಗತಃ । ಸ್ವಃ ಸುವರೋತಿ ಶಾಖಾಭೇದೇನ ಪಾಠದ್ವಯಂ । ಅನಂತಸುಖಿತ್ವಾತ್ಸ್ವರ್ಲೋಕಾಂತರ್ಗತಃ । ಮಹಃ ಮಹ ಇತಿ ಬ್ರಹ್ಮೇತಿ ತೈತ್ತರೀಯಶ್ರುತೇಃ । ಮಹಃ ಪೂರ್ಣಂ ಮಹರ್ಲೋಕಾಂತರ್ಗತಃ । ಮಹತ್ವಾದ್ವಾ ಮಹಃ ॥ ಜನಯತಿ ಸರ್ವಮಿತಿ ಜನಃ । ಜನಲೋಕಾಂತರ್ಗತಃ ॥ ತಪ ಆಲೋಚನ ಇತಿ ಜಾನಾತಿ ಸರ್ವಮಿತಿ ವಾ । ತಪಯತಿ ದೈತ್ಯಾ ಇತಿ ವಾ ತಪಃ ।ತಪಲೋಕಾಂತರ್ಗತಃ ॥ ಸತ್ಯಂ ಸಾಧುರೂಪತ್ವಾತ್ಸತ್ಯಂ ಸತ್ಯಲೋಕಾಂತರ್ಗತಃ ಭಗವಾನ್ ಸತ್ಯಶಬ್ದವಾಚ್ಯಃ ॥ ಓಂಕಾರ ಶಬ್ದವಾಚ್ಯೋ ವಿಷ್ಣುಃ ಭೂಃ ಪೂರ್ಣಃ ಇತಿ ಪ್ರತ್ಯೇಕಂ ಸಂಬಂಧಃ ॥ ತಥಾ ಚ ಓಮಿತಿ ವಿಶೇಷ್ಯಂ ಪದಂ ಭೂರ್ಭುವ ಇತ್ಯಾದಿಕಂ ವಿಶೇಷಣಮಿತ್ಯುಕ್ತಂ ಭವತಿ । ಯಃ ಜಗತ್ಪ್ರಸವಿತಾ ವಿಷ್ಣುಃ ನಃ ಅಸ್ಮಾಕಂ ಧಿಯಃ ಅಶೇಷಬುದ್ಧಿಃ ಭಾನತಿ ಜ್ಞಾನರೂಪೋ ವಾ ; ಭರಣ ಗಮನ ಕರ್ತಾ ವಾ ಭರ್ಗಃ । ಪ್ರಚೋದಯಾತ್ ಪ್ರೇರಯತು । ತಸ್ಯ ದೇವಸ್ಯ ಕ್ರೀಡಾದಿಗುಣವಿಶಿಷ್ಟಸ್ಯ ಸವಿತುಃ ಜಗತ್ಪ್ರಸವಿತುಃ ವಿಷ್ಣೋರ್ವರೇಣ್ಯಂ ವರಣೀಯಂ ತತ್ ಸರ್ವಗುಣ ತತಂ ರೂಪಂ ಧೀಮಹಿ ಧ್ಯಾಯೇಮ ಇತ್ಯರ್ಥಃ ॥ ತದುಕ್ತಂ ಋಗ್ಭಾಷ್ಯೇ ॥ ಗುಣೈಸ್ತತಃ ಪ್ರಸವಿತಾ ವರಣೀಯೋ ಗುಣೋನ್ನತೇಃ । ಭಾನಾತಿ ಜ್ಞಾನರೂಪತ್ವಾದ್ಭರ್ಗೋ ಧ್ಯೇಯೋಽಖಿಲೈಃ ಜನೈಃ ॥ ಪ್ರೇರಕೋ ಸರ್ವಬುದ್ಧೀನಾಂ ಸ ಗಾಯತ್ರ್ಯರ್ಥ ಈರಿತಃ ॥ **ಸುಧಾಯಾಂ ಚ ॥** ನನು ಗಾಯತ್ರ್ಯಾಂ ಯೋ ಭರ್ಗಃ ನೋಸ್ಮಾಕಂ ಧಿಯಃ ಪ್ರಚೋದಯಾತ್ ಪ್ರೇರಯೇತ್ ತಸ್ಯ ಸವಿತುರ್ದೇವಸ್ಯ ವರೇಣ್ಯಂ ರೂಪಂ ಧೀಮಹಿ ಚಿಂತಯಾಮ ಇತಿ ॥ ಭರ್ಗನಾಮಕಃ ಸವಿತಾ ಪ್ರತಿಪಾದ್ಯೋ ದೃಶ್ಯತೇ । ತತ್ಕಥಂ ಭಗವತ್ಪರತ್ವಮಿತ್ಯತ ಆಹ ॥ ಸ ಏವ ಭರ್ಗ ಶಬ್ದಾರ್ಥ ಇತಿ । ಭರಣಗಮನ ಯೋಗಾದಿತಿ ಶೇಷಃ ॥ ಉಪಲಕ್ಷಣಂ ಚೈತತ್ । ಜಗತ್ಪ್ರಸವಿತೃತ್ವಾತ್ ಸವಿತೇತಿ ದ್ರಷ್ಟವ್ಯಂ । ನ ತು ಸೂರ್ಯಃ । ತಥಾತ್ವೇ ಗಾಯತ್ರ್ಯಾ ವ್ಯಾಹೃತ್ಯರ್ಥತಾನುಪಪತ್ತೇಃ । ಧ್ಯೇಯಃ ಸದಾ ಸವಿತೃಮಂಡಲ ಮಧ್ಯವರ್ತೀ ನಾರಾಯಣ ಇತ್ಯಾದ್ಯಾಗಮವಿರೋಧಶ್ಚ ಇತಿ । ಅತ್ರ ಭಗವದ್ರೂಪ ವಿಶೇಷಾನ್ ಜಪಪ್ರಕರಣೇ ವಕ್ಷ್ಯಾಮಃ ॥

ಓಂ ಆಪ ಇತ್ಯಾದಿ ಶಿರೋರ್ಥಃ:- ಆಜ್ ಬಾಧ್ವಾತ ॥(?) ಪೃಪಾಲನ ಪೂರಣಯೋರಿತಿ ಧಾತೋಃ । ಓಂ ಗುಣಪರಿಪೂರ್ಣೋ ವಿಷ್ಣುಃ । ಆಪಃ ಆ ಸಮ್ಯಕ್ ಜಗತ್ಪಾಲಕಃ ಭಕ್ತಾಭೀಷ್ಟ ಪೂರಕಃ ಜ್ಯೋತಿಃ ಪ್ರಕಾಶರೂಪಃ ಜ್ಯೋತಿಶ್ಚರಣಾಭಿಧಾನಾತ್ ಇತಿ ಸೂತ್ರೇಣ ಜ್ಯೋತಿಃ ಶಬ್ದಾರ್ಥೋ ಹರಿಃ ಇತಿ ಸ್ಪಷ್ಟಂ । ರಸಃ ಸಾರೋವರಶ್ಚೇತಿ ಶಬ್ದಾತ್ ಶ್ರೇಷ್ಠಸ್ಯ ವಾಚಕಾ ಇತಿ ರಸಃ ಶ್ರೇಷ್ಠಃ ಸರ್ವೋತ್ತಮ ಇತ್ಯರ್ಥಃ ॥ ಅಮೃತಂ ನಿತ್ಯಮುಕ್ತಂ । ಬ್ರಹ್ಮಗುಣಪರಿಪೂರ್ಣಂ । ಭೂರ್ಭುವಸ್ವರೋಂ ಸಮಸ್ತವ್ಯಾಹೃತಿಪ್ರತಿಪಾದ್ಯಂ । ಓಂಕಾರ ವಾಚ್ಯಂ ವಾ । ಇತಿ ಮಂತ್ರೇಣ ವಾಯುಂ ವಿಷ್ಣುಂ ಸಂಸ್ಮರನ್ ಪ್ರಾಣಾಯಾಮಂ ಕುರ್ಯಾತ್ ॥ ರೇಚಯಿತ್ವಾ ದಕ್ಷಿಣತಃ ಪೂರಯಿತ್ವಾಚ ವಾಮತಃ ಕುಂಭಕೇ ಸುಷುಮ್ನಾಯಾಂ ವಾಯುಂ ವಿಷ್ಣುಂ ಚ ಸಂಸ್ಮರೇತ್ ॥ ಇತಿ ತಂತ್ರಸಾರೋಕ್ತೇಃ ॥ ರೇಚಕಾದೀನಾಂ ಬ್ರಹ್ಮವಿಷ್ಣುಮಹೇಶ್ವರಾ ದೇವಾ ಆಗಮಾಂತ- ರೋಕ್ತಾ ದ್ರಷ್ಟವ್ಯಾಃ ॥ ಇತಿ ಪ್ರಾಣಾಯಾಮ ವಿಧಿಃ ॥

### ಅಥ ಸಂಕಲ್ಪಃ -

**ಶ್ರೀಮಧ್ವಾಂತರ್ಯಾಮಿನ್ ಗೋವಿಂದ ಗೋವಿಂದ , ಶ್ರೀವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ ಆದ್ಯ ಬ್ರಹ್ಮಣಃ , ದ್ವಿತೀಯಪರಾರ್ಧೇ, ಶ್ವೇತವರಾಹಕಲ್ಪೇ , ವೈವಸ್ವತಮನ್ವಂತರೇ, ಅಷ್ಟಾವಿಂಶತಿ ತಮೇ, ಕಲಿಯುಗೇ, ಪ್ರಥಮಪಾದೇ, ಭರತವರ್ಷೇ, ಭರತಖಂಡೇ, ಜಂಬೂದ್ವೀಪೇ , ದಂಡಕಾರಣ್ಯೇ ದೇಶೇ, ಗೋದಾವರ್ಯಾಃ ದಕ್ಷಿಣೇತೀರೇ,ಶಾಲೀವಾಹನಶಕೇ, ಬೌದ್ಧಾವತಾರೆ, ರಾಮಕ್ಷೇತ್ರೇ, ಅಸ್ಮಿನ್ ವರ್ತಮಾನೇ ಚಾಂದ್ರಮಾನೇನ, ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ................ ಸಂವತ್ಸರೇ,.........ಅಯನೇ,....... ಋತೌ,..........ಮಾಸೇ,..........ಪಕ್ಷೇ,...........ತಿಥೌ,.......ವಾಸರ ಯುಕ್ತಾಯಾಂ, ಶುಭನಕ್ಷತ್ರ, ಶುಭಯೋಗ, ಶುಭಕರಣ, ಏವಂಗುಣವಿಶೇಷಣ ವಿಶಿಷ್ಟಾಯಾಂ, ಶುಭತಿಥೌ ಸವಿತೃಮಂಡಲಾಂತರ್ಗತ ಶ್ರೀಮದ್ಧನುಮದ್ಭೀಮ-ಸುಮಧ್ವಹಂಸಾಂತರ್ಯಾಮಿನ್ ಶ್ರೀಸವಿತೃನಾಮಕ ಶ್ರೀಲಕ್ಷ್ಮೀನಾರಾಯಣ ಪ್ರೇರಣಯಾ ಶ್ರೀಲಕ್ಷ್ಮೀನಾರಾಯಣಪ್ರೀತ್ಯರ್ಥಂ, ತೇನ ದತ್ತಸ್ವಾತಂತ್ರ್ಯೇ ಪ್ರಾತಸ್ಸಂಧ್ಯಾಮುಪಾಸಿಷ್ಯೇ ॥**

ಇಂಥಾ ದೇಶಕಾಲಗಳಲ್ಲಿ ಪ್ರಾತಸ್ಸಂಧ್ಯಾವಂದನೆಯನ್ನು ಮಾಡುತ್ತೇನೆಂದು ಅರ್ಥ. ದೇಶಕಾಲಗಳನ್ನು ಅನುಸರಿಸಿ ಸಂಕಲ್ಪಭೇದ ಮಾಡತಕ್ಕದ್ದು.

**ಶ್ರೀತಿಮ್ಮಣ್ಣಾರ್ಯರು:-ಅಥ ಸಂಕಲ್ಪಃ** :- ಸಮ್ಯಕ್ ಕಲ್ಪತೇ ಸಮರ್ಥಂ ಭವತಿ ಕ್ರಿಯಮಾಣಂ ಸಂಧ್ಯಾದಿಕಂ ಅನೇನ ಸಂಕಲ್ಪಕರಣೇನೇತಿ ಸಂಕಲ್ಪಃ । ಸಃ ಆವಶ್ಯಕಃ । ''ನ ತಚ್ಛ್ರಾದ್ಧಂ ನ ತದ್ದಾನಂ ನ ಹೋಮೇ ನ ಜಪಸ್ತಥಾ । ನ ಪ್ರಾಪ್ನೋತಿ ಫಲಂ ತಸ್ಯ ಸಂಕಲ್ಪರಹಿತೋ ಯದಿ''ತ್ಯುಕ್ತೇಃ।

'ದೇಶಕಾಲೋತ್ಕೀರ್ತನ ಪೂರ್ವಕಂ ಕರಿಷ್ಯ' ಇತಿ ಇಚ್ಛಾವಿಶೇಷಃ ಸಂಕಲ್ಪಃ। ''ಏಕ ಏವಹಿ ಲೋಕಾನಾಂ ಸೂರ್ಯ ಆತ್ಮಾದಿಕದ್ಧರಿಃ। ಸರ್ವದೇವಕ್ರಿಯಾಮೂಲಂ ಋಷಿಭಿಃ ಬಹುಧೋದಿತಃ। ಕಾಲೋ ದೇಶಃ ಕ್ರಿಯಾ ಕರ್ತಾ ಕಾರಣಂ ಕಾರ್ಯಮಾಗಮಃ। ದ್ರವ್ಯಂ ಫಲಮಿತಿ ಬ್ರಹ್ಮ ನವಧೋತ್ಕೋಜಯಾಹರಿರಿತ್ಯುಪಕ್ರಮ್ಯ ಸೂರ್ಯನಭಸ್ಥೇತ್ಯಾದಿ ಮಹಾಮಹಿಮಾನಂ ಪ್ರತಿಪಾದ್ಯ ಏತಾ ಭಗವತೋ ವಿಷ್ಣುರಾದಿತ್ಯಸ್ಯ ವಿಭೂತಯಃ ॥ ಸ್ಮರತಾಂ ಸಂಧ್ಯಯೋ ರ್ನೃಣಾಂ ಹರತ್ಯಂಹೋ ದಿನೇ ದಿನೇ ॥'' ಇತಿ ಭಾಗವತೇ ಕಾಲಾದಿ ಸ್ಮರಣಸ್ಯಾವಶ್ಯಕತ್ವೋಕ್ತೇಃ॥ ಅನುವ್ಯಾಖ್ಯಾನೇ 'ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ। ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯೇ'ತಿ ಸರ್ವೋತ್ಪತ್ತಿಮದುಪಾ ದಾನನಿಮಿತ್ತಾನಾಂ ದ್ರವ್ಯಾದಿ ಶಬ್ದಾಭಿಧೇಯಕ ಪ್ರಕೃತ್ಯಾದಿ ತತ್ವಾದೃಷ್ಟಕಾಲ ತತ್ಪರಿಮಾಣಾದಿ ಸ್ವಭಾವ ತದಭಿಮಾನಿನೀಂ ಭಗವದಧೀನತ್ವಮುಕ್ತ್ವಾ । 'ನ ಋತೇ ತ್ವತ್ಕ್ರಿಯತೇ ಕಿಂಚನಾರೇ' ಇತಿ ಸರ್ವಾರ್ಥ ಕ್ರಿಯಾಣಾಂ ಭಗವದೇಕಾಧೀನತ್ವೋಕ್ತೇಃ। ಭಗವತ್ ಸ್ವಾತಂತ್ರ್ಯಾನುಸಂಧಾನಪೂರ್ವಕಂ ದೇಶಕಾಲಾದ್ಯಭಿಮಾನಿದೇವತಾ ಕರ್ತೃತ್ವಾನುಸಂಧಾನ-ಪೂರ್ವಕಂ ಭಗವತಃ ಪುಣ್ಯಪಾಪಾದ್ಯಭಾವಾಯ 'ಕರ್ತಾ ಶಾಸ್ತ್ರಾರ್ಥತ್ವಾ'ದಿತ್ಯಧಿಕರಣನ್ಯಾಯೇನ ಶಾಸ್ತ್ರಸ್ಯಾಪ್ರಯೋಜನ ನಿಷೇಧಾಯ ಚ । ಭಗವದ್ದತ್ತಾಲ್ಪಕರ್ತೃತ್ವಾನುಸಂಧಾನಪೂರ್ವಕಂ ಶ್ರೀಗೋವಿಂದಗೋವಿಂದೇತ್ಯಾರಭ್ಯ ಸಂಧ್ಯಾಮುಪಾಸ ಇತ್ಯಂತೈಃ ವಾಕ್ಯೈಃ ಸಂಕಲ್ಪಃ ಕರ್ತವ್ಯಃ ॥ ಅಸ್ಯಾಂ ಅಯಮರ್ಥಃ। ''ಋಗ್ಯಜುಸ್ಸಾಮನಾಮಾನಿ ಗಾವೋ ಶ್ರೀರಮೃತಾಂ' ಇತ್ಯುಕ್ತೇಃ। ಶ್ರಿಯಃ ಋಗ್ಯಜುಸ್ಸಾಮ-ರೂಪಾಗಾವೋ ವೇದವಾಚಃ ತಾಭಿಃ ವಿಂದತ ಇತಿ ನಿಖಿಲವೇದವೇದ್ಯಃ ಶ್ರೀಗೋವಿಂದಃ ಕೃಷ್ಣಃ । 'ಮನ್ಮನಾಭಾವೇ'ತ್ಯಾದಿನಾ ತಸ್ಯೈವೋಕ್ತೇಃ। 'ಯತ್ಕರೋಷೀ'ತ್ಯಾದಿನಾ ತಸ್ಯೈವ ಸಮರ್ಪಣೀಯತ್ವಾತ್ । ತದುದ್ದಿಶ್ಯತಯಾ ಸಕಲ ಕರ್ಮಣಾಂ ಆರಂಭಣೀಯ-ತ್ವಾಚ್ಚ। ಶ್ರೀಕೃಷ್ಣೋನುಸ್ಮರ್ತವ್ಯಃ। ಏಕ ಗೋವಿಂದ ಶಬ್ದಸ್ಯ ಕರ್ಮದೇವತಾಸ್ವರೂಪಜ್ಞಾನಜನಕತ್ವೇನ ಉಪಕಾರಕ ನಿಖಿಲವೇದ-ವೇದ್ಯತಯಾ ದ್ವಿತೀಯಸ್ವರೂಪವಿಶೇಷಣ ಜ್ಞಾಪಕತಯಾ ಸ್ವಕ್ರಿಯಮಾಣಂ ಕರ್ಮ ಭಗವತಃ ಸರ್ವಜ್ಞಸ್ಯಾಪಿ ವೈಭವೇದ್ವಿಜ್ಞಾಪಯಿತುಂ ಸಂಬೋಧನತಯಾ ಶಬ್ದದ್ವಯಸ್ಯೋಪಪತ್ತೇಃ। ಸಕಲದೇಶಕಾಲಾದ್ಯಭಿಮಾನಿವ್ಯಾಪ್ತತ್ವೇನೋಪಕಾರಕಾನುಸ್ಮರಣಾಯ ಶ್ರೀವಿಷ್ಣೋರಿತಿ ಸಂಬೋಧನಂ। ಏವಂ ಮಂತ್ರದೇಶಕಾಲ- ವ್ಯಾಪ್ತ ಹರಿಂ ಸಂಬೋಧ್ಯ ಸ್ವಕ್ರಿಯಮಾಣಂ ಕರ್ಮ ವಿಜ್ಞಾಪ್ಯ ದೇಶಕಾಲಾದ್ಯನುಸ್ಮರ್ತವ್ಯಂ। ವಿಷ್ಣೋಃ ಜಗತ್ ಸ್ಥಿತಿಕರ್ತುಃ। ಆಜ್ಞಯಾ ಪ್ರವರ್ತಮಾನಸ್ಯ ಜಗದ್ವ್ಯಾಪಾರೇ ಪ್ರವರ್ತಮಾನಸ್ಯ ಆದ್ಯಸ್ಯ ಪ್ರಥಮೋತ್ಪನ್ನಸ್ಯ ಬ್ರಹ್ಮಣಃ ಚತುರ್ಮುಖಸ್ಯ ಆದ್ಯೇತಿ ವಿಶೇಷಣಂ । ತಥಾಜ್ಞಯೇನ ಇತರೇಷಾಂ ಪ್ರವೃತ್ತಿ ಜ್ಞಾಪನಾರ್ಥಂ । ಅದ್ಯಃ ಭಕ್ಷ್ಯಃ ಭೋಜ್ಯತ್ವೇನ ಶ್ರೀಹರಿತರ್ಪಕತ್ವೇನ ತತ್ಪ್ರೇಮಾಸ್ಪದತ್ವೇನ ನ ಸಕಲ- ಪ್ರವರ್ತಕತ್ವಜ್ಞಾಪನಾರ್ಥಂ ಬ್ರಹ್ಮಣಃ ಭಗವದದ್ಯತ್ವಂ। 'ಯಸ್ಯ ಬ್ರಹ್ಮ ಚ ಕ್ಷತ್ರಂ ಚೋಭೇ ಭವತ ಓದನಂ। ತತ್ರ ಸಂವತ್ಸರಂ ನಾಮ ಬ್ರಹ್ಮಾಣಮಸೃಜತ್ಪ್ರಭುಃ। ತಮತ್ತುಂ ವ್ಯಾದದಾಸ್ಯಂ ತದಾಸೌ ವಿರುರಾವಹೇ'ತಿ ಬೃಹದಾರಣ್ಯಕ ಪ್ರಸಿದ್ಧಂ।ತಸ್ಯ ದ್ವಿತೀಯ ಪರಾರ್ಧ ಇತ್ಯನ್ವಯಃ। ಪರನಾಮ ನಿಮೇಷಕಾಂತ ಇತ್ಯಾಚಾರ್ಯೋಕ್ತೇಶ್ಚ॥ ತಥಾ ಚ ಕಾಲೋ ದ್ವಿವಿಧಃ । ಮಹಾನವಾಂತರಶ್ಚೇತಿ ॥ ದೇಶೋಪಿ ತಥಾ ॥ ಏಕಕಾಲ ದ್ವೈವಿಧ್ಯ ಜ್ಞಾಪನಾರ್ಥಮೇವ ಕಾಲಮಧ್ಯೇ ದೇಶಕೀರ್ತನಂ ದೇಶಕಾಲಯೋಃ ಸಮಪ್ರಧಾನತಯಾ ಕಾರಣತ್ವ ಜ್ಞಾಪನಾರ್ಥಂ ಚ। ಪರಾರ್ಧ।ಕಲ್ಪ। ಮನ್ವಂತರ। ಯುಗ। ಚರಣ ಭೇದೇನ ಪಂಚಧಾ ಮಹಾಕಾಲಃ॥ ವತ್ಸರಾಯನಋತುಮಾಸಪಕ್ಷದಿವಸ ಭೇದೇನ ಷೋಡಾವಾಂತರಕಾಲಃ। ಜಂಬೂದ್ವೀಪಭರತವರ್ಷದಂಡಕಾರಣ್ಯಾದಿ ಮಹಾದೇಶಃ । ದಕ್ಷಿಣಕೂಲರಾಮಕ್ಷೇತ್ರ ತತ್ಪುಣ್ಯಕ್ಷೇತ್ರಂ ಅವಾಂತರದೇಶಃ । ಬೌದ್ಧಾವತಾರೇ ಇತಿ ದೇಶಕಾಲಯೋರ್ವಿಶೇಷಣಂ । ಅಯಂ ಕಾಲೋ ಬೌದ್ಧಾವತಾರೋವಚ್ಛಿನ್ನಃ । ದೇಶೋಪಿ ತದಭಿವ್ಯಕ್ತಿಮಾನ್ । ತದನುಸ್ಮರಣಂ ಚಾಯೋಗ್ಯಜನಮೋಹಕತ್ವೇನ ಯೋಗ್ಯಜನಪರಿಪಾಲಕತ್ವೇನೋಪಕಾರಾನುಸಂಧಾನಾರ್ಥಂ। ದಿನಾನಾಮಧಿಪಃ ಸೂರ್ಯಃ ಪಕ್ಷಮಾಸಾಧಿಪಃ ಶಶೀ॥ ತಸ್ಮಾತ್ಸೌಮ್ಯಾಬ್ದ-ಮೇವಾತ್ರಮುಖ್ಯಮಾಹುರ್ಮನೀಷಿಣಃ । ಸೌಮ್ಯಂ ಕಾಲಂ ತತೋ ಯಜ್ಞೇ ಗೃಹ್ಣೀತಿ ನ ತು ಸೂರ್ಯಜಮಿತಿ ಶ್ರೀಮದ್ಭಾಗವತ-ತಾತ್ಪರ್ಯ ನಿರ್ಣಯೋಕ್ತೇಃ । ಬಾರ್ಹಸ್ಪತ್ಯಸಾವನಸೌರನಾಕ್ಷತ್ರಚಾಂದ್ರೇಷು ಚಾಂದ್ರಮಾನ ಏವ ಮುಖ್ಯಃ। ತೇನೈವ ವತ್ಸರಾದಿಕಂ ಗ್ರಾಹ್ಯಂ । ಕಾಲದೇಶಯೋರ್ಮುಖ್ಯಾಭಿಮಾನಿನೀ ರಮಾ ತತೋ ಬ್ರಹ್ಮಾ। ಧರೋದ್ಧರಣಾದಿನಾ ಶ್ವೇತವರಾಹಸ್ಯೋಪಕಾರಕತ್ವೇ ತದನುಗತಕಾಲಯೋಪಿ ಸ್ಮರ್ತವ್ಯಃ। ವೈವಸ್ವತಮನ್ವಂತರಸ್ಯೈವ ಯುಗಾದೇಃ ತತ್ತನ್ನಾಮಾನೋ ದೇವಾಃ। ಆಸೂರ್ಯಶ್ಚ ನಿಂದ್ಯತ್ವೇನ

ಸ್ಮರ್ತವ್ಯಃ।ಜಂಬೂದ್ವೀಪಸ್ಯಾಗ್ನೀಧ್ರಃ ಜಂಬೂನಾಮಾ ದ್ವೀಪಶ್ಚ। ಭರತಸ್ಯಾರ್ಷಭೋ ಭರತಃ। ಭರತವರ್ಷೇ ಇತಿ ತು ಮುಖ್ಯಂ। ತದುಕ್ತಂ ಭಾಗವತೇ । ಕಲ್ಪಾಯುಷಾಂ ಸ್ಥಾನ ಜಾಯಾತ್ಪುನರ್ಭವಾಕ್ಷಣಾಯುಷಾಂ ಭಾರತ ಭೂಜಯೋ ವರ ಇತಿ ॥ ದಂಡಕಾರಣ್ಯಸ್ಯ ದಂಡಕಃ ದಕ್ಷಿಣಕೂಲಸ್ಯಾಂಗಾರಕಃ ನವಗ್ರಹದೇಶವಿಭಾಗೇ ತಸ್ಯ ತದಧೀನತ್ವೋಕ್ತೇಃ । 'ಸಂವತ್ಸರಸ್ಯ ಚತುರ್ಮುಖಃ । ತತ್ರ ಸಂವತ್ಸರಂ ನಾಮ ಬ್ರಹ್ಮಾಣಮಸೃಜದ್ವಿಭುಃ' ಇತಿ ವಚನಾತ್ । 'ಸಂವತ್ಸರೋ ವೈ ಪ್ರಜಾಪತಿ'ರಿತಿ ಷಟ್ಪ್ರಶ್ನೋಕ್ತೇಃ । 'ಸಂವತ್ಸರಸ್ಥೋ ಭಗವಾನಿ'ತಿ ತದ್ಭಾಷ್ಯೋಕ್ತೇಃ। ಹರಿವಿರಿಂಚೌ ಸ್ಮರ್ತವ್ಯೌ । ಏವಂ ಮಾಸದಿವಸೇಷು ವಿಶಿಷ್ಟ ಕಾಲೇಷು ಭಗವಾನ್ ಸಂವತ್ಸರಾದಿ ಭಾಗಾಯನಾದಿಷು ವಾಗೀರೌ। ತದುಕ್ತಂ ಷಟ್ಪ್ರಶ್ನ ಭಾಷ್ಯೇ। ಸಂವತ್ಸರಸ್ಥೋ ಭಗವಾನ್ ವಾಗೀರಾವಯನೌ ಸ್ಥಿತೌ॥ ಮಾಸಸ್ಥಿತಃ ಭಗವಾನ್ ಪಕ್ಷಯೋರ್ವಾಕ್ ಮಾರುತಃ । ಅಹೋರಾತ್ರೇ ಚ ಭಗವಾನ್ ಪ್ರಾಣೋ ಹ್ಯಹ್ನಥವಾಙ್ನಿಶಿ ॥ ದಂಪತ್ಯೋರ್ಭಗವಾನ್ವಿಷ್ಣು ಭಾರ್ಯಾಸ್ಥಾ ಚ ಸರಸ್ವತೀ । ಭರ್ತೃಸಂಸ್ಥಃ ಸ್ವಯಂ ವಾಯುರೇವಂ ಜ್ಞಾತ್ವಾವಿಮುಚ್ಯತ ಇತಿ ॥ ಋತೂನಾಂ ತತ್ತನ್ನಾಮಾನಃ । ಅಹೋರಾತ್ರಯೋಃ । ತತೋಹಃ ಪೂರ್ವಪಕ್ಷಂ ಚಾಪ್ಯುದಕಸಂವತ್ಸರಂ ತಥಾ। ಧೂಮೋರಾತ್ರಿಸ್ಥಥಾಕೃಷ್ಣಃ ಷಣ್ಮಾಸಾ ದಕ್ಷಿಣಾಯನಮಿತ್ಯುಕ್ತೇಃ। ತತ್ತನ್ನಾಮಾನೋ ದೇವಾಃ। ದಿನಾನಾಂ ಅಧಿಪಃ ಸೂರ್ಯಃ ಪಕ್ಷಮಾಸಾಧಿಪಃ ಶಶೀತ್ಯುಕ್ತೇಃ । ಸೂರ್ಯಚಂದ್ರಾವಪಿ । ದ್ರವ್ಯೇಶಃ ಶಂಕರಃ ಪ್ರೋಕ್ತಃ ಕ್ರಿಯೇಶೋ ಗರುಡಸ್ಮೃತಃ। ಕರಣೇಶಸ್ತಥಾ ಬ್ರಹ್ಮವಾಯುರಾಧಾರಪಃ ಸ್ಮೃತಃ ಇತ್ಯುಕ್ತಶ್ಚ ಗ್ರಾಹ್ಯಃ। ವಹ್ನಿ ತ್ವಷ್ಟೃಹಿಮಾದ್ರಿಜ್ಯೋತಿಃ ಶಾಸ್ತ್ರನಿಬಂಧನೇ। ವಹ್ನಿಪ್ರತಿಪದಾಧಿಪಃ ಇತಿ ಸ್ಮೃತ್ಯಂತರೋಕ್ತೇಃ॥ ಪ್ರತಿಪದಾದಿವಿಶೇಷ ತಿಥೀನಾಂ ವಂಧ್ಯಾದಯಃ। ವಾರಾಧಿಪಾಃ ಪ್ರಸಿದ್ಧಾಃ। ಯೋಗಾದ್ಯಾಃ। ಶ್ರುತಿಕ್ರಮೋಯಂ । ಯೋಗೇಶಾವಿಷ್ಕಂಭಾದಯಃ । ಕರಣೇಶಾಬಾದಯಃ । ಏವಂ ದೇಶಕಾಲಾದ್ಯಭಿಮಾನಿ ಸರ್ವಕರ್ಮ ಕರ್ತೃಕಾರಯಿತೃ ಸಕಲಕರ್ಮಫಲಭೋಕ್ತೃತ್ವ ಭೋಜಯಿತೃತ್ವ ಕರ್ಮಫಲದಾತೃ ಸಮಸ್ತದೇವಾಂತರ್ಗತ ಶ್ರೀಭಾರತೀರಮಣ-ಮುಖ್ಯಪ್ರಾಣಾ(ಶ್ರೀಮಧ್ವಾಂತರ್ಯಾಮಿನ್)ಂತರ್ಗತ ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ ಪ್ರಾತಃ ಸಂಧ್ಯಾಮುಪಾಸ್ಯೇ ಇತಿ ಸಂಕಲ್ಪಃ॥

ಅತ್ರ ಸಂಧ್ಯಾ ಶಬ್ದೇನ ಕಾಲ ಇತ್ಯೇಕೇ। ಗಾಯತ್ರೀಮಂತ್ರೇ ಭರ್ಗಸವಿತೃ ಶಬ್ದ ಶ್ರವಣಾತ್। ಉಪಸ್ಥಾನಮಂತ್ರೇ ಮಿತ್ರವರುಣ ಶಬ್ದ ಶ್ರವಣಾತ್ ಸೂರ್ಯಾದಯಃ ಇತ್ಯಪರೇ । ಸಂಧ್ಯಾಸ್ತೋತ್ರಧ್ಯಾನಾಭಿಧಾಯಕ ಕಲ್ಪೇಷು ತ್ರಿನೇತ್ರತ್ವ ಶೂಲಧಾರಿತ್ವೋಕ್ತೇಃ ಶರ್ವಪತ್ನೀ ಇತ್ಯನ್ಯೇ । ಗಾಯತ್ರೀ ಶತಗಾಯತ್ರೀ ಚತುರ್ಮುಖಪತ್ನೀತ್ಯೇಕೇ । ಜಾತವೇದಸ ಇತ್ಯುಪಸ್ಥಾನ ಮಂತ್ರಸ್ಯ ದುರ್ಗಾತ್ರಿಷ್ಟುಪ್ತ್ವೇನ ದುರ್ಗಾನಾಮ್ನೀ ವಿಷ್ಣುಪತ್ನೀತಿ ಇತರೇ ॥ ನಾದ್ಯಃ ॥ ಕಾಲಸ್ಯೋಪಾಸನಾಯೋಗಾತ್ ।ಅಸತ್ಯಾಚೇತನಾಯೋಗ್ಯಾನ್ಯನುಪಾಸ್ಯಾನಿ ಇತ್ಯುಕ್ತೇಃ । 'ಸಾಮಾಸಂಧ್ಯಾಭಿರಕ್ಷತ್ವಿ'ತಿ ರಕ್ಷಣಾರ್ಥಂ ಜಡಸ್ಯ ಕಾಲಸ್ಯ ಪ್ರಾರ್ಥನಾಯೋಗಾಚ್ಚ ॥ ನ ದ್ವಿತೀಯಃ ॥ 'ಸ್ತುತೋ ಮಯಾ ವರದಾ ವೇದಮಾತೇ'ತಿ ಉಮಾಸ್ತುತತ್ವೋಕ್ತ್ಯಾ ಉಮಾವರಸೂರ್ಯಾದೀನಾಂ ಸಂಧ್ಯಾತ್ವಾನುಪಪತ್ತೇಃ । ಅತ ಏವ ಶರ್ವಪತ್ನೀತಿ ತೃತೀಯ-ಪಕ್ಷೋ ನಾವಕಲ್ಪತೇ ॥ 'ಯಾಂ ಸದೇ'ತಿ ಮಂತ್ರೇ ಸಕಲ ಚರಾಚರ ನಮ್ಯತ್ವೋಕ್ತೇಶ್ಚ ॥ ನಾಪಿ ಚತುರ್ಥಃ ॥ ಸಾಕ್ಷಾತ್ ಗಾಯತ್ರ್ಯುಪಾಸಾಯೋಗ್ಯ ಏವ ಚತುರ್ಮುಖ ಇತಿ ಛಾಂದೋಗ್ಯ ಭಾಷ್ಯೋಕ್ತೇಃ। ಪತ್ನ್ಯಾಃ ಪತ್ಯುಪಾಸತ್ವಾಯೋಗಾತ್। ನ ಪಂಚಮಃ॥ ಪ್ರಾತಃ ಸಂಧ್ಯಾದಿಮಾರ್ಜನ ಜಲಪ್ರಾಶನವಿನಿಯುಕ್ತ ಮಂತ್ರಾಣಾಂ ಋಷಿದೇವತಾಛಂದೋಭಿ- ದಾಯಕಾನಾಂ ಓಂ ಇತ್ಯೇಕಾಕ್ಷರಮಿತ್ಯಾದಿ ಮಂತ್ರಾಣಾಂ ಉಪಸ್ಥಾನ ದಿಙ್ನಮಸ್ಕಾರ ವಿನಿಯುಕ್ತಾನಾಂ ಕ್ಷಮಾಪಕ ಮಂತ್ರಾಣಾಂ ಚ ತೈತ್ತಿರ್ಯೋಪನಿಷದಿ ನಾರಾಯಣಪ್ರಕರಣೇ ಅಭಿಹಿತತ್ವೇನ ತತ್ಪ್ರಕರಣಸ್ಯ ಕೇವಲ ವಿಷ್ಣುವಾಚಿತ್ವಸ್ಯ॥ 'ತನ್ನೋವಿಷ್ಣುರಿ'ತಿ ವಚನಾತ್ ವಿಷ್ಣುರೇವ ಹಿ ತತ್ರೋಚ್ಯತೇ ನ ಚೇತರಶಬ್ದಾತ್ ಪ್ರಾಪ್ತಿರಿತಿ ಸೂತ್ರಭಾಷ್ಯೇ ವರ್ಣಿತತ್ವಾತ್ । ಪೂರ್ವಪ್ರಸಿದ್ಧಮಿತ್ಯುಕ್ತೇಃ । 'ಅಂಭಸ್ಯ ಪಾರ'ಇತಿ ನಾರಾಯಣಪನ್ನಸ್ಯ ರಮಾಪರತ್ವಾಯೋಗಾಚ್ಚ । ಅತ್ರ ಸಂಧ್ಯಾಶಬ್ದೇನ ವಿಷ್ಣ್ವಾಖ್ಯಂ ಬ್ರಹ್ಮೈವೋಚ್ಯತೇ । ಬಾಧಕಾಭಾವಾತ್ । ''ಧ್ಯಾಯೇನ್ನೃಸಿಂಹಮುರುವೃತ್ತರವಿತ್ರಿನೇತ್ರಂ'' ಇತಿ ॥ ತ್ರಿನೇತ್ರತ್ವಂ ವಿಷ್ಣೋರುಪಪನ್ನಂ । 'ಶಂಖಚಕ್ರಗದಾಪದ್ಮಖೇಟಾಃ ಸ ಶಾರ್ಙ್ಗಕಾಃ ಶರೋಮುಸಲವಜ್ರೋ ಚ ಹಲಃ ಪಾಶಾಂಕುಶೌ ತಥಾ। ಶೂಲಬಿಂಡಿಪಾಲಶ್ಚ ಪಟ್ಟಿಸೋಗ್ನಿವರಾಭಯೇ। ತರ್ಕಮುದ್ರಾಕ್ಷ- ಮಾಲಾ ಚ ಪುಸ್ತಕಂ ಚ ವಿದಾರಣಂ 'ಇತ್ಯಾದೀನ್ಯಖಿಲಾನ್ಯೇವ ವಿಷ್ಣೋಶ್ಚಿಂತ್ಯಾನಿ ಬಾಹುಬಾಹುಷು'ಇತಿ ತಂತ್ರಸಾರೋಕ್ತೇಃ॥ ತ್ರಿಶೂಲಪುಸ್ತಕಾಕ್ಷ-ಮಾಲಾಧರತ್ವಂ ಚೋಪಪನ್ನಂ । ಸಂಧ್ಯೇತಿ ಸ್ತ್ರೀಶಬ್ದವಾಚ್ಯತ್ವಂ ದೇವತಾಶಬ್ದವದುಪಪತ್ತೇಃ । ಸ್ತ್ರೀರೂಪತ್ವಾಚ್ಚ । 'ಪ್ರಕೃತಿಶ್ಚ ಪ್ರತಿಜ್ಞಾ ದೃಷ್ಟಾಂತಾನುಪರೋಧಾದಿತ್ಯತ್ರ ವ್ಯವಧಾನೇನ ಸೂತಿಸ್ತು ಪುಂಸ್ತ್ವಂ ವಿದ್ವದ್ಭಿರಿಷ್ಯತೇ । ಸೂತಿರವ್ಯವಧಾನೇನ ಪ್ರಕೃತಿತ್ವಮಿತಿ ಸ್ಥಿತಿಃ । ಉಭಯಾತ್ಮಕ ಸೂತಿತ್ವಾತ್ ವಾಸುದೇವಃ ಪರಃ ಪುಮಾನಿ'ತ್ಯುಕ್ತೇಃ ॥ ಸ್ತ್ರೀಶಬ್ದವಾಚ್ಯತ್ವಮುಪಪನ್ನಂ । ಸರ್ವಗುಣವತ್ವಾಚ್ಚ ಸರ್ವಶಬ್ದವಾಚ್ಯತ್ವಂ। ''ಪ್ರಾಥರುತ್ಥಾಯ ಸಂಧ್ಯಾಮುಪಾಸೀತ। ಯ ಸಂಧ್ಯಾಮುಪಾಸ್ತೇ ಬ್ರಹ್ಮೈವ ತದುಪಾಸ್ತ''ಇತಿ ಸಾಧಕ- ಸದ್ಭಾವಾಚ್ಚ।

ಅತ್ರ ಸಂಕಲ್ಪೋನಾಮ ಜ್ಞಾನೇಚ್ಛಾಪ್ರಯತ್ನಶಬ್ದಾಭಿಧೇಯ ಮನೋವೃತ್ತಿ ವಿಶೇಷಃ। ತಸ್ಯ ಸರ್ವಕ್ರಿಯಾಕಾರಣತ್ವಂ ಜಾನಾತೀಚ್ಛತಿ ಪ್ರಯತ್ನತ ಇತಿ ಹೇತುತ್ವೋಕ್ತೇಃ । ಪ್ರಯತ್ನಮೇಕಮಗ್ರತೋ ವಿಧಾಯ ಭೂತಿಮಾಪ್ನುಮ ಇತ್ಯಾಚಾರ್ಯೋಕ್ತೇಃ । ತಥಾ ಹಿ ॥ ಸ್ವಭಾವಾಖ್ಯಾ ಯೋಗ್ಯತಾ ಹಠಾಖ್ಯಾಯಾನಾದಿ ಸಿದ್ಧಾ ಸರ್ವಜೀವೇಷು ನಿತ್ಯಾ । ಸಾ ಕಾರಣಂ ಪ್ರಥಮಂ ತು ದ್ವಿತೀಯ- ಮನಾದಿಕರ್ಮೈವ ತಥಾ ತೃತೀಯಃ। ಜೀವಪ್ರಯತ್ನ ಇತ್ಯಾಚಾರ್ಯೋಕ್ತೇರಾವಶ್ಯಕಃ॥

**॥ಅಥ ಮಾರ್ಜನಂ ॥ (ಮಂತ್ರಾರ್ಥ)**

(ಓಂ ಆಪೋಹಿಷ್ಠೇತಿ -ತ್ರಿಋಚಸ್ಯ ಸೂಕ್ತಸ್ಯ- ಸಿಂಧುದ್ವೀಪ ಋಷಿಃ- ಆಪೋದೇವತಾ- ಗಾಯತ್ರೀಛಂದಃ- ಮಾರ್ಜನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ **॥ ॥ಹರಿಃ ಓಂ॥ ಆಪೋಹಿಷ್ಠಾಮಯೋ ಭುವಃ। ಓಂ ತಾನ ಊರ್ಜೇ ದಧಾತನ। ಓಂ ಮಹೇರಣಾಯ ಚಕ್ಷಸೇ। (ಋ. 7ನೇ ಅಷ್ಟಕ 6ನೇ ಅಧ್ಯಾಯ 5ನೇ ವ**ರ್ಗ 1ನೇಋಕ್)

**ಓಂ ಯೋ ವಃ ಶಿವತಮೋ ರಸಃ। ಓಂ ತಸ್ಯ ಭಾಜಯತೇ ಹನಃ। ಓಂ ಉಶತೀರಿವ ಮಾತರಃ।** (ಋ. 7ನೇ ಅಷ್ಟಕ 6ನೇ ಅಧ್ಯಾಯ 5ನೇ ವರ್ಗ 2ನೇಋಕ್)

**ಓಂ ತಸ್ಮಾ ಅರಂಗ ಮಾಮವಃ। ಓಂ ಯಸ್ಯ ಕ್ಷಯಾಯ ಜಿನ್ವಥ। ಓಂ ಆಪೋ ಜನಯಥಾ ಚ ನಃ॥ ಓಂ॥** (ಋ. 7ನೇ ಅಷ್ಟಕ 6ನೇ ಅಧ್ಯಾಯ 5ನೇ ವರ್ಗ 3ನೇಋಕ್)

ಇದು ಮಾರ್ಜನ ಮಂತ್ರ. ಈ ಮೂರೂ ಋಕ್ಸೂಕ್ತಗಳಿಗೆ ಸಿಂಧುದ್ವೀಪರೆಂಬುವ ಋಷಿ. ಅಪ್ ಶಬ್ದವಾಚ್ಯನಾದ ಪರಮಾತ್ಮನೇ ದೇವತಾ. ಗಾಯತ್ರೀ ಛಂದಸ್ಸು.

***1ನೇಋಕ್। ಉದಕಪರವಾದ ಅರ್ಥ:-*** ಆಪಃ= ಓ ಉದಕಾಭಿಮಾನಿ ದೇವತೆಗಳಿರಾ! (ನೀವುಗಳು); ಹಿ=ಯಾವಕಾರಣದಿಂದ; ಮಯೋಭುವಃ= ಸುಖವನ್ನು ಕೊಡತಕ್ಕವರಾಗಿ, ಷ್ಠಃ= ಆಗಿದ್ದೀರೋ ; ತಾಃ=ಅಂಥಾ ನೀವುಗಳು; ನಃ=ನಮ್ಮಗಳಿಗೆ; ಊರ್ಜೇ= ಅನ್ನವನ್ನು ; (ಅಥವಾ ಬಲವನ್ನು); ಮಹೇ=ಶ್ರೇಷ್ಠವಾದ; ರಣಾಯ=ರಮಣೀಯವಾದ ; ಚಕ್ಷಸೇ=ಜ್ಞಾನವನ್ನು ; ದಧಾತನ=ಕೊಡಿರಿ.

***ಪರಮಾತ್ಮನ ಪರ:-*** ಹೇ ಆಪಃ= ಓ ಉದಕದಲ್ಲಿ ವಾಸಮಾಡಿಕೊಂಡಿರುವ ಅಪ್ ಶಬ್ದವಾಚ್ಯ ನಾದ ಸೂರ್ಯಾಂತರ್ಗತ ನಾರಾಯಣದೇವರೇ ;(ನೀವು ಎಂತಹವರೆಂದರೆ) ಹಿ=ಪೂರ್ಣ ನಾದವರು; ಷ್ಠಾಃ=ಸರ್ವತ್ರ ವ್ಯಾಪ್ತರಾದವರು; (ಷ್ಠಾ ಗತಿನಿವೃತ್ತೌ ಎಂದು ಧಾತ್ವರ್ಥ); ಮಯೋ =ಪ್ರಧಾನಜಗದುತ್ಪಾದಕನಾದ ಬ್ರಹ್ಮನ; ಭುವಃ=ಉತ್ಪಾದಕರು; ಅಥವಾ ಮಯಃ ಸುಖಂ ಭಾವಯಂತಿ ಮಯೋಭುವಃ ಎಂಬುವ ಪ್ರಮಾಣದ್ವಾರಾ ಸುಖಕರ್ತರು; ಇದಕ್ಕೆ ಪ್ರಮಾಣ- ವೇನೆಂದರೆ 'ಯದ್ವೈಸುಖಮಯಃ' ಎಂಬ ಶ್ರುತಿಪ್ರಮಾಣವುಂಟು. (ಯಾಃ=ಪ್ರಸಿದ್ಧರಾದ) ತಾಃ=ನೀವುಗಳು; ನಃ=ನಮ್ಮಗಳಿಗೆ; ಊರ್ಜೇ=ಸಂಧ್ಯಾಕರ್ಮದಲ್ಲಿ (ಅಥವಾ ನಿಮ್ಮಲ್ಲಿ) ಉತ್ಕೃಷ್ಟವಾದ; ದಧಾತನ=(ಭಕ್ತಿಯನ್ನು)ಸ್ಥಾಪನ ಮಾಡಿರಿ; (ಏನುಕಾರಣದಿಂದ ಎಂದರೆ) ಚಕ್ಷಸೇ= ಜ್ಞಾನಕ್ಕೋಸ್ಕರ ; ರಣಾಯ=ಮೋಕ್ಷಪ್ರದನೆಂಬ ರಮಣೀಯಜ್ಞಾನಕ್ಕೋಸ್ಕರ ;

**ಶ್ರೀತಿಮ್ಮಣ್ಣಾರ್ಯರು:-**ಆಪೋಹಿಷ್ಠೇತಿ ತ್ರಿಚಸ್ಯಾಯಮರ್ಥಃ ॥ಹೇ ಆಪಃ ಆಪಾಲನಾದಾಪೋ ಭಗವನ್ಮೂರ್ತಿವಿಶೇಷಾಃ। ಆಪಃ ಅಬಭಿಮಾನಿ ದೇವತಾಃ ಬ್ರಹ್ಮಾದ್ಯಾಶ್ಚ ಸರ್ವದೇವತಾ ಆಪ ಇತಿ ಶ್ರುತೇಃ। ಬ್ರಹ್ಮಶೇಷಸುಪರ್ಣೇಂದ್ರಶಿವಾದ್ಯಾ ಆಪ ಈರಿತಾಃ। ತೇವಿಷ್ಣೋರ್ಮನಸಾಜಾತಾಃ ಸರ್ವೇಚಾಬಭಿಮಾನಿನಃ । ವಿಶ್ವೇದೇವಸ್ತತೋದ್ಯಾಪೋ ವರುಣಶ್ಚ ಮನೋಭವ ಇತಿ ಐತರೇಯಭಾಷ್ಯೋಕ್ತೇಶ್ಚ ॥ ಹೇ ಆಪಃ ಯೂಯಂ ಮಯೋಭುವಃ ಸುಖಾಶ್ರಯಾಃ । ಮಯಃ ಭವತ್ಯಾಭ್ಯ ಇತಿ ವಾ ಸುಖಕರ್ತ್ರ್ಯ ಇತಿ ಯಾವತ್। 'ಮಯಃ ಶರ್ಮ ಸುಖಂ ಶಾಂತಿಮಿತ್ಯಭಿ- ಧಾನಾತ್' । ಸ್ಥ। ಭವಥ। ಹಿ ಪ್ರಸಿದ್ಧಿಃ। ತಸ್ಮಾತ್ತಾಯೂಯಂ ನಃ ಅಸ್ಮಾನ್ ಊರ್ಜೇ ಅನ್ನಾಯ। ಊರ್ಗ್ವೈ ಅನ್ನ ಮಿತಿ ಶ್ರುತೇಃ। ದಧಾತನ ಸ್ಥಾಪಯತ। ಅನ್ನಾದ್ಯಭೀಷ್ಟವತೋ ಅಸ್ಮಾನ್ ಕುರುತೇತಿ ಭಾವಃ। ತತಾ ಮಹೇ ಮಹತೇ। ರಣಾಯ ರಮಣೀಯಾಯ ಮೋಕ್ಷಾಯ। ತಾದರ್ಥ್ಯೇ ಚತುರ್ಥೀ। ಚಕ್ಷಸೇ ಜ್ಞಾನಾಯ। ದಧಾತನ। ಮಹನ್ಮೋಕ್ಷಸಾಧನಂ ಜ್ಞಾನಂ ದತ್ವಾ ರಕ್ಷಥೇತಿ ಭಾವಃ॥ ಇತಿ ಪ್ರಥಮಾ॥

**ಎರಡನೇ ಋಕ್ಕಿನ ಅರ್ಥ:-** ***ಉದಕಪರ:-*** ಓ ಉದಕಾಭಿಮಾನಿ ದೇವತೆಗಳಿರಾ; ವಃ- ನಿಮ್ಮಗಳ; ಯಃ ರಸಃ=ಯಾವ(ರಸವು)ಸ್ವರೂಪವು; ಶಿವತಮಃ=ಅತ್ಯಂತಸುಖಕರವೋ; ಇಹ= ಇಲ್ಲಿಈ ಲೋಕದಲ್ಲಿ; ತಸ್ಯ=ಅದನ್ನು ; ನಃ=ನಮ್ಮಗಳಿಗೆ; ಉಶತೀಃ=ಪುತ್ರಸಮೃದ್ಧಿಯನ್ನು ಇಚ್ಛೈಸುವ; ಮಾತರಃ ಇವ= ತಾಯಿಗಳೋಪಾದಿಯಲ್ಲಿ (ನೂತನವಾಗಿ ಪ್ರಸೂತವಾದಂತಹ ಕರುಗಳಿಗೆ ತಾಯಿಗಳು ಆದ ಆಕಳುಗಳು ಯಾವರೀತಿಯಿಂದ ಆದರದಿಂದ ಸ್ತನ್ಯ ಕೊಡುತ್ತವೋ ತದ್ವತ್) ಭಾಜಯತ= ಉಪಯೋಗ ಮಾಡಿರಿ.

***ಪರಮಾತ್ಮನ ಪರ:-*** ಹೇ ಆಪಃ = ಓ ಉದಕಾಂತರ್ಗತನಾದಂತಹ ಶ್ರೀನಾರಾಯಣದೇವರೇ, ಶಿವತಮಃ=ಅತ್ಯಂತಕ್ಷೇಮಪ್ರದನಾದ;

ಯೋರಸಃ=ಶ್ರೇಷ್ಠನಾದ ಪರಮಾತ್ಮನೇ; ತಸ್ಯ=ರಸ ಶಬ್ದವಾಚ್ಯನಾದ ಹರಿಯೇ; ನಃ=ನಮ್ಮಗಳನ್ನು; ಇಹ=ಈ ನಿವೃತ್ತಿಕರ್ಮರೂಪವಾದ ಸಂಧ್ಯಾ-ಕರ್ಮದ್ವಾರಾ(ನಿನ್ನ); ಭಾಜಯತ=ಸೇವಾಮಾಡಿಸು ;(ಭಜಸೇವಾಯಾಂ ಎಂದು ಧಾತ್ವರ್ಥ); ಅಥವಾ ಶಿವತಮೋರಸಃ= ಸಮಸ್ತರಸಗಳಲ್ಲಿ ಶ್ರೇಷ್ಠವಾದ ಆನಂದವು ; ತಸ್ಯ= ಆ ಆನಂದ ರಸ ಗಳನ್ನು; ಅಸ್ಮಾನ್=ನಮ್ಮಗಳನ್ನು ; ಭಾಜಯತ=ಭಜನದ್ವಾರಾ ಆನಂದಯುಕ್ತರನ್ನಾಗಿ ಮಾಡು-ವುದು ಎಂದರ್ಥ. (ಹೇಗೆ ಎಂದರೆ) ಉಶತೀಃ= ಇಚ್ಛೈಸುವಂಥಾ, ಮಾತರಃ=ನೂತನ ಪ್ರಸೂತರಾದ ಶಿಶುಗಳಿಗೆ ತಾಯಿಯರು ಸ್ತನ್ಯಾದಿಗಳನ್ನು ಕೊಟ್ಟು ಆದರಪೂರ್ವಕವಾಗಿ ಯಾವರೀತಿಯಿಂದ ಭುಜಿಸುವಂತೆ ಮಾಡುವರೋ ತದ್ವತ್ ಈ ಸಂಧ್ಯಾಕರ್ಮದಿಂದ ನೀನು ಪ್ರೀತನಾಗಿ ದಿವ್ಯರಸವಾದ ಮೋಕ್ಷಾನಂದವನ್ನು ಕೊಡು ಎಂದರ್ಥ. ಅಂದರೆ ನೂತನವಾಗಿ ಪ್ರಸೂತರಾದ ಅರ್ಭಕ ಕರುಗಳಂತೆ ನಾವು ಇರುವೆವು. ತಾಯಿ-ಯಂತೆ ನೀನು ಇದ್ದು ನಮ್ಮ ಸಂಧ್ಯಾಕರ್ಮದಿಂದ ಪ್ರೀತನಾಗಿ ನಮಗೆ ಸ್ವಯೋಗ್ಯವಾದ ಶ್ರೇಷ್ಠವಾದ ಮೋಕ್ಷಾನಂದವನ್ನು ಕೊಡು ಎಂದರ್ಥ.

**ಶ್ರೀತಿಮ್ಮಣ್ಣಾರ್ಯರು:-<u>ಅಥದ್ವಿತೀಯಾ</u>** ॥ ಹೇ ಆಪಃ ॥ ವಃ ಯುಷ್ಮಾಕಂ । ಯಃ ಶಿವತಮಃ ಕಲ್ಯಾಣತಮೋರಸಃ ಮಧುರಾದಿಃ ಅನುರಾಗವಿಶೇಷಶ್ಚ। ತಸ್ಯ ರಸಸ್ಯ ಭಾಜಯತ। ತಂ ರಸಂ ಪ್ರಾಪಯತೇತಿ ಭಾವಃ। ಭವದೀಯ ಕಲ್ಯಾಣದಯಾರಸ ಭಾಜಃ ಕುರುತೇತಿ ಯಾವತ್ । ತತ್ರದೃಷ್ಟಾಂತಃ॥ ಉಶತೀರಿವಮಾತರಃ ಇತಿ। ಉಶತೀಃ ಉಶತ್ಯಃ ಕಾಮಯಮಾನಾಃ ಮಾತರಃ ಜನನ್ಯ ಇವ। ನವ ಪ್ರಸೂತ ಮಾತರೋ ಯಥಾ ಶಿಶೂನ್ ದಯಾರಸೇನ ಪಾಲಯಂತಿ। ತಥಾ ಯೂಯಂ ರಕ್ಷಥೇತಿ ಭಾವಃ॥

**ಮೂರನೇ ಋಕ್:- *ಉದಕ ಪರವಾಗಿ ಅರ್ಥ:-*** ಆಪಃ=ಓ ಉದಕಾಭಿಮಾನಿ ದೇವತೆಗಳಿರಾ; (ನೀವು) ಯಸ್ಯ=ಯಾವ ಅಜ್ಞಾನಾದಿ ಪಾಪದ, ಕ್ಷಯಾಯ=ನಾಶಕ್ಕೋಸ್ಕರ ; ಅಸ್ಮಾನ್= ನಮ್ಮಗ ಳನ್ನು ; ಜಿನ್ವಥ=ತೃಪ್ತಿಮಾಡುತ್ತಿದ್ದೀರೋ ; ತಸ್ಮೈ=ಆ ಪಾಪಗಳನ್ನು ಕಳೆದುಕೊಂಡು ; ಅರಂ= ಶೀಘ್ರದಲ್ಲಿ; ವಃ=ನಿಮ್ಮಗಳನ್ನು; ಗಮಾಮ=ಹೊಂದುತ್ತೇವೆ; ಆಪಃ=ಉದಕಾಭಿಮಾನಿ ದೇವತೆಗಳಿರಾ; ನಃ=ನಮ್ಮಗಳಿಗೆ; ಜನಯಥಾ ಚ=ಪುತ್ರ-ಪೌತ್ರಾದಿಗಳನ್ನು; (ಪ್ರೇರಣೆ ಮಾಡಿರಿ)

***ಪರಮಾತ್ಮನ ಪರ:-*** ಹೇ ಆಪಃ= ಓ ಉದಕಾಂತರ್ಗತ ನಾರಾಯಣಮೂರ್ತಿಯೇ ; ವಃ=ನಿಮ್ಮ ಪ್ರಸಾದದ್ವಾರಾ; ತಸ್ಮೈ=ಆ ವೈಕುಂಠಾದಿ ಆನಂದಲೋಕವನ್ನು ಕುರಿತು; ಅರಂ=ಶೀಘ್ರದಿಂದ; ಗಮಾಮ=ಪ್ರಯಾಣಮಾಡುತ್ತೇವೆ; ಯಸ್ಯ=ಯಾವ ಪರಮಾತ್ಮನ; ಕ್ಷಯಾಯ=ಜ್ಞಾನಪ್ರಾಪ್ತಿ-ಗೋಸ್ಕರ ; ಜಿನ್ವಥ=ಪ್ರಾದುರ್ಭೂತರಾಗಿದ್ದೀರೋ; ಭೋ ಆಪಃ=ಅಪ್ ಶಬ್ದವಾಚ್ಯನಾದ ಪರಮಾತ್ಮನೇ; ನಃ=ನಮ್ಮಗಳ ; (ಪಾಪ)ಕ್ಷಯಾಯ= ಪಾಪನಾಶನಿಮಿತ್ತ; ಜನಯಥಾ ಚ= ಪ್ರಾದುರ್ಭೂತನಾಗಿದ್ದಿ ಚ ಶಬ್ದ ಸಮುಚ್ಚಯ .

**ಶ್ರೀತಿಮ್ಮಣ್ಣಾರ್ಯರು:-<u>ಅಥ ತೃತೀಯಾ</u> ॥ ಹೇ ಆಪಃ ಯಸ್ಯ ರಸಸ್ಯ ಕ್ಷಯಾಯ ನಿವಾಸಾಯ ಜಿನ್ವಥ ಪ್ರೀಣಯಥ। ಜಿನ್ವತಿಃ ಪ್ರೀಣನಾರ್ಥಃ । ತಸ್ಮೈ ತಂ ರಸಂ ಅರಂ ಅಲಂ ಗಮಾಮ ಪ್ರಾಪ್ನುವಾಮ। ಭಗವದರ್ಪಿತ ರಮಾದಿಭುಕ್ತಶೇಷಜಲಾದಿಸ್ಥ ರಸ ಭಕ್ಷಣಾದ್ಯಾಶ್ರಯೇಣ ಅಸ್ಮಾಸು ತಂ ರಸಂ ಜನಯಥಾ ಉತ್ಪಾದಥಾ ॥ ಭಗವದರ್ಪಿತ ಮಧುರಾದಿ ರಸಭಾಜಃ ಅಸ್ಮಾನ್ ಕುರುತ। ತೇನ ಯುಷ್ಮತ್ಪ್ರೀತಿಃ ಭವತೀತಿ ಭಾವಃ। ಅಥವಾ ಸಾರೋವರಶ್ಚೇತಿ ಶಬ್ದಾಃ ಶ್ರೇಷ್ಠಸ್ಯ ವಾಚಕಾ ಇತ್ಯುಕ್ತೇಃ। ಯಃ ವಿಷ್ಣುಃ ತಥಾ ಚ ರಸಸ್ಯ ಶ್ರೇಷ್ಠಸ್ಯ ಕ್ಷಯಾಯ ಜ್ಞಾನಾಯ ಕ್ಷಿ-ನಿವಾಸಗತ್ಯೋರಿತಿ ಧಾತೋಃ। ತಸ್ಮೈ ಭಗವದ್ಜ್ಞಾನಾಯ। ಅರಂ ಅಲಂ ಗಮಾಮ ಪ್ರಾಪ್ನುವಾಮೇತಿ ಯಾವತ್ ॥ ಭಗವದ್ ಜ್ಞಾನಂ ದತ್ವಾ ಯೂಯಂ ಪ್ರೀಣಥ। ತದ್ ಜ್ಞಾನಂ॥ ಹೇ ಆಪಃ ನಃ ಜನಯಥೇತಿ॥**

ಮೇಲ್ಕಂಡಂತೆ ಹೇಳಲಾಗಿ, ಎಲೋ ಸೂರ್ಯಾಂತರ್ಗತನಾದ ಅಪ್ ಶಬ್ದವಾಚ್ಯನಾದ ಶ್ರೀಮಧ್ವಾಂತರ್ಯಾಮಿನ್ ನಾರಾಯಣ-ದೇವರೇ, ನಾವುಗಳು ಮಾಡಿದ ಪಾಪವನ್ನು ನಾಶಮಾಡಿ ನಮ್ಮಗಳಿಗೆ ಜ್ಞಾನವನ್ನು ಕೊಟ್ಟು , ತದ್ವಾರಾ ಮೋಕ್ಷಾನಂದಸುಖಗಳನ್ನು ಕೊಡುವುದಕ್ಕೋಸ್ಕರ ನೀವು ಪ್ರಾದುರ್ಭೂತರಾಗಿದ್ದೀರಿ. ಆದಕಾರಣದಿಂದ ನೀವು ಸಂಧ್ಯಾಕರ್ಮದಿಂದ ಪ್ರೀತರಾಗಿ ನಮ್ಮಗಳ ಪಾಪಕ್ಷಯವನ್ನು ಮಾಡಿ ಜ್ಞಾನಕೊಟ್ಟು, ತದ್ವಾರಾ ಮೋಕ್ಷಾನಂದವನ್ನು ತೀವ್ರದಲ್ಲಿ(ಬೇಗ) ಕೊಡುವಂತೆ ಪ್ರಾರ್ಥನಾ ನಾವುಗಳು ಮಾಡುತ್ತೇವೆಂದರ್ಥ.

ಇದಕ್ಕೆ ಪ್ರಮಾಣವೇನೆಂದರೆ, -''ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ। ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ। ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥'' ಎಂದು ಭಗವದ್ಗೀತಾದಲ್ಲಿ ಶ್ರೀಕೃಷ್ಣ ಅಪ್ಪಣೆ ಕೊಡಿಸಿದ್ದಾನೆ.

ಜ್ಞಾಪ್ತಿಕಾ:- ಮೇಲೆ ಹೇಳಿದ ಪ್ರಕಾರಮಾರ್ಜನಮಾಡಿ ತದನಂತರ ಈ ಕೆಳಗೆ ಹೇಳಿದ ಋಕ್ ನಿಂದ ಉದಕವನ್ನು ಅಭಿಮಂತ್ರಣಮಾಡಿ ಪಾನವನ್ನು ಮಾಡತಕ್ಕದ್ದು. ಅಭಿಮಂತ್ರಣವೆಂದರೆ, ಬಲಕೈ ಒಳಗೆ ಉದಕವನ್ನು ಹಾಕಿಕೊಂಡು ಮಂತ್ರದಲ್ಲಿ ಮನಸ್ಸಿಟ್ಟು ಮಂತ್ರಪಠಣ ಮಾಡೋಣ ಎಂದರ್ಥ. ಮೇಲೆ ಕಂಡ ಋಕ್‌ಗಳಲ್ಲಿ ಉದಕವನ್ನು ಪ್ರಾರ್ಥನೆ ಮಾಡಬೇಕೆಂದು ಪ್ರತ್ಯೇಕವಾಗಿ ಇರಲಾಗಿ ಉದಕಾಭಿಮಾನಿ ದೇವತೆಗಳನ್ನು ಪ್ರಾರ್ಥನೆ ಮಾಡಿದಂತೆ ಅರ್ಥಮಾಡಲಿಕ್ಕೆ ಕಾರಣವೇನೆಂದರೆ, ಉದಕಪ್ರಕೃತಿಸಂಬಂಧವಾದ ಅಚೇತನ ಪದಾರ್ಥ. ''ಮೃದಬ್ರವೀತ್ ಆಪೋ

ಅಬ್ರುವನ್'' ಎಂದು ಮೊದಲಾದ ಇಂಥಾ ಅಚೇತನ ಪದಾರ್ಥಗಳಿಂದ ಯಾವುದಾದರೂ ಕಾರ್ಯ ಆಯಿತಂತಾಗಲೀ ಆಗಬೇಕೆಂದಾಗಲೀ ಪ್ರಯೋಗ ಇದ್ದ ಸ್ಥಳದಲ್ಲಿ ತದಭಿಮನ್ಯ ದೇವತೆಗಳನ್ನು ಗ್ರಹಿಸಬೇಕೆಂದು ಶ್ರೀಮದಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಹೇಳಿದ್ದಾರೆ. ಆದಕಾರಣ ಇಲ್ಲಿ ಉದಕಶಬ್ದದಿಂದ ಉದಕಾಭಿಮಾನಿದೇವತೆಗಳನ್ನು ಗ್ರಹಣಮಾಡಬೇಕು.

**ಪ್ರಶ್ನೆ:- ಮಾರ್ಜನವನ್ನು ಯಾವರೀತಿಯಿಂದ ಯಾವ ಸ್ಥಳಗಳಲ್ಲಿ ಮಾಡಬೇಕು?**

**ಉ:-** ''ಆಪೋಹಿಷ್ಠಾದಿಭಿಃ ಪಾದೈಃ ಶಿರಸ್ಸ್ಯಷ್ಟಾಚ ವಿಪ್ಲುಷಃ।
ಯಸ್ಯಕ್ಷಯಾಯೇತ್ಯಧತಃ ಕ್ಷಿಪ್ತ್ವಾದ್ಭಿಃ ಪರಿಷೇಚಯೇತ್ ॥'' ಎಂದು ಬೃಹಸ್ಪತಿವಚನವುಂಟು.
''ಆಪೋಹಿಷ್ಠೇತ್ಯೃಚಾಕುರ್ಯಾತ್ ಮಾರ್ಜನಂತು ಕುಶೋದಕೈಃ।
ಪ್ರಣವೇನತು ಸಂಯುಕ್ತಂ ಕ್ಷಿಪೇದ್ವಾರಿಪದೇಪದೇ।
ವಪುಷ್ಯಷ್ಟಾಕ್ಷಿಪೇದೂರ್ಧ್ವಮಧೋಯಸ್ಯಕ್ಷಯಾಯ ಚ।
ರಜಸ್ತಮೋಮೋಹಜಾತಾನ್ ಜಾಗ್ರತ್ಸ್ವಪ್ನಸುಷುಪ್ತಿಜಾನ್।
ವಾಙ್ಮನಃ ಕಾಯಜಾನ್ ದೋಷಾನ್ನವೈತಾನ್ನವಭಿರ್ದಹೇತ್ ॥'' ಎಂದು ವ್ಯಾಸಸ್ಮೃತಿಯಲ್ಲಿದೆ.

ಆ ಪ್ರಕಾರ ಆಪೋಹಿಷ್ಠಾಯೆಂಬುವ ಮೂರುಋಕ್‌ಗಳು ಪಠನಮಾಡುತ್ತಾ, ಕುಶೋದಕಗಳಿಂದ ಪ್ರಣವದಿಂದ ಯುಕ್ತವಾಗಿ ಕ್ಷಣೇಕ್ಷಣೇ ಉದಕಬಿಂದುಗಳನ್ನು ದೇಹದಲ್ಲಿ, ದೇಹದ ಊರ್ಧ್ವಭಾಗದಲ್ಲಿ , ಎಂಟು ಆವರ್ತಿ, ಯಸ್ಯಕ್ಷಯಾಯ ಎಂಬುವ ಋಕ್ ಪಠನ ಮಾಡಿ ಅಧೋಭಾಗದಲ್ಲಿ ಮಾರ್ಜನವನ್ನು ಮಾಡಿದರೆ ರಜೋಗುಣದಿಂದಲೂ, ತಮೋಗುಣದಿಂದಲೂ, ಮೋಹದಿಂದಲೂ, ಜಾಗ್ರತ್ಸ್ವಾಪ್ನನಿದ್ರಾ ಕಾಲದಲ್ಲಿ ವಾಕ್‌ನಿಂದ ಮನಸ್ಸಿನಿಂದ ದೇಹದಿಂದ ಮಾಡಿದ ನವವಿಧಪಾಪಗಳು ನಿವಾರಣವಾಗುತ್ತವೆಂದು ಅರ್ಥ.

ಮತ್ತು ''ಭೂಶಿರಸಿಚಾಕಾಶೇಭುವಿಮಸ್ತಕೇ। ಮಸ್ತಕೇ ಚ ತಥಾಕಾಶೇ ಭೂಮೌ ಚ ನವಧಾ ಕ್ಷಿಪೇತ್ ।' ಎಂದು ಪ್ರಮಾಣವಿರುವುದರಿಂದ ಮೊದಲು ಭೂಮಿಯಲ್ಲಿ, ನಂತರ ಶಿರಸ್ಸಿನಲ್ಲಿ, ತರುವಾಯ ಆಕಾಶದಲ್ಲಿ, ತರುವಾಯ ಆಕಾಶಭೂಮಿಮಸ್ತಕಗಳಲ್ಲಿ, ತರುವಾಯ ಮಸ್ತಕ ಆಕಾಶ ಭೂಮಿಗಳಲ್ಲಿ, ಮಾರ್ಜನ ಒಂಭತ್ತು ಪ್ರದೇಶಗಳಲ್ಲಿ ಕ್ರಮದಿಂದ ಮಾಡಬೇಕು.

**ಪ್ರಶ್ನೆ:- ಮಾರ್ಜನಮಾಡಿದರೆ ಏನು ಫಲಬರುತ್ತದೆ?**

**ಉ:-** ''ಪ್ರಾಥರುತ್ಥಾಯ ಸತತಂ ಕುರ್ಯಾನ್ಮಾರ್ಜನಮಾತ್ಮನಃ।
ಸಾಯಂ ಚ ನಿತ್ಯಮೇತಾಭಿಃ ಕುರ್ಯಾನ್ಮಾರ್ಜನಮಾತ್ಮನಃ।
ಸಂವತ್ಸರಕೃತಂ ಪಾಪಂ ಮಾರ್ಜನಾಂತೇ ವಿನಶ್ಯತಿ ॥'' ಎಂದು ಋಗ್ವಿಧಾನದಲ್ಲಿ ಉಕ್ತವಾಗಿರುವುದರಿಂದ ಪಾಪನಾಶಕ್ಕೋಸ್ಕರ ಮಾರ್ಜನವನ್ನು ಹಗಲುರಾತ್ರಿ ಸರ್ವದಾ ಅವಶ್ಯಮಾಡಬೇಕು.

**ಪ್ರಶ್ನೆ:- ಮಾರ್ಜನಯಾವುದರಿಂದ ಮಾಡಬೇಕು?**

**ಉ:-''** ವಿನಾಯಸ್ತುಲಸೀಂ ಕುರ್ಯಾತ್ಸಂಧ್ಯಾಕಾಲೇತು ಮಾರ್ಜನಂ।
ತತ್ಸರ್ವಂ ರಾಕ್ಷಸಹೃತಂ ನರಕಂ ಚ ಪ್ರಯಚ್ಛತಿ।
ಪಿತರೋ ನ ಪ್ರಶಂಸಂತಿ ನಪ್ರಶಂಸಂತಿ ದೇವತಾಃ।
ತುಳಸೀಪತ್ರಗಳಿತಂ ಯತ್ತೋಯಂ ಶಿರಸಾವಹೇತ್ ॥
ಗಂಗಾಪುಣ್ಯಮವಾಪ್ನೋತಿ ಶತಧೇನುಫಲಂ ಲಭೇತ್ ॥'' ಎಂದು ವ್ಯಾಸಸ್ಮೃತಿಯಲ್ಲಿ ಪ್ರಮಾಣವಿರುವುದರಿಂದ ಮಾರ್ಜನವನ್ನು ನಿರ್ಮಾಲ್ಯ ತುಳಸೀದಳಸಹಿತವಾಗಲೀ, ಮೇಲೆ ಕಂಡಪ್ರಕಾರ ಕುಶದಿಂದಲಾಗಲೀ ಮಾಡತಕ್ಕದ್ದು. ತುಳಸೀರಹಿತವಾದ ಮಾರ್ಜನವನ್ನು ಪಿತೃಗಳಾಗಲೀ, ದೇವತಾಗಳು ಆಗಲೀ, ಸ್ವೀಕಾರಮಾಡುವುದಿಲ್ಲ. ಆ ಮಾರ್ಜನ ಫಲವನ್ನು ರಾಕ್ಷಸರು ತೆಗೆದುಕೊಂಡು ಮಾರ್ಜನಮಾಡಿದ ಪುರುಷನನ್ನು ನರಕಕ್ಕೆ ಕಳುಹಿಸುತ್ತಾರೆಂದರ್ಥ.

**ಪ್ರಶ್ನೆ:- ಮಾರ್ಜನಪಾತ್ರವೆಂಥಾದ್ದು ಇರಬೇಕು?**

**ಉ;-** ''ನದ್ಯಾಂ ತೀರ್ಥಹ್ರದೇವಾಪೀಭಾಜನೇಮೃಣ್ಮಯೇಪಿ ವಾ।
ಔದುಂಬರೇಥಸೌವರ್ಣೇ ರಾಜತೇದಾರುಸಂಭವೇ ॥'' ಎಂದು ಪ್ರಮಾಣವಿರುವುದರಿಂದ ನದೀತೀರ್ಥಮೊದಲಾದ ಸ್ಥಳವಿನಹಾ ಇತರಸ್ಥಳಗಳಲ್ಲಿ ಸುವರ್ಣರಜತತಾಮ್ರಮಯವಾದರೂ ಮೃಣ್ಮಯವಾದರೂ,ಅತ್ತಿಗಿಡದ ಕಟ್ಟಿಗೆಯಿಂದ ಮಾಡಿದ ಪಾತ್ರೆಯಾಗಲೀ,

ಯಾವುದಾದರೂ ಪ್ರತ್ಯೇಕವಾಗಿರಬೇಕು. ಅವುಗಳು ಯಾವುದೂ ಇಲ್ಲದ ಪಕ್ಷದಲ್ಲಿ ''ಕೃತ್ವಾಥ ವಾಮಹಸ್ತೇ ವಾ ಸಂಧ್ಯೋಪಾಸ್ತಂ ಸಮಾಚರೇತ್'' ಎಂದು ಪ್ರಮಾಣವಿರುವುದರಿಂದ ವಾಮಹಸ್ತದಲ್ಲಿ ಆದರೂ, ಉದಕವನ್ನು ಹಾಕಿಕೊಂಡು ಸಂಧ್ಯೋಪಾಸನೆ ಮಾಡತಕ್ಕದ್ದು. ಅನ್ಯತ್ರ ಪಾತ್ರವಿದ್ದರೆ ವಾಮಹಸ್ತ- ದಲ್ಲಿ ನೀರು ಹಾಕಿಕೊಂಡು ಸಂಧ್ಯಾವಂದನಪ್ರಯುಕ್ತ ಮಾರ್ಜನಮಾಡಬಾರದು.

**ಪ್ರಶ್ನೆ:- ವಾಮಹಸ್ತದಲ್ಲಿ ನೀರುಹಾಕಿಕೊಂಡು ಮಾರ್ಜನಸಹಿತ ಸಂಧ್ಯಾಮಾಡಿದರೆ ಏನು ಫಲಬರುತ್ತದೆ?**

**ಉ:-** 'ವಾಮಹಸ್ತೇ ಜಲಂ ಕೃತ್ವಾ । ಏತು ಸಂಧ್ಯಾ ಉಪಾಸತೇ ।

ಸಾ ಸಂಧ್ಯಾ ವೃಷಲೀಜ್ಞೇಯಾ ಹ್ಯಸುರಾಂಸ್ತೈಸ್ತು ತರ್ಪಿತಾಃ ॥'' ಎಂದು ಪ್ರಮಾಣವಿರುವುದರಿಂದ ಆ ಸಂಧ್ಯಾದಿಂದ ರಾಕ್ಷಸರು ತೃಪ್ತರಾಗುತ್ತಾರೆ. ಆ ಸಂಧ್ಯಾವಂದನಕ್ಕೆ ವೃಷಲೀ(ಶೂದ್ರೀ) ಎಂದು ಹೆಸರು.

**ಶ್ರೀತಿಮ್ಮಣ್ಣಾರ್ಯರು:- ಅಥ ಮಾರ್ಜನಂ :-** ಋಷಿಛಂದೋದೇವತಾನುಸ್ಮರಣ- ಪೂರ್ವಕಂ ಆಪೋಹಿಷ್ಠೇತಿ ಮಾರ್ಜನಂ । ಋಜುಸಂಶುದ್ಧಾವಿತಿ ಧಾತೋಃ । ಉತಂ ತಸ್ಯೇದಂ ರೂಪಂ । ಅಷ್ಟಾಕ್ಷರೈರ್ನವಪದೈಪಾದಾದೌ ಬ್ರಹ್ಮಹಾ ಭವೇತ್ । ಪಾದಾಂತೇ ಮಾರ್ಜನಂ ಕುರ್ಯಾದೇಶ್ವಮೇಧ ಫಲಂ ಲಭೇತ್ । ಪಾದಾದೌ ಪ್ರಣವಂ ಚೋಕ್ತ್ವಾ ಪಾದಾಂತೇ ಮಾರ್ಜನಂ ಭವೇತ್ ॥ ಆಪೋಹಿಷ್ಠೇತಿ ನವಕಮಾರ್ಜನಂ ಮುನಿಭಿಃ ಸ್ಮೃತಂ । ರಜಃ ಸತ್ವತಮೋಜಾತಂ ಮನೋವಾಕ್ಕಾಯಕರ್ಮಜಂ । ಜಾಗ್ರತ್ಸ್ವಪ್ನಾದಿಜನಿತಂ ನವೈತಾಂ ನವಭಿರ್ದಹೇತ್ । ಋಗ್ವೇದಿನಾಂ ಮಾರ್ಜನಂ ವಿಶೇಷಃ । ಮಸ್ತಕೇಭುವಿಚಾಕಾಶೇ ಆಕಾಶೇಭುವಿಮಸ್ತಕೇ ಮಸ್ತಕೇಚತಥಾಕಾಶೇಽಶೇಷಂ ಚ ಭುವಿ ನಿಕ್ಷಿಪೇತ್ । ಅತ್ರಾಕಾಶ ಭೂ ಶಬ್ದಾಭ್ಯಾಂ ಹೃದಯಪಾದೌ ॥ ಸಸಥ ತ್ರಯಮಾಕಾಶೇವ ವರತ್ರಯ ಮಸ್ತಕೇ । ನನನತ್ರಯಪಾದೇಚ ಮಾರ್ಜನಂ ನವಭಿಸ್ಮೃತಮಿತ್ಯುಕ್ತ ಪ್ರಕಾರೇಣ । ಯಜುರ್ವೇದಿನಾಂ ಸಪ್ತಪಾದೈಃ ಶಿರಸಿ ಮಾರ್ಜನಂ ॥ ಅಷ್ಟಮಪಾದೇನ ಭುವಿ ವಿಕ್ಷೇಪಣಂ ನವಮಪಾದೇನ ಶಿರಸಿ ಮಾರ್ಜನಂ ॥ ಅಷ್ಟಮಪಾದೇನ ಭುವಿವಿಕ್ಷೇಪಣಂ ನವಮಪಾದೇನ ಶಿರಸಿ ಮಾರ್ಜನಂ ॥ ಯಸ್ಯ ಕ್ಷಯಾಯ ಪಾದಂ ಚದ್ಯಾಪಃ ಶುದ್ಧಂತು ಮೇವಚ । ಭೂಮೌಪಾದಂ ವಿನಿಕ್ಷಿಪ್ಯ ಮೂರ್ಧ್ನಿ ಪ್ರತಿಹೀತರಾನ್ಮೂರ್ಧ್ನಿ ಮಾರ್ಜಯೇದಿತಿ। ಪಾದಂ ಪಾದಂ ಕ್ಷಿಪೇನ್ಮೂರ್ಧ್ನಿ ಪ್ರತಿ ಪ್ರಣವಸಂಯುತಂ। ನಿಕ್ಷಿಪೇದಷ್ಟಮಂ ಪಾದಂ ಅಧೋಯಸ್ಯ ಕ್ಷಯಾಯೇತಿ ಚೇತಿ॥

**॥ ಜಲಾಭಿಮಂತ್ರಣ ॥**

ಸೂರ್ಯಶ್ಚ (ಸಾಯಂಕಾಲದಲ್ಲಿ- ಅಗ್ನಿಶ್ಚ) ಇತ್ಯಸ್ಯ ಮಂತ್ರಸ್ಯ । ನಾರಾಯಣ ಋಷಿಃ (ಸಾಯಂಕಾಲದಲ್ಲಿ- ಹಿರಣಗರ್ಭ)।ಸೂರ್ಯ(ಸಾಯಂಕಾಲದಲ್ಲಿ- ಅಗ್ನಿ)ಮಾಮನ್ಯು ಮನ್ಯುಪತಯೋ ರಾತ್ರಿ(ಸಾಯಂ-ಅಹ) ರ್ದೇವತಾ। ಪ್ರಕೃತೀ ಛಂದಃ। ಜಲಾಭಿಮಂತ್ರಣೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ **ಹರಿಃ ಓಂ ॥ ಸೂರ್ಯಶ್ಚ (ಸಾಯಂ- ಅಗ್ನಿಶ್ಚ) ಮಾಮನ್ಯುಶ್ಚ- ಮನ್ಯುಪತೇಶ್ಚ ಮನ್ಯು ಕೃತೇಭ್ಯಃ। ಪಾಪೇಭ್ಯೋ ರಕ್ಷಂತಾಮ್। ಯದ್ರಾತ್ರ್ಯಾ(ಸಾಯಂ-ಯದಹ್ನಾ) ಪಾಪಮಕಾರ್ಷಮ್। ಮನಸಾ ವಾಚಾ- ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ। ರಾತ್ರಿ(ಸಾಯಂ-ಅಹ) ಸ್ತದವಲುಂಪತು ।ಯತ್ ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ । ಸೂರ್ಯೇ(ಸಾಯಂ -ಸತ್ಯೇ) ಜ್ಯೋತಿಷಿ ಜುಹೋಮಿ ಸ್ವಾಹಾ॥ ಓಂ॥**

**ಕನ್ನಡಾರ್ಥ:-** ಸೂರ್ಯಶ್ಚ ಎಂದು ಮೇಲೆ ಹೇಳಿದ ಮಂತ್ರಕ್ಕೆ ನಾರಾಯಣನು ಋಷಿ. ಮನ್ಯುಪತಿಗಳಾದ ರಾತ್ರಿನಿಯಾಮಕದುರ್ಗಾದೇವಿಯರು ದೇವತಾ। ಪ್ರಕೃತಿಛ್ಛಂದಸ್ಸು ಉಳ್ಳದ್ದು. ಇದು ಜಲಾಭಿಮಂತ್ರಣ ಮಂತ್ರ.

ಸೂರ್ಯಃ=(ಸೂರಿಭಿಃ ಪ್ರಾಪ್ಯತ್ವಾತ್) ಜ್ಞಾನಿಗಳಿಂದ ಹೊಂದತಕ್ಕ, ಅಥವಾ ಸುಷ್ಟುಕರ್ಮಸು ಪ್ರಾಣಿನಾಂ ಪ್ರೇರಯತೀತಿ ವಾ ಸಮೀಚೀನವಾದ ಕರ್ಮಗಳಲ್ಲಿ ಪ್ರಾಣಿಗಳನ್ನು(ಜ್ಞಾನಿಗಳನ್ನು) ಪ್ರೇರಣೆ ಮಾಡುವಂತಹ ಅಥವಾ (ಸೂರಾನ್ ಮೋಕ್ಷಂ ಪ್ರಾಪಯತೀತಿ) ಜ್ಞಾನಿಗಳನ್ನು ಮೋಕ್ಷವನ್ನು ಹೊಂದಿಸತಕ್ಕ ಪರಮಾತ್ಮನು. ಅಥವಾ ಪ್ರಸಿದ್ಧಸೂರ್ಯನು ಮನ್ಯುಪತಿಗಳಾದಂಥಾ ಕ್ರೋಧಾಭಿಮಾನಿಗಳಾದ ಬ್ರಹ್ಮರುದ್ರಾದಿ ಸಮಸ್ತದೇವತೆಗಳೂ ನಾನು ಮಾಡಿದಂತಹಾ ಪಾಪ- ಗಳಿಂದ ರಕ್ಷಿಸುವುದಕ್ಕೋಸ್ಕರ ಈ ಉದಕವನ್ನು ಅಭಿಮಂತ್ರಿಸುತ್ತೇನೆ ಎಂದು ಅರ್ಥ.

***ಮಂತ್ರಾರ್ಥ:-*** ಸೂರ್ಯಃ ಚ= ಪ್ರಸಿದ್ಧಸೂರ್ಯನು ಅಥವಾ ಸೂರ್ಯನಿಯಾಮಕ ಅಥವಾ ಸೂರಿಭಿಃ ಪ್ರಾಪ್ಯತ್ವಾತ್ ಸೂರ್ಯಃ ಎಂಬುವ ವ್ಯುತ್ಪತ್ತಿದ್ವಾರಾ ಸೂರ್ಯನಾಮಕ ಪರಮಾತ್ಮನು । ಮನ್ಯುಃ ಚ = ಕ್ರೋಧಾಭಿಮಾನಿಯಾದ ರುದ್ರದೇವರು । ಮನ್ಯುಪತಯಃ ಚ=ಕ್ರೋಧ ನಿಯಾಮಕ ದೇವತೆಗಳಾದ ಇಂದ್ರವರುಣಅಗ್ನಿ ಮೊದಲಾದವರು (ಮನ್ಯುರಿಂದ್ರೋ ಮನ್ಯುರೇವಾಸ ದೇವೋ ಮನ್ಯುರ್ಹೋತಾ ವರುಣೋ ಜಾತವೇದಾಃ ಎಂದು ಶೃತಿಯಿರುವುದರಿಂದ ಸ್ವರಕ್ಷಣವಿಷಯದಲ್ಲಿ ಸರ್ವರಲ್ಲಿಯೂ ಮನ್ಯುತ್ವ ವ್ಯಾಪ್ತಿಯುಂಟು.) ಮನ್ಯುಕೃತೇಭ್ಯಃ= ಕ್ರೋಧ-

ದಿಂದ ಮನಃಪೂರ್ವಕವಾಗಿ ಮಾಡಲ್ಪಟ್ಟ, ಪಾಪೇಭ್ಯಃ= ಪಾಪಗಳದೆಸೆಯಿಂದ; ಮಾ= ನನ್ನನ್ನು; ರಕ್ಷಂತಾಂ= 'ಹತ್ವಾಯಶತ್ರೂನ್ ವಿಭಜಸ್ವವೇದ' ಎಂಬ ಶ್ರುತ್ಯನುಸಾರ ರಕ್ಷಣಮಾಡಲಿ. ಮನ್ಯುಶಬ್ದಕ್ಕೆ ದೀನತ್ವಕ್ರೋಧಗಳೆಂದು ಅರ್ಥ. ರಾತ್ರ್ಯಾ=ರಾತ್ರಿಕಾಲದಲ್ಲಿ; ಮನಸಾ=ಮನಸ್ಸಿನಿಂದಲೂ (ಪರದಾರಾ ಪರದ್ರವ್ಯಹರಣ,ಪರದ್ರೋಹಾದಿ ವಿಚಾರಮಾಡೋಣ ಮೊದಲಾದ) ವಾಚಾ=ವಾಕ್ಕಿನಿಂದಲೂ ;(ಸಂಕೀರ್ತಯೇ-ಜ್ಜಗನ್ನಾಥದೇವಾನಪಿ ಸಮೀರಯೇತ್ । ಸತ್ಯಂಭೂತ ಹಿತಂ ಬ್ರೂಯಾನ್ನಾನ್ಯಥಾವಾಚಮುತ್ಸೃಜೇತ್ । ಎಂಬುವ ಪ್ರಮಾಣವ್ಯತಿರಿಕ್ತವಾದ ಬಾಯಿಯಿಂದ ಅಸತ್ಯ ಅಸಹ್ಯ ಕಠಿಣವಾಕ್ಕುಗಳು ನುಡಿಯೋಣ ಮೊದಲಾದ) ಹಸ್ತಾಭ್ಯಾಂ= ಕೈಗಳಿಂದಲೂ(ಚೋರತ್ವಾದಿ ಅಕ್ರಮಗಳು ಮಾಡೋಣ) ಶಿಶ್ನಾ=ಶಿಶ್ನದಿಂದಲೂ(ಅಗಮ್ಯಾಗಮನ ಮಾಡೋಣ ,ನಿಷಿದ್ಧದಿವಸಗಳಲ್ಲಿ ಸ್ವಸ್ತ್ರೀಗಮನ ಮಾಡೋಣ) ಯತ್ಪಾಪಂ=ಇಂಥಾ ಯಾವ ಪಾಪವನ್ನು ; ಅಕಾರ್ಷಂ=ಮಾಡಿದನೋ; ತತ್= ಆ ಪಾಪವನ್ನು ; ರಾತ್ರಿಃ=ರಾತ್ರಿ ಅಭಿಮಾನಿ ದೇವತೆಯಾದ ದುರ್ಗಾದೇವಿಯರು (ಅಥವಾ ರಾತ್ರಿನಿಯಾಮಕ ಪರಮಾತ್ಮನು) ನನ್ನ ಪ್ರಾರ್ಥನಾದಿಂದ ; ಅವಲಂಪತು= ಪರಿಹಾರ ಮಾಡಲಿ; ಮಯಿ=ನನ್ನಲ್ಲಿ; ಯತ್ಕಿಂಚ= ಸ್ವಲ್ಪ ವಾದರೂ; ದುರಿತಂ=(ಮತ್ತೊಂದು) ಪಾಪವು ಇದ್ದರೆ; (ಜನ್ಮಾಂತರದಲ್ಲಿ ಮಾಡಿದ್ದು , ಕೌಮಾರಾವಸ್ಥೆಯಲ್ಲಿ ಮಾಡಿದ್ದು , ಪ್ರಮಾದದಿಂದ ಮಾಡಿದ್ದು) ಇದಂ= ಆ ಪಾಪವನ್ನು(ಕೂಡಾ); ರಾತ್ರಿ ನಿಯಾಮಕ ಪರಮಾತ್ಮ ಅಥವಾ ರಾತ್ರ್ಯಭಿಮನ್ಯರಾದ ದುರ್ಗಾದೇವಿಯರು ನಾಶ ಮಾಡಲಿ ಮಾಂ=ನನ್ನ ; ಅಹಂ=( ಈ ಪ್ರಕಾರ ಸಮಸ್ತಪಾಪಗಳನ್ನು ಕಳೆದುಕೊಂಡ ನಾನು) ನಿತ್ಯ ನೈಮಿತ್ತಿಕಾದಿ ಸಕಲವಿಹಿತ ಕರ್ಮಾನುಷ್ಠಾನದಿಂದ ಶ್ರೀಪರಮಾತ್ಮನ ಆರಾಧನಮಾಡೋ ಉದ್ದೇಶವುಳ್ಳ ; ಅಮೃತಯೋನೌ= ಮೋಕ್ಷಪ್ರದನಾದಂಥಾ ; ಸೂರ್ಯೇಜ್ಯೋತಿಷಿ= ಜ್ಯೋತಿಶ್ಶಬ್ದ-ವಾಚ್ಯನಾದ ಸೂರ್ಯನಿಯಾಮಕ ಸೂರ್ಯನಾಮಕಪ್ರಕಾಶರೂಪ ಪರಮಾತ್ಮನಲ್ಲಿ ; ಜುಹೋಮಿ= ಹೋಮವನ್ನು ಈ ಉದಕವನ್ನು (ಸಮರ್ಪಣವನ್ನು) ಮಾಡುತ್ತೇನೆ. (ಅದಕ್ಕಾಗಿ ಈ ಉದಕವನ್ನು) ಸ್ವಾಹಾ=ಹೋಮಮಾಡಲ್ಪಟ್ಟದ್ದು ಆಗಲಿ(ಪಾನರೂಪವಾದ ಅರ್ಪಣ ಮಾಡಲ್ಪಟ್ಟದ್ದು ಆಗಲಿ.) ಈ ಪ್ರಕಾರ ಸರ್ವಕರ್ಮಾರಂಭವು ಷಡ್ಗುಣೈಶ್ವರ್ಯಯುಕ್ತನಾದ ಪರಮಾತ್ಮನಲ್ಲಿ ಸಮರ್ಪಣ ಮಾಡಿ ಆಚಮನ ಮಾಡಬೇಕೆಂದು ಅರ್ಥ.

ಮೇಲೆಕಂಡಂಥಾ ಪಾಪಗಳ ಪ್ರಾಯಶ್ಚಿತ್ತಾರ್ಥವಾಗಿ ಉದಕದಲ್ಲಿ ಜ್ಯೋತಿಶ್ಶಬ್ದವಾಚ್ಯನಾದ ಅಗ್ನಿರೂಪ ಪರಮಾತ್ಮನ ಆವಾಹನಮಾಡಿ ಆ ಉದಕಪಾನವೆಂಬ ಹೋಮದಿಂದ ಸಮಸ್ತ ಪಾಪಗಳನ್ನು ಭಸ್ಮೀಭೂತವಾಗಿ ಮಾಡುತ್ತೇನೆಂದು ಅಭಿಪ್ರಾಯ. ಈ ಸಂಧ್ಯಾವಂದನೆ ಯಜ್ಞ-ರೂಪವಾದದ್ದು. ಅಭಿಮಂತ್ರಿತವಾದ ಉದಕಪಾನ ಹವಿರ್ಭೂತವಾದದ್ದು ಎಂದು ತಿಳಿಯಬೇಕು.

**ಶ್ರೀತಿಮ್ಮಣ್ಣಾರ್ಯರು**:-**ಜಲಪ್ರಾಶನ** :- ಸೂರ್ಯಸ್ಯೇತ್ಯಸ್ಯ ಮಂತ್ರಸ್ಯ ನಾರಾಯಣಋಷಿಃ ಇತಿ ಕೇಚಿತ್ । ಹಿರಣ್ಯಗರ್ಭಋಷಿಃ ಇತ್ಯಪರೇ । ಯಾಜ್ಞವಲ್ಕ್ಯೋಪನಿಷದಋಷಿರಿತೀತರೇ । ಮನು ಪ್ರಬೋಧನ ಇತಿ ಧಾತೋಃ । ಮನ್ಯುರ್ಜ್ಞಾನಸ್ವರೂಪೋ ನೃಸಿಂಹಃ । ''ಸ್ಮರನ್ನೃಸಿಂಹಂ ಭಗವಂತಂ ಈಶ್ವರಂ ಸ ಮನ್ಯುಸೂಕ್ತಂ ಚ ದದರ್ಶಭಕ್ತ್ಯಾ । ಯಸ್ತೇ ಮನ್ಯೋ ಇತ್ಯತೋ ನಾರಸಿಂಹಂ ಸೋಮಂ ತಸ್ಮೈ ಪ್ರಾರ್ಪಯಚ್ಛ್ರೋಣಿತಾಖ್ಯಮಿ''ತಿ ಶ್ರೀಮನ್ಮಹಾಭಾರತ- ತಾತ್ಪರ್ಯನಿರ್ಣಯೋಕ್ತೇಃ । ಮನ್ಯುಪತಯಃ ಕ್ರೋಧಾಭಿಮಾನಿನಃ । ಯಜ್ಞಪತಯೋ ವಾ । ಮನುದೈನ್ಯೇಕ್ರತೌಕ್ರುಧೀತ್ಯಭಿಧಾನಾತ್ । ಮನ್ಯುರ್ನೃಸಿಂಹಃ ಪತಿರ್ಯೇಷಾಂ ತೇ ಮನ್ಯುಪತ- ಯಃ ಬ್ರಹ್ಮಾದಯೋದೇವಾಃ । ಮನ್ಯುಕೃತೇಭ್ಯಃ । ಮನ್ಯುರಿತ್ಯುಪಲಕ್ಷಣಂ । ಕ್ರೋಧಾರಿಷಡ್ವರ್ಗೈಃ ಸಮಾರ್ಜಿತೇಭ್ಯಃ ಪಾಪೇಭ್ಯಃ ಮಾ ಮಾಂ ರಕ್ಷಂತಾಂ ॥ ಸರ್ವ ವೈದಿಕೈಃ । ಸೂರ್ಯ ಮಾ ಮನ್ಯು ಮನ್ಯುಪತಯ ಇತಿ ಮಾಮನ್ಯುರಿತಿ ಸಹಪಾಠಾತ್ ಮಾಮನ್ಯುರಿತಿ ಏಕಪದಂ ॥ ಮಾಲಕ್ಷ್ಮೀಃ ತಯಾ ಸಹಿತೋ ಮನ್ಯುಃ ಶ್ರೀಲಕ್ಷ್ಮೀನೃಸಿಂಹ ಇತಿ ವಾ ॥ ಮನ್ಯುಕೃತೇಭ್ಯಃ ದೈನ್ಯಕೃತೇಭ್ಯಃ ಇತಿ ವಾ । ಮನ್ಯುರ್ದೈನ್ಯೇ-ಕ್ರತಾವಿತ್ಯುಕ್ತೇಃ । ಕಿಂಚ ರಾತ್ರ್ಯಾ ರಾತ್ರಿಕಾಲೇನ ಯತ್ಪಾಪಮಕಾರಿಷಂ ಕೃತವಾನಸ್ಮಿ॥ ಮನಸಾ ॥ ಜ್ಞಾನೇಂದ್ರಿಯೋಪಲಕ್ಷಣಂ । ದುಷ್ಟ-ವಿಷಯಕಾಮನೇನ । ದುಷ್ಟರೂಪದರ್ಶನೇನ । ದುಷ್ಟಶಬ್ದಶ್ರವಣೇನ । ದುಷ್ಟಾನ್ನಭಕ್ಷಣೇನ ದುಷ್ಟಗಂಧ ಘ್ರಾಣನೇನ । ದುಷ್ಟಾಂಗನಾಂಗ ಸ್ಪರ್ಶನೇನ । ತಥಾ ಕರ್ಮೇಂದ್ರಿಯೇಣ ವಾ ಚಾದುಷ್ಟಾಭಿಧಾನೇನ । ಹಸ್ತಾಭ್ಯಾಂ ವಿಪ್ರಾದಿತಾಡನ ಕರಾಭ್ಯಾಂ । ಪದ್ಭ್ಯಾಂ ದುಷ್ಟಗ್ರಹಗಮನ ಗವಾದಿತಾಡನ ಕರಾಭ್ಯಾಂ । ಉದರೇಣಾನಿವೇದಿತಾನ್ನಪುಷ್ಟೇನ । ಶಿಶ್ನಾ । ಸುಪಾಂ ಸುಲಿಗಿತಿ ತೃತೀಯಾದಾದೇಶಃ । ಶಿಶ್ನೇನ ಕೃತ ಯತ್ಪಾಪಂ ರಾತ್ರಿಃ ರಾತಿ-ದದಾತಿ ತ್ರಾಯತ ಇತಿ ರಾತ್ರಿಃ ಶ್ರೀಹರಿಃ ತತ್ಪಾಪಮವಲಂಪತು ॥ ರಾತ್ರಿಃ ತದಭಿಮಾನಿನೀ ದುರ್ಗಾ ಚ ರಾತ್ರಿಃ ಭಾರತೀ ಚ । ರಾತ್ರೀಸೂಕ್ತೇನ ಭಗವಾನ್ ಸಾಕ್ಷಾತ್ ನಾರಾಯಣಃ ಪ್ರಭುಃ । ತತ್ಸನ್ನಿಧಾನಾದ್ದುರ್ಗಾಯಾ ಏಷೋರ್ಥಃ ಉಪಚಾರತ ಇತ್ಯೈತರೇಯ ಭಾಷ್ಯೋಕ್ತೇಃ । ರಯಿರೇವ ರಾತ್ರಿರಿತಿ ಷಟ್ಪ್ರಶ್ನೋಕ್ತೇಃ । ಪ್ರಾಣೋಹ್ಯಥ ಚವಾಙ್ನಿಶಿ ಇತಿ ತದ್ಭಾಷ್ಯೋಕ್ತೇಶ್ಚ । ಕಿಂಚ ಯದ್ದುರಿತಂ ಜ್ಞಾನಾಜ್ಞಾನತಃ ಕೃತಂ ಮಯಿ ವರ್ತತೇ ಇದಂ ಚ ದುರಿತಂ । ಅವಲಂಪತು । ಅಹಂ ಅಮೃತಯೋನೌ ಮುಕ್ತಾತ್ರಯೇ ಸುಧಾಕಾರಣೇ ವಾ । ಮಂದರ ವಾಸುಕಿ ಸುರಾಸುರಸ್ಥಿತರೂಪೇಣ । ಧನ್ವಂತರೀರೂಪೇಣ ಅಮೃತಯೋನೌ ಸುಧಾಕಾರಣೇ । ಸೂರ್ಯೇ ಸೂರಿಪ್ರಾಪ್ಯೇ

**ಜ್ಯೋತಿಷಿ ತೇಜೋರೂಪೇ ಬ್ರಹ್ಮಣಿ ಇದಂ ಪಾಪಂ । ಮಾಂ ಚ । ಮಾಂ ಮತ್ಸಂಬಂಧೀತಿ ವಾ ॥ ಇದಮಹಮಿತ್ಯೇಕಪದಂ । ಏತಾದೃಶಾಹಂಕಾರಂ ವಾ । ಜುಹೋತು ಹೋಮಂ ಕರೋಮಿ ॥ ಸ್ವಾಹಾ ಸುಷ್ಟು ಆಹೂಯತೇ ವೇದೈರಿತಿ ಸ್ವಾಹಾ-** ಹೇ ಗೋವಿಂದೇತಿ ವಿಷ್ಣುಸಂಬೋಧನಂ। ಪಾಪವಿಶಿಷ್ಟಸ್ಯ ಸ್ವಸ್ಯ ಹೋಮೇ ಸ್ವರ್ಗೀದ್ವಸ್ತ ಇತಿ ನ್ಯಾಯೇನ ವಿಶೇಷಣೀಭೂತ ಪಾಪವಿಶೇಷಾನ್ಮುಕ್ತೋ ಭವತಿ। ಜೀವಸ್ಯ ಭಗವತ್ಪ್ರವೇಶೇನ ಪಾಪಕ್ಷಾಲನಸ್ಯ ನಿಭಗಾಹಂ ತ್ವಯಿಮೃಜೇ ಸ್ವಾಹೇತ್ಯಾದೌ ಉಕ್ತತ್ವಾತ್ । ಅಥವಾ ಅಹಂ ಮಾಂ ಜ್ಯೋತಿಷಿ ಪರಬ್ರಹ್ಮಣಿ ಜುಹೋಮಿ ದದಾಮಿ ಸಮರ್ಪಯಾಮಿ ಇತಿ ಯಾವತ್ । ಹುದಾನಾದನಯೋರಿತಿ ಧಾತೋಃ । ಆತ್ಮಾತ್ಮೀಯ ಸಮರ್ಪಣೇನ ಭಗವಾನ್ಪೂ -ಜಿತೋ ಭವತಿ । ತಸ್ಯೈತ್ಯರ್ಪಣ ಮಾತ್ರೇಣ ಪೂಜಿತೋ ಹಿ ಭವೇದ್ಧರಿಃ ಇತಿ ಐತರೇಯ- ಭಾಷ್ಯೋಕ್ತೇಃ । ಸಾಯಮಗ್ನಿಶ್ಚೇತ್ಯೋಕ್ತ್ವಾ ಪ್ರಾತಃ ಸೂರ್ಯೇತ್ಯಪಃ ಪಿಬೇತ್ । ಆಪಃ ಪುನಂತು ಮಧ್ಯಾಹ್ನೇ ತತಃ ಆಚಮನಂ ಚರೇದಿತಿ।

**ಆಚಮನ**

**(ಅಭಿಮಂತ್ರಣದ ನಂತರ ಮತ್ತೆ ಆಚಮನ ಮಾಡಬೇಕು.)**

**ಪುನರ್ಮಾರ್ಜನಮ್**

ಆಪೋಹಿಷ್ಠೇತಿ ನವರ್ಚಸ್ಯ ಸೂಕ್ತಸ್ಯ- ಅಂಬರೀಷ ಸಿಂಧುದ್ವೀಪ ಋಷಿಃ-ಆಪೋದೇವತಾ -ಪಂಚ ಗಾಯತ್ರ್ಯಃ-ಪಂಚಮೀ ವರ್ಧಮಾನಾ। ಸಪ್ತಮೀ ಪ್ರತಿಷ್ಠಾ। ಅಂತ್ಯೇ ದ್ವೇ ಅನುಷ್ಟುಭೌ- ಪುನಃ ಮಾರ್ಜನೇ ವಿನಿಯೋಗಃ॥

ಶ್ರೀ ಮಧ್ವಾಂತರ್ಯಾಮಿನ್ **॥ ॥ಹರಿಃ ಓಂ॥ ಆಪೋಹಿಷ್ಠಾಮಯೋ ಭುವಃ । ಓಂ ತಾನ ಊರ್ಜೇ ದಧಾತನ । ಓಂ ಮಹೇರಣಾಯ ಚಕ್ಷಸೇ । ಓಂ ಯೋ ವಃ ಶಿವತಮೋ ರಸಃ । ಓಂ ತಸ್ಯ ಭಾಜಯತೇ ಹನಃ । ಓಂ ಉಶತೀರಿವ ಮಾತರಃ । ಓಂ ತಸ್ಮಾ ಅರಂಗ ಮಾಮವಃ। ಓಂ ಯಸ್ಯ ಕ್ಷಯಾಯ ಜಿನ್ವಥ। ಓಂ ಆಪೋ ಜನಯಥಾ ಚ ನಃ॥ ಓಂ॥** ( ಈ ಋಕ್ಕುಗಳಿಗೆ ಹಿಂದೆಯೇ ಅರ್ಥವನ್ನು ಬರೆದಿದೆ.)

**ಓಂ ಶಂ ನೋ ದೇವೀರಭಿಷ್ಟಯ-ಆಪೋಭವಂತು ಪೀತಯೇ। ಶಂ ಯೋರಭಿಸ್ರವಂತು ನಃ ॥ 4 ॥** (ಋ॥ 7 ಅ ॥ 6 ಅ॥ 5 ವ ॥ 4ನೇಋಕ್‌ನಿಂದ 9ನೇಋಕ್ ನ ವರೆಗೆ)

***ಮಂತ್ರಾರ್ಥ:-*** ಉದಕಪರ:- ನಃ-ನಮ್ಮಗಳಿಗೆ ; ಶಂ=ಸುಖವು; ಭವಂತು=ಆಗಲಿ; ದೇವೀ=ಕ್ರೀಡಾದಿಗುಣವಿಶಿಷ್ಟರಾದ; ಆಪಃ=ಓ ಉದಕಾಭಿಮಾನಿ ದೇವತೆಗಳಿರಾ; ಅಭೀಷ್ಟಯೇ= ಅಭಿಷ್ಟಸಿದ್ಧಿಗೋಸ್ಕರ ; ಪೀತಯೇ=ಪಾನಕ್ಕೋಸ್ಕರ; ( ಉಪಯೋಗ ಮಾಡಿರಿ) ಶಂ= ರೋಗ-ಶಮನವನ್ನು(ಸುಖಪ್ರಾಪ್ತಿಯನ್ನು); ಯೋಃ= ರೋಗಪ್ರತಿ- ಬಂಧವನ್ನು(ಮಾಡಿರಿ) ಅಭಿ=ನಮ್ಮಗಳ ಮೇಲೆ ಸ್ರವಂತು= (ಶುದ್ಧಿಗಾಗಿ) ಚೆಲ್ಲಿರಿ.

***ಪರಮಾತ್ಮನಪರ:-*** ದೇವೀ=ಕ್ರೀಡಾದಿಗುಣವಿಶಿಷ್ಟನಾದ; ಹೇ ಆಪಃ= ಅಪ್ ಶಬ್ದವಾಚ್ಯನಾದ ಓ ಪರಮಾತ್ಮನೇ! ನಃ=ನಮ್ಮಗಳಿಗೆ ; ಅಭೀಷ್ಟಯೇ= ಸರ್ವಾಭೀಷ್ಟ ಪ್ರಾಪ್ತ್ಯರ್ಥವಾಗಿ; ಪೀತಯೇ=ಪಾನಾರ್ಥವಾಗಿಯೂ ಅಥವಾ ರಕ್ಷಣಾರ್ಥವಾಗಿಯೂ, ಶಂ=ಸುಖಾರ್ಥ-ವಾಗಿಯೂ,(ಅಂದರೆ ಕೇವಲ ಈ ಲೋಕದ ಅಭೀಷ್ಟಪ್ರಾಪ್ತಿ ಪ್ರಾಪ್ತ್ಯರ್ಥವಾಗಿ ಅಂತಲೇ ಅಲ್ಲ, ಮೋಕ್ಷಸುಖವನ್ನು ಕೊಡತಕ್ಕದ್ದೆಂದು ಪ್ರಾರ್ಥನೆ ಮಾಡುತ್ತೇನೆ) ಆದುದರಿಂದ ಮೋಕ್ಷಸುಖವನ್ನು ನಮ್ಮಗಳಿಗೆ ; ಯೋಃ=ಪಾಪನಾಶನ ವನ್ನು; ಸ್ರವಂತು=ಕೊಡತಕ್ಕದ್ದು; ಭವಂತು=ಆಗಲಿ॥

**ಶ್ರೀತಿಮ್ಮಣ್ಣಾರ್ಯರು:-**ದೇವೀಃ ದೇವ್ಯಃ ಕ್ರೀಡಾದಿ ಗುಣವಿಶಿಷ್ಟಾಃ ಹೇ ಆಪಃ । ಭಗವದ್ರೂಪವಿಶೇಷಾಃ । ಬ್ರಹ್ಮಾದಯೋ ದೇವಾಃ ಅಬಭಿಮಾನಿನಃ। ನಃ ಅಸ್ಮಾಕಂ। ಶಂ ಸುಖದಾತ್ರ್ಯೋ ಭವಂತು। ಶಂನೋ ಮಿತ್ರ ಇತ್ಯಾದೌ ವ್ಯಾಸತೀರ್ಥಚರಣೈಃ ತಥಾ ವ್ಯಾಖ್ಯಾತತ್ವಾತ್ । ಶಂಕರ ಇತ್ಯಾದಿ ಪ್ರಯೋಗಾದಿತಿ ಪ್ರಕ್ರಿಯಾಪ್ರಸಾದೋಕ್ತೇಃ । ಶಂ ಸುಖಾಯ । ಭವಂತ್ವಿತಿ ವಾ । ಅಭಿಷ್ಟಯೇ । ಅಭಿಷ್ಟಾಯ ದಾರಧನಸುಖಾದಿ ಸಾಧನಾಯ ಭವಂತು ತದ್ದಾತ್ರ್ಯೋ ಭವಂತು ಇತಿ ಯಾವತ್। ಪೀತಯೇ ಪಾನಾರ್ಥಂ ಭವಂತು। ಶ್ರೀಭಗವದರ್ಪಿತ ಜಲಪಾನಾದಿನಾ ಯಥಾ ಪೂತಾ ಭವೇಮ ತಥಾ ಕುರ್ವಂತ್ವಿತಿ ಭಾವಃ। ನಃ। ಶಂಯೋ ಸುಖಾಯ। ಅಭಿ ಅಭಿಮುಖೇನ। ಶ್ರವಂತು ಪ್ರವಹಂತು। ಅಸ್ಮಚ್ಛಿರಸ್ಯಭಿಸ್ರವಂತ್ವಿತಿ ವಾ । ಅಸ್ಮತ್ ಶಿರಸಿ ಮಾರ್ಜನರೂಪ ಯುಷ್ಮಚ್ಛ್ರವಣೇನ ಪಾಪನಿವೃತ್ತೀಷ್ಟಪ್ರಾಪ್ತಿರೂಪಂ ಶಂಯೋ ಶಬ್ದೋದಿತ ಸುಖದಾತ್ರ್ಯೋ ಭವಂತ್ವಿತಿ ಭಾವಃ॥

**ಈಶಾನಾ ವಾರ್ಯಾಣಾಂ -ಕ್ಷಯಂತೀಶ್ಚರ್ಷಣೀನಾಂ । ಆಪೋ ಯಾಚಾಮಿ ಭೇಷಜಮ್ ॥ 5 ॥**

***ಮಂತ್ರಾರ್ಥ:-*** *ಉದಕಪರ:-* ವಾರ್ಯಾಣಾಂ=ಉದಕಗಳಿಗೆ ಅಥವಾ ಉದಕಗಳಲ್ಲಿ ಉತ್ಪನ್ನವಾಗುವ ನೆಲ್ಲು(ಅಕ್ಕಿ)ಮೊದಲಾದ ಧಾನ್ಯಗಳಿಗೆ ; ಈಶಾನಾಃ=ಅಧಿಪತಿಗಳಾದ; ಉದಕಾಭಿಮಾನಿ ದೇವತೆಗಳಿರಾ; ಚರ್ಷಣೀನಾಂ=ಮನುಷ್ಯರಾದ ನಮ್ಮಗಳ; ಕ್ಷಯಂತೀಃ= (ಪಾಪ)ನಾಶಕವಾದ;

ಭೇಷಜಂ=ಸಂಸಾರನಿವಾರಕ ಔಷಧವನ್ನು; ಆಪಃ= ಉದಕದ್ದೆಸೆಯಿಂದ; ಯಾಚಾಮಿ= ಪ್ರಾರ್ಥಿಸುತ್ತೇನೆ.

***ಪರಮಾತ್ಮನ ಪರ:-*** ಈ ಲೋಕದಲ್ಲಿಯೂ ಪಾರತ್ರಿಕದಲ್ಲಿಯೂ ಸುಖಕೊಡಲಿಕ್ಕೆ ನನಗೆ ಸಾಮರ್ಥ್ಯವಿಲ್ಲವೆಂದು ನೀನು ಹೇಳತಕ್ಕದ್ದಲ್ಲ ಎಂಬುವ ಅಭಿಪ್ರಾಯದಿಂದ ಹೇಳುವುದೇನೆಂದರೆ; ಅಹಂ=ಮಾರ್ಜನಕರ್ತನಾದ ನಾನು; ಆಪಃ=ಅಪ್‌ಶಬ್ದವಾಚ್ಯನಾದ ಪರಮಾತ್ಮನೇ ನಿನ್ನನ್ನು ಕುರಿತು; ಭೇಷಜಂ=ಹೃದಯಗ್ರಂಥಿ ವಿಮೋಚಕಸಂಸಾರಪರಿಹಾರಕವಾದ ಔಷಧವನ್ನು; ಯಾಚಾಮಿ=ಪ್ರಾರ್ಥಿಸುತ್ತೇನೆ;ನೀನುನಿನ್ನಸಂಬಂಧಿಯಾದವರು (ದೇವತೆಗಳು)ವಾರ್ಯಾಣಾಂ = ನಿವಾರಣ ಮಾಡತಕ್ಕ ಸಾಮರ್ಥ್ಯ ಉಳ್ಳವರಲ್ಲಿ ; ಈಶಾನಾಃ=ಶ್ರೇಷ್ಠರಾದವರು; (ಅಂದರೆ ಹೃದಯಗ್ರಂಥಿ ವಿಮೋಚಕ ಸಂಸಾರಪರಿಹಾರಕವಾದ ಔಷಧವನ್ನು ಕೊಟ್ಟು ಮೋಕ್ಷಕ್ಕೆ ಇರತಕ್ಕ ಪ್ರತಿಬಂಧಕಸಾಮಗ್ರಿಯನ್ನು ನಿವಾರಣಮಾಡತಕ್ಕ ಶಕ್ತಿ ಇದ್ದವರಲ್ಲಿ ನೀನು ನಿನ್ನ ಭಕ್ತರಾದ ದೇವತಾಗಳು ಸಮರ್ಥರೆಂದರ್ಥ.) ಮತ್ತು ನೀನು ನಿನ್ನ ಭಕ್ತರಾದ ದೇವತೆಗಳು ಎಂತಹವರೆಂದರೆ, ಚರ್ಷಣೀನಾಂ= ದ್ವಿಪಾದ ಚತುಷ್ಪಾದಾದಿ ಪ್ರಾಣಿಗಳ; ಕ್ಷಯಂತೀ= ನಿವಾಸಕರಣ ಭೂತರಾದವರು( ಕ್ಷಿ ನಿವಾಸಗತ್ಯೋಃಯೆಂಬುವ ಧಾತ್ವರ್ಥವನ್ನು ಹಿಡಿದು ಅಥವಾ ಕ್ಷಯ ಹಿಂಸಾಯಾಂ ಎಂಬುವ ಧಾತ್ವರ್ಥವನ್ನನುಸರಿಸಿ ಸ್ವಸ್ವಕೃತಪಾಪಾನುಸಾರವಾಗಿ ಅತಿವೃಷ್ಟಿ ಅನಾವೃಷ್ಟಿ ದ್ವಾರಾ ದೈನ್ಯಾದಿಗಳು ಅನುಭವಿಸತಕ್ಕ ಪ್ರಾಣಿಗಳ ರೋಗಾದಿಗಳನ್ನು ನಾಶ ಮಾಡತಕ್ಕ ವರೆಂದರ್ಥ. )

**ಶ್ರೀತಿಮ್ಮಣ್ಣಾರ್ಯರು:-** ಹೇ ಆಪ ಇತ್ಯನುವರ್ತತೇ । ವಾರ್ಯಾಣಾಂ ವಾರಿಭವಾನಾಂ ಅಶೇಷಪಾರ್ಥಿವಾನಾಂ । ಈಶಾನಾಂ। ಸ್ವಾಮಿನಾಂ । ಅಥವಾ ವಾರ್ಯಾಣಾಂ ಶ್ರೇಷ್ಠಾನಾಂ ಜ್ಞಾನಭಕ್ತ್ಯಾದೀನಾಂ ಈಶಾನಾಮಿತಿ । ಚರ್ಷಣೀನಾಂ ಶಿಷ್ಯಾದಿಪ್ರಜಾನಾಂ । ಕ್ಷಯಂತಿ ನಿವಾಸಯಂತಿ । ಕ್ಷಿನಿವಾಸಗತ್ಯೋರಿತಿ ಧಾತೋಃ । ಏತಾದೃಶಃ ಆಪಃ ಯುಷ್ಮಾನ್ ಭೇಷಜಂ ಸಂಸಾರೌಷಧಂ । ಯಾಚಾಮಿ । ಯಾಚೇ ಪ್ರಾರ್ಥಯೇ । ಸರ್ವವಾರಿಭವಪದಾರ್ಥ- ಸ್ವಾಮಿತ್ವೇನ ಸಂಸಾರನಿವರ್ತಕಜನಕ ಜ್ಞಾನಭಕ್ತ್ಯಾದಿ ಶ್ರೇಷ್ಠಪದಾರ್ಥ ದಾತೃತ್ವೇನ ಸಕಲ ಪ್ರಜಾನಿವಾಸ ಹೇತುತ್ವೇನ ಸರ್ವಾಶ್ರಯತ್ವಾದಪಾಂ ಭೇಷಜ ಪ್ರಾರ್ಥನಂ ಯುಕ್ತಮಿತಿ ಭಾವಃ॥

**ಅಪ್ಸುಮೇಸೋಮೋ ಅಬ್ರವೀತ್-ಅಂತರ್ವಿಶ್ವಾನಿ- ಭೇಷಜಮ್ । ಅಗ್ನಿಂಚ ವಿಶ್ವಶಂಭುವಮ್ ॥ 6 ॥**

***ಕನ್ನಡಾರ್ಥ:-ಉದಕಪರ:-*** ಯಾರಲ್ಲಿ ಯಾವಪದಾರ್ಥವಿರುತ್ತದೋ ಆ ಪದಾರ್ಥವನ್ನು ಅವರಕಡೆಯಿಂದ ಯಾಚನ ಮಾಡತಕ್ಕದ್ದು ಎಂಬುವ ನ್ಯಾಯದಿಂದ ಉದಕದಲ್ಲಿ ಔಷಧಿಗಳು ಇಲ್ಲವಾದ ಕಡೆಯಿಂದ ಅವುಗಳನ್ನು ಆ ಉದಕಗಳ ಕಡೆಯಿಂದ ಹೇಗೆ ಯಾಚನೆ ಮಾಡುತ್ತೀನೆ ಎಂದರೆ, ಅಪ್ಸು= ಉದಕದ; ಅಂತಃ=ಮಧ್ಯ, ವಿಶ್ವಾನಿ=ಸಮಸ್ತವಾದ; ಭೇಷಜಾ=ಔಷಧಗಳನ್ನು ; ವಿಶ್ವಶಂಭುವಂ= ಪ್ರಪಂಚಕ್ಕೆ ಸಂಪೂರ್ಣ-ಸುಖವನ್ನು ಕೊಡತಕ್ಕ; ಅಗ್ನಿಂ ಚ=ಅಗ್ನಿಯು ಇದ್ದಾನೆಂದು ಸೋಮಃ=ಚಂದ್ರನು; ಮೇ=ನನ್ನನ್ನು ಕುರಿತು; ಅಬ್ರವೀತ್=ಹೇಳಿದನು.

***ಪರಮಾತ್ಮನ ಪರ:-*** (ಅಪ್ ಶಬ್ದವಾಚ್ಯನಾದ ಪರಮಾತ್ಮನಲ್ಲಿ ಔಷಧಗಳು ಇಲ್ಲದ ಕಡೆಯಿಂದ ಆತನನ್ನು ಔಷಧಾರ್ಥವಾಗಿ ಹೇಗೆ ಯಾಚನೆ ಮಾಡುತ್ತಿದ್ದೀಯ ಎಂದರೆ, ಅದಕ್ಕೆ ಸಮಾಧಾನ ವೇದಪುರುಷ ಹೇಳಿದ್ದಾನೆ.) ಅಪ್ಸು ಅಂತಃ= ಉದಕದಲ್ಲಿ ಆವಿರ್ಭೂತನಾದ ಧನ್ವಂತರಿನಾಮಕ ಪರಮಾತ್ಮನಲ್ಲಿ ; ವಿಶ್ವಾನಿ=ವಿವಿಧವಾದ; ಭೇಷಜಾಃ=ಔಷಧಿಗಳು ಇದೆಯೆಂದು; ಮೇ=ನನ್ನ ಕುರಿತು; ಸೋಮಃ=ಸೋಮ್ಯತ್ವಾತ್ ಸೋಮಃ ಎಂಬುವ ಕ್ರಮದಿಂದ ಸೋಮಶಬ್ದವಾಚ್ಯನಾದ ಭಗವಂತನು; (ಅಥವಾ ಜ್ಞಾನಿ) ಅಬ್ರವೀತ್ = ನುಡಿದನು( ಆದಕಾರಣ ಯಾಚನೆ ಮಾಡುತ್ತೇನೆ ಎಂದರ್ಥ) ಮತ್ತು- ಅಗ್ನಿನಾಮಕ ಪರಮಾತ್ಮನನ್ನು ಕೂಡಾ ಯಾಚನೆ ಮಾಡುತ್ತೇನೆ. (ಅಗ್ನಿ ನಾಮಕ ಪರಮಾತ್ಮನು ಎಂಥಾವನೆಂದರೆ) ವಿಶ್ವ=ಪ್ರಪಂಚಕ್ಕೆ ; ಶಂ=ಸುಖವನ್ನು; ಭುವಂ= ಕೊಡತಕ್ಕವನು (ಸಮಸ್ತ ಜಗತ್ತಿಗೆ ಸುಖಪ್ರದನೆಂದು ಅಭಿಪ್ರಾಯ) 'ದಶವೈದ್ಯಸಮೋ ವಹ್ನಿಃ' ಎಂದು ಪ್ರಮಾಣವಿದೆ. 'ಅದನಾದಗ್ನಿಃ' 'ಅಗ್ರತ್ವಾದಗ್ನಿಃ' 'ಅಗಂ ನಯತೀತ್ಯಗ್ನಿಃ' ಎಂಬುವ ಋಗ್ಭಾಷ್ಯಪ್ರಮಾಣಗಳಿಂದ ಅಗ್ನಿನಾಮಕ ಭಗವಂತನು ಪ್ರಸಿದ್ಧಾಗ್ನಿ ಅಭಿಮನ್ಯದೇವತಾವನ್ನು ಕೂಡ ಯಾಚನೆ ಮಾಡುತ್ತೇನೆ.

**ಶ್ರೀತಿಮ್ಮಣ್ಣಾರ್ಯರು:-** ಅಪಾಭೇಷಜಸದ್ಭಾವೇಪ್ರಾರ್ಥನಾಽಯುಕ್ತಾ । ತದೇವ ಕುತ ಇತ್ಯತ ಆಹ । ಅಪ್ಸ್ವಿತಿ । ಉತ್ಕೃಷ್ಟಾ ಚ ಸಾಮಾ ಚ ಉಮಾ ಲಕ್ಷ್ಮೀಃ ತಯಾಸಹಿತಃ ಸೋಮಃ ಶ್ರೀಲಕ್ಷ್ಮೀನಾರಾಯಣಃ । ಉತ್ಕೃಷ್ಟಾಃ ಮಾಃ ಋಗಾದ್ಯಾಃ ಸಪ್ತಶಿವಾಃ ಮಾತರಃ ಸ್ವರಾ ತತ್ಪ್ರವರ್ತಕೇತಿ ಭಾವಃ। ಸೋಮಃ ಭಾರತೀಪತಿಃ। ದೇವಾವೈ ವಿಶ್ವ ಉ ಮಾ ಇತಿಶ್ರುತೇಃ॥ ಸರ್ವದೇವಸಹಿತ ಇಂದ್ರ ಇತಿ ವಾ ಸೋಮಃ। ಪಾರ್ವತೀರಮಣ ಶಿವ ಇತಿ ವಾ ಸೋಮಃ। ಚಂದ್ರಶ್ಚ। ಮೇ ಮಹ್ಯಂ ಅಪ್ಸು ಅಂತಃ ಜಲಾಂತಃ ವಿಶ್ವಾನಿ ಭೇಷಜಾ ಸಮಸ್ತಾನಿ ಭೇಷಜಾನಿ। ಸುಪಾಂ ಸುಲಿಗಿತಿ ದೀರ್ಘಃ । ಅಬ್ರವೀತ್ ಆಹ । ನ ಕೇವಲಂ ಭೇಷಜ ಮಾತ್ರಂ । ಭೇಷಜೋತ್ಥಮಗ್ನಿಂ ಚಾಹ । ಕೀದೃಶಮಗ್ನಿಂ । ವಿಶ್ವಶಂಭುವಂ ಸಮಸ್ತಸುಖಾಶ್ರಯಂ। ನಾರಾಯಣಾದ್ಯಾದೇವಾ ಜಲಾಂತಃ ಅಗ್ನ್ಯಾದಿ ಭೇಷಜಾನಿ ಸಂತೀತಿ ಬ್ರುವನ್। ಅತೋ ಭೇಷಜ ಪ್ರಾರ್ಥನಂ ಯುಕ್ತಮಿತಿ ಭಾವಃ॥

**ಆಪ ಪೃಣೀತ ಭೇಷಜಂ- ವರೂಥಂ ತನ್ವೇ(ಏ-ಏ-ಏ)ಮಮ। ಜ್ಯೋಕ್ಚ- ಸೂರ್ಯಂ ದೃಶೇ॥ 7 ॥**

***ಕನ್ನಡಾರ್ಥ:- ಉದಕಪರ:-*** ಆಪಃ= ಓ ಉದಕಾಭಿಮಾನಿ ದೇವತೆಗಳಿರಾ! ಮಮ= ನನ್ನ ಸಂಬಂಧಿಯಾದ,ತನ್ವೇ=ಶರೀರಕ್ಕೋಸ್ಕರ; ವರೂಥಂ=ರೋಗನಿವಾರಕವಾದ; ಭೇಷಜಂ=ಔಷಧವನ್ನು; ಪೃಣೀತ=(ದಾನಮಾಡಿ)ಪೂರ್ಣಮಾಡಿರಿ; ಜ್ಯೋಕ್= ಜ್ಞಾನವನ್ನು; ಸೂರ್ಯಂ= ಸೂರ್ಯನನ್ನು; ದೃಶೇ=ನೋಡುವುದಕ್ಕೋಸ್ಕರ (ನಾವು ಸಮರ್ಥರಾಗುತ್ತೇವೆ.)

***ಪರಮಾತ್ಮಪರ:-*** ಹೇ ಆಪಃ= ಎಲೋ ಅಪ್‌ಶಬ್ದವಾಚ್ಯನಾದ ಪರಮಾತ್ಮನೇ; ಮಮತನ್ವೇ=ನನ್ನದೇಹಸ್ಥವಾದ ಅರಿಷಡ್ವರ್ಗಾದಿ ಸಕಲದುರಿತಗಳನ್ನು ; ಜ್ಯೋಕ್ಚ= ಪರಿಹಾರಮಾಡಿ; ಭೇಷಜಂ=ಔಷಧರೂಪವಾದ ನಿನ್ನ(ಪರಮಾತ್ಮನ) ಜ್ಞಾನ; ಪೃಣೀತ =ದಾನಮಾಡಿ ತತ್ತ್ವಯುಕ್ತ ಅಪರೋಕ್ಷಜ್ಞಾನದ್ವಾರಾ; ಸೂರ್ಯಂ=ಜ್ಞಾನಿಗಳಿಂದ ಪ್ರಾಪ್ಯನಾದ ಸೂರ್ಯಾಂತರ್ಗತ ಶ್ರೀಲಕ್ಷ್ಮೀನಾರಾಯಣನಾಮಕ ಪರಮಾತ್ಮನು ; ದೃಶೇ=ನೋಡುತ್ತೇನೆ. (ಈ ಪ್ರಕಾರ)ವರೂಥಂ=ಸರ್ವರಿಂದ ಪ್ರಾರ್ಥನಮಾಡಲ್ಪಡುತ್ತದೆ. ಏನುಕಾರಣದಿಂದ ಆ ಪ್ರಕಾರ ಪ್ರಾರ್ಥನ ಮಾಡಲ್ಪಡುತ್ತದೆಯೆಂದರೆ; ಜ್ಯೋಕ್= ಚಿರಕಾಲ; ಸೂರ್ಯಂದೃಶೇ=ಉಪಾಸನಾರ್ಥವಾಗಿ ಅಥವಾ ಪರಮಾತ್ಮನ ಬಿಂಬ ಅಪರೋಕ್ಷಜ್ಞಾನಾರ್ಥವಾಗಿ.

**ಶ್ರೀತಿಮ್ಮಣ್ಣಾರ್ಯರು:-** ಹೇ ಆಪ ಭೇಷಜಂ ಪೃಣೀಥ ದತ್ತ। ಪೃಣದಾನ ಇತಿ ಧಾತೋಃ। ಮಮ ತನ್ವೇ ತನ್ವಾಃ। ಸುಪಾಂ ಸುಲಿಗಿತಿ ಆದೇಶಃ । ವರೂಥಂ ಗುಪ್ತಿಂ ಪೃಣೀತ। ಅತಿಶಯಃ ಕಂಪಾರ್ಥಃ। ಕಿಮರ್ಥಂ ಭೇಷಜಾದಿ ಪ್ರಾರ್ಥನಮಿತಿ ಚೇತ್। ಜ್ಯೋಕ್ ಅವ್ಯಯಂ। ಚಿರಕಾಲ ವಾಚಿ ಸಮ್ಯಗರ್ಥಕೋ ವಾ ಪ್ರಕಾಶಾರ್ಥಕೋ ವಾ । ತತ್ಪಕ್ಷೇ ಸೂರ್ಯವಿಶೇಷಣಂ। ಸೂರ್ಯಂ ದೃಶೇ ದ್ರಷ್ಟುಂ ಭಗವದಪರೋಕ್ಷ-ಜ್ಞಾನಾಯೇತಿ ಯಾವತ್ । ಭೇಷಜ ದಾನೇನ ಶರೀರ ಸಂರಕ್ಷಣೇ ಜಾತೇ ನೀರೋಗತಾಯಾ ಮನಃ ಸ್ವಾಸ್ಥ್ಯೇನ ಜಿಜ್ಞಾಸಾಯಾಂ ಪರೋಕ್ಷಜ್ಞಾನಂ ಭವತೀತಿ ಭಾವಃ॥

**ಇದಮಾಪ - ಪ್ರವಹತ-ಯತ್ಕಿಂಚ ದುರಿತಂ ಮಯಿ ।ಯದ್ವಾಹಮ್- ಅಭಿದುದ್ರೋಹ -ಯದ್ವಾಶ್ಕೇಪ-ಉತಾನೃತಮ್ ॥ 8 ॥**

**ಕನ್ನಡಾರ್ಥ:-** ***ಉಭಯಪರ:-*** ಆಪಃ= ಓ ಉದಕಾಭಿಮಾನಿದೇವತೆಗಳಿರಾ! (ಪರಮಾತ್ಮನೇ); ಈ ದೇಹವನ್ನು ಆಶ್ರಯಮಾಡಿಕೊಂಡು; ಯತ್ಕಿಂಚ=ಯಾವುದಾದರೂ; ಮಯಿ=ನನ್ನಲ್ಲಿ; ದುರಿತಂ=ಪಾಪವು(ಅಜ್ಞಾನರೂಪವಾದದ್ದು) ಯಾವುದಾದರೂ ಇದ್ದರೆ; ವಾ=ಅಥವಾ; ಅಹಂ= ನಾನು; ಯತ್=ಯಾವುದು; ಅಭಿದುದ್ರೋಹ=ದೇವತಾಗಳನ್ನು ಅಥವಾ ದೈವಭಕ್ತರುಗಳನ್ನು (ಬುದ್ಧಿಪೂರ್ವಕ) ದ್ರೋಹಮಾಡಿದ್ದು ಇದ್ದರೆ ಅದನ್ನು; ವಾ= ಅಥವಾ ; ಯತ್ ಶೇಪೇ= ಶಾಪವನ್ನು (ಬುದ್ಧಿಪೂರ್ವಕ) ಹರಿಭಕ್ತರಿಗೆ ಕೊಟ್ಟಿದ್ದು ಯಾವುದಾದರೂ ಇದ್ದರೆ ಅದನ್ನು; ಉತ= ಮತ್ತು; ಅನೃತಂ=ಹರಿಭಕ್ತರವಿಷಯದಲ್ಲಿ ಅಪದ್ಧವನ್ನು (ಬುದ್ಧಿಪೂರ್ವಕ) ಹೇಳಿದ್ದು ಇದ್ದರೆ; ಇದಂ=ಅದನ್ನು (ಆ ಸಮಸ್ತ ಅಪರಾಧಜಾತವಾದ ಪಾಪಗಳನ್ನು) ನನ್ನಲ್ಲಿ ದಯಮಾಡಿ; ಪ್ರವಹತ = ನಿಮ್ಮ ಪ್ರವಾಹದಲ್ಲಿ ತೆಗೆದುಕೊಂಡು ಹೋಗಿರಿ ಎನ್ನಲಾಗಿ; ಸಂಪೂರ್ಣವಾಗಿ ಪರಿಹಾರ ಮಾಡಿರಿ ಎಂದರ್ಥ.

**ಶ್ರೀತಿಮ್ಮಣ್ಣಾರ್ಯರು:-** ಹೇ ಆಪಃ ಯೂಯಂ ಮಯಿ ಯತ್ಕಿಂಚದ್ದುರಿತಂ ಪಾಪಂ ಅಹಂ ವೈ ॥ ಅಭಿ ಅಭಿತಃ ದುದ್ರೋಹ ದ್ರೋಹಮಕಾರಿಷಂ। ತೇನ ಯದ್ದುರಿತಂ ಶೇಫೇ ನಿಮಿತ್ತ ಸಪ್ತಮೀ। ಶೇಫಃ ಪಕಾರಸ್ಯ ಫಕಾರಃ। ಛಾಂದಸತ್ವಾ ದಕಾರಾತತ್ವಂ ಚ॥ ಶಿಶ್ನಾ ಶಿಶ್ನನಿಮಿತ್ತಂ ಯದ್ದುರಿತಂ ಉತಾನೃತಂ ಅಸತ್ಯಪ್ರಯುಕ್ತ ಯದ್ದುರಿತಂ ತದಿದಂ ದುರಿತಂ ಪ್ರವಹತ ಭವದೀಯ ಪ್ರವಾಹೇಣ ನಯತ। ಪ್ರವಾಹರೂಪೇಣ ಗಮಯತೇತಿ ಭಾವಃ॥

**ಆಪೋ ಅದ್ಯಾನ್ವ ಚಾರಿಷಂ - ರಸೇನ ಸಮಗಸ್ಮಹಿ । ಪಯಸ್ವಾನಗ್ನ ಆಗಹಿ- ತಂ ಮಾಂ ಸಂಸೃಜ -ವರ್ಚಸಾ॥ 9 ॥**

**ಉಭಯಪರವಾದ ಅರ್ಥ:-** ಆಪಃ=ಓ ಉದಕಾಭಿಮಾನಿದೇವತೆಗಳಿರಾ!(ಓ ಪರಮಾತ್ಮನೇ); (ನಾನು) ಅದ್ಯ=ಈ ಮಾರ್ಜನಕಾಲದಲ್ಲಿ ; ಅನ್ವಚಾರಿಷಂ=(ನಿಮ್ಮನ್ನೇ) ಪ್ರವೇಶ ಮಾಡುತ್ತಿದ್ದೇನೆ (ಪೂಜ್ಯತ್ವೇನ ಅನುಸರಣೆ ಮಾಡುತ್ತೇನೆ); ರಸೇನ=ಉದಕಸಾರದಿಂದ (ಭಗವದ್ದತ್ತ ಅನುಗ್ರಹ ದಿಂದ); ಸಮಗಸ್ಮಹಿ=ಮಿಳಿತನಾಗಿದ್ದೇನೆ; ಪಯಸ್ವಾನ್=ಉದಕಾಭಿಮಾನಿ ದೇವತೆಯ ಸಹ ವಾಸದಿಂದ ಇರುವ(ಉದಕದಲ್ಲಿರುವ); ಅಗ್ನೇ=ಓ ಅಗ್ನಿ ಅಗ್ನಿಶಬ್ದವಾಚ್ಯನಾದ ಪರಮಾತ್ಮನೇ; (ನೀನು) ಆಗಹಿ=ಬಾ(ನನ್ನ ಹೃದಯದಲ್ಲಿ ಸನ್ನಿಧಾನವನ್ನು ಮಾಡು); ತಂ= ಅಂಥಾ; ಮಾಂ= ನನ್ನನ್ನು ; ವರ್ಚಸಾ=ಕಾಂತಿಯಿಂದ ಅಥವಾ ಜ್ಞಾನದಿಂದ; ಸಂಸೃಜ=ಕಲೆಸು ಅಥವಾ ಸೇರಿಸು; ಅಂದರೆ ನಾನು ಜ್ಞಾನದಿಂದಲೂ , ಅಜ್ಞಾನದಿಂದಲೂ ಮಾಡಿದ ಸಮಸ್ತ ಪಾಪಗಳನ್ನು ಪರಿಹಾರ ಮಾಡು ಎಂದರ್ಥ.

**ಶ್ರೀತಿಮ್ಮಣ್ಣಾರ್ಯರು:-** ಹೇ ಆಪಃ ಅದ್ಯ ಇದಾನೀಂ ಮಹಂ ಭವತೀತಿ ಅನ್ವಚಾರಿಷಂ ಅನುಸ್ಮರಣಂ ಕೃತವಾನಸ್ಮಿ। ವಯಂ ರಸೇನ ದಯಾರಸೇನ ಅಸ್ಮಾನ್ ಸಮಗಸ್ಮಹಿ ಸಮಾಗಚ್ಛಹಿ॥ ಛಾಂದಸೋ ವ್ಯತ್ಯಯಃ। ಹೇ ಆಪಃ ಯೂಯಂ ರಸೇನ ಭಗವದ್ದತ್ತಜ್ಞಾನಭಕ್ತ್ಯಾದಿ ರಸೇನ ಸಮಗಸ್ಮಹಿ ಸಂಗತಾ ಇತಿ ವಾ। ಹೇ ಅಗ್ನೇ ಅಂಗನೇತೃತ್ವಾದಿ ಗುಣಶಾಲಿನ್ ಶ್ರೀಹರೇಃ ಪಯಸ್ವಾನ್ ಪಯಸ್ಸು ವಿದ್ಯಮಾನ ಆಗಹಿ

**ಆಗಚ್ಛ। ಹೇ ಅಗ್ನೇ ಭಗವತ್ಸೇವಾಕಾರಿಣಂ ಮಾಂ ಬ್ರಹ್ಮವರ್ಚಸ್ಕಾಮಂ ತದ್ಯುಕ್ತಂ ಕುರುತೇತಿ ಭಾವಃ।**

**ಸಸ್ರುಷೀಃ ತದಪಸೋ ದಿವಾನಕ್ತಂ ಚ ಸಸ್ರುಷೀಃ॥ ವರೇಣ್ಯ ಕ್ರತೂ-ರಹಮಾದೇವೀ-ರವಸೇ ಹುವೇ ॥** (ಖಿಲ ಮಂತ್ರವು)

**ಕನ್ನಡಾರ್ಥ:-** ಇದಕ್ಕೆ ಖಿಲಮಂತ್ರವೆಂದು ಹೆಸರು. ಮೇಲೆಕಂಡಪ್ರಕಾರ ಋಕ್ ಶಾಖಾ ಸಂಹಿತಾದಲ್ಲಿರುವ 'ಆಪೋಹಿಷ್ಠೇ'ತ್ಯಾದಿ ಮಾರ್ಜನ ಮಂತ್ರವನ್ನು ಪಠನಮಾಡಿ, ಈಗ 'ಸಸ್ರುಷೀಸ್ತದಪಸ' ಎಂಬ ಖಿಲಮಂತ್ರವನ್ನು ಮೇಲ್ಕಾಣಿಸಿದ ಮಾರ್ಜನಮಂತ್ರದಲ್ಲಿ ಅಂತರ್ಭಾವವನ್ನು ಮಾಡಿ ತತ್ ಶಬ್ದವಾಚ್ಯನಾದ ಗಾಯತ್ರೀಪ್ರತಿಪಾದ್ಯನಾದ ಗುಣಪೂರ್ಣ ಬ್ರಹ್ಮನ ಉಪಾಸನೆ ಮಾಡತಕದ್ದ ಪ್ರಾಣಿ ಪ್ರಾರ್ಥನೆ ಮಾಡುತ್ತಾನೆ. ಏನೆಂದರೆ,

***ಉದಕಪರ:-*** ಅಹಂ=ನಾನು (ಉದಕಾಭಿಮಾನಿ ದೇವತೆಗಳನ್ನು) ಆಹುವೇ=ಆಹ್ವಾನ ಮಾಡುತ್ತೇನೆ; (ಯಾಕೆಂದರೆ) ಅವಶೇ='ಅವ'ರಕ್ಷಣೆ ಯೆಂಬುವ ಧಾತ್ವರ್ಥದ್ವಾರಾ ಮಾರ್ಜನಕರ್ತನಾದ ನನ್ನ ರಕ್ಷಣಮಾಡೋದಕ್ಕೋಸ್ಕರ; ಆ ದೇವತಾಗಳು ಎಂತಹವರೆಂದರೆ; ದೇವೀಃ= ಪ್ರಕಾಶಿಸುವವರು; ವರೇಣ್ಯಂ=ಶ್ರೇಷ್ಠವಾದ; ಕ್ರತೂ=ಯಜ್ಞಾದಿ ಕ್ರತುಗಳುಳ್ಳವರು; ದಿವಾನಕ್ತಂ ಚ= ಹಗಲು ರಾತ್ರಿಕಾಲಗಳಲ್ಲಿ(ಭಾಗೀರಥ್ಯಾದಿ ರೂಪಗಳಿಂದ) ಸಸ್ರುಷೀಃ=ಪ್ರವಹಿಸತಕ್ಕವರು; ತದಪಸಃ= ಸೋಮಾದಿ ರೂಪದಿಂದ ಸ್ವರ್ಗಾದಿಗಳನ್ನು ಸಂಪಾದನೆ ಮಾಡತಕ್ಕವರು.

***ಪರಮಾತ್ಮನ ಪರ:-*** ಹೇ ಆಪಃ=ಓ ಪರಮಾತ್ಮನೇ; ನನ್ನಿಂದ ಜ್ಞಾನಾಜ್ಞಾನದಿಂದ ಮಾಡಲ್ಪಟ್ಟ ಪಾಪವು;(ಆ ಪಾಪಗಳು ಯಾವುವು ಎಂದರೆ) ದಿವಾ=ಈಶ್ವರಾರಾಧನ ಅನುಪಯುಕ್ತ ದ್ರವ್ಯ ಸಂಪಾದನೆ, ತದ್ವಾರಾ ಪ್ರಾಪ್ತವಾದ ಪದಾರ್ಥ ಭೋಜನಮಾಡೋಣ, ದುರನ್ನ ಭೋಜನ, ದುರಾಲಾಪ, ಮಾತೃಪಿತೃ ಭ್ರಾತೃದ್ವೇಷ ಅಥವಾ ದ್ರೋಹ, ಅತಿಥಿ ಅಭ್ಯಾಗತರಹಿತ ಭೋಜನದಿಂದ ಪ್ರಾಪ್ತವಾದ ಪಾಪವು; ನಕ್ತಂ ಚ= ರಾತ್ರಿಕಾಲದಲ್ಲಿ ಭ್ರೂಣಹತ್ಯ, ನಿಷಿದ್ಧ ಮೈಥುನ, ಹರಿಸ್ಮರಣಾದ್ಯಕೃತ ದೋಷಗಳಿಂದ ಪ್ರಾಪ್ತವಾದ ಪಾಪವು; ಸಸ್ರುಷೀಃ=ಪರಿಹಾರ ಮಾಡು; ಹೇ ದೇವೀ= ಓ ಪ್ರಕಾಶರೂಪನಾದ ಪರಮಾತ್ಮನೇ; ನಿನ್ನ ಪ್ರಸಾದದಿಂದ ಸಕಲಪಾಪದಿಂದ ನಿವೃತ್ತನಾದ ನನ್ನಿಂದ ಮಾಡಲ್ಪಟ್ಟ ಸತ್ಕರ್ಮಪ್ರತಿಬಂಧಕ ಪಾಪಪುರುಷನ ವಿಸರ್ಜನೆ ಮಾಡುತ್ತೇನೆ. ವರಣೀಯೇ=ಪರಮತೇಜೋರೂಪವಾದ; ಕ್ರತೌ=ಈ ಸಂಧ್ಯಾಕಾರ್ಯದಲ್ಲಿ; ಅವಶೇ= ನನ್ನ ರಕ್ಷಣಾರ್ಥವಾಗಿ; ದೇವೀಃ=ಕ್ರೀಡಾದಿ ರೂಪನಾದ; ಆಪಃ= ಅಪ್ ಶಬ್ದವಾಚ್ಯನಾದ ನಿನ್ನಲ್ಲಿ; ಹುವೇ =ಸಮರ್ಪಣೆ ಮಾಡುತ್ತೇನೆ.

**ಶ್ರೀತಿಮ್ಮಣ್ಣಾರ್ಯರು:-ಹೇ ಆಪ ಇತ್ಯನುವರ್ತತೇ । ಸಸ್ರುಷೀಃ ಭಕ್ತಾಭೀಷ್ಟಸ್ರಾವಕಾಃ । ತತ್ ತಸ್ಮಾತ್ । ಆಪ ಸಃ ಜ್ಞಾನಸ್ಯ । ಅರಜವ್ಯಾಕ್ರಾಗತ್ಯರ್ಥಸ್ಯ ಜ್ಞಾನಾರ್ಥತ್ವಾತ್ । ಆಪೇರಸೂನ್ । ಆಪಾಸಃ ಸಸ್ರುಷೀಃ ಸ್ರಾವಕಾಃ ಜ್ಞಾನಧಾತ್ರೀರಿತಿ ಯಾವತ್ । ದಿವಾನಕ್ತಂ ಅಹೋರಾತ್ರಂ ಸಸ್ರುಷೀಃ ಸ್ರವಣಶೀಲಾಃ ವರೇಣ್ಯಕೃತಃ ವರೇಣೀಯಯಜ್ಞಕತ್ರ್ಯಃ ದೇವೀಃ ದೇದೀಪ್ಯಮಾನಾಃ ಭವತೀಃ। ಅಹಂ ಅವಸೇ ಸಂರಕ್ಷಣಾಯ ಹುವೇ ಆಹ್ವಯಾಮಿ॥ ಸರ್ವದಾ ಸರ್ವಾಭೀಷ್ಟಸ್ರವಣಶೀಲಾಭವತ್ಯಃ ತದರ್ಥಂ ಸ್ನಾನಪಾನಾದೌ ತತ್ಸನ್ನಿಧಿಂ ಆಹ್ವಯಾಮೀತಿ ಭಾವಃ॥**

ಆಪೋಹಿಷ್ಠಾಮಯೋಭುವಃ ಎಂಬುವುದನ್ನು ಮೊದಲು ಮಾಡಿಕೊಂಡು ಇರುವ ನವಸಂಖ್ಯಾವುಳ್ಳ ಋಕ್ ಸೂಕ್ತಗಳಿಗೆ ಸಿಂಧು-ದ್ವೀಪ,ಅಂಬರೀಷರೆಂಬುವರು ಋಷಿಗಳು । ಅಪ್ಪಭಿಮಾನಿ ದೇವತಾಕವಾದ ಈ ಸೂಕ್ತಗಳಿಗೆ ಗಾಯತ್ರೀ ಛಂದಸ್ಸು, ಅಂತ್ಯದಲ್ಲಿ ಅನುಷ್ಟುಪ್ ಛಂದಸ್ಸು; ಕಡೆಯ ಎರಡು ಋಕ್ಕುಗಳಿಗೆ ಅನುಷ್ಟುಪ್ ಛಂದಸ್ಸು; ಐದನೇ ಋಕ್ಕಿಗೆ ವರ್ಧಮಾನ ಛಂದಸ್ಸು; ಏಳನೇ ಋಕ್ಕಿಗೆ ಪ್ರತಿಷ್ಠಾಛಂದಸ್ಸು ಉಳ್ಳದ್ದು ಎಂದು ಅರ್ಥ.

ಅಷ್ಟಾಕ್ಷರಪಾದಕ್ಕೆ ಅನುಷ್ಟುಪ್ ಛಂದಸ್ಸು ಎಂದು ಛಂದೋಶಾಸ್ತ್ರ ಸಂಜ್ಞಾ. ಐದನೇ ಋಕ್ಕಿಗೆ ವರ್ಧಮಾನ ಗಾಯತ್ರೀ ಛಂದಸ್ಸು ಉಳ್ಳದ್ದು ಎಂಧು ಹೆಸರು. ಐದನೇ ಋಕ್ಕಿಗೆ ಪ್ರಥಮ ಪಾದ ''ಈಶಾನಾವಾರ್ಯಾಣಾಂ'' ಎಂಬುವುದು ಆರು ಅಕ್ಷರವುಳ್ಳದ್ದು. 'ಕ್ಷಯಂತೀಶ್ಚರ್ಷಣೀನಾಂ' ಎಂಬುವ ದ್ವಿತೀಯಪಾದ ಏಳು ಅಕ್ಷರವುಳ್ಳದ್ದು. 'ಆಪೋಯಾಚಾಮಿ ಭೇಷಜಂ' ಎಂಬುವ ತೃತೀಯಪಾದವು ಎಂಟುಅಕ್ಷರವುಳ್ಳದ್ದು. ಇದಕ್ಕೆ ವರ್ಧಮಾನ ಗಾಯತ್ರೀ ಛಂದಸ್ಸು ಎಂದು ಹೆಸರು.

ಏಳನೇ ಋಕ್ಕಿಗೆ ಪ್ರತಿಷ್ಠಾ ಗಾಯತ್ರೀ ಛಂದಸ್ಸು ಎಂದು ಹೆಸರು. 'ಆಪಃಪೃಣೀತಭೇಷಜಂ' ಎಂಬುವ ಪ್ರಥಮಪಾದ ಎಂಟು ಅಕ್ಷರವುಳ್ಳದ್ದು. ''ವರೂಥಂ ತನ್ವೇಮಮ'' ಎಂಬುವ ದ್ವಿತೀಯ ಪಾದ ಏಳು ಅಕ್ಷರವುಳ್ಳದ್ದು. 'ಜೋಕ್ಚ ಸೂರ್ಯಂದೃಶೇ' ಎಂಬುವ ತೃತೀಯಪಾದ ಆರು ಅಕ್ಷರವುಳ್ಳದ್ದು. ಇದಕ್ಕೆ ಪ್ರತಿಷ್ಠಾಗಾಯತ್ರೀ ಎಂದು ಹೆಸರು.

ಪ್ರತಿಷ್ಠಾಗಾಯತ್ರೀಛಂದಸ್ಸು ಉಳ್ಳ ಏಳನೇ ಋಕ್ ಬಿಟ್ಟು ಮಿಕ್ಕ ಪ್ರತಿಋಕ್ಕುಗಳೂ ಅಂತ್ಯದಲ್ಲಿ ಅನುಷ್ಟುಪ್ ಛಂದಸ್ಸು ಉಳ್ಳದ್ದು.

ಇಷ್ಟು ಹೇಳಿದ್ದರಿಂದ, 1ನೇ ಮೊದಲು ಮಾಡಿಕೊಂಡು 6ನೇ ಋಕ್ಕಿನವರೆಗೆ ಪ್ರತಿಋಕ್ ಸ್ವರೂಪವನ್ನು ಹೇಳಿದಂತೆ ಆಯಿತು. ಇಂಥಾ ಋಕ್‌ಗಳನ್ನು ಪಠನ ಮಾಡುತ್ತಾ ಉದಕವನ್ನು ಶುದ್ಧ್ಯರ್ಥವಾಗಿ ಮಾರ್ಜನ ಮಾಡಬೇಕೆಂದು ಅಭಿಪ್ರಾಯ.

ಈ ಋಕ್ಕುಗಳಿಗೆ ಎರಡು ಅರ್ಥಗಳುಂಟು. ಒಂದು ಆಪಾತತಃ ಮೇಲೆ ಕಾಣಬರತಕ್ಕ ಅಪ್ಶಬ್ದವಾಚ್ಯವಾದ ಉದಕ, ಸೂರ್ಯ, ಅಗ್ನಿ

ಮೊದಲಾದ ಪದಾರ್ಥಗಳಿಗೂ, ದೇವತಾಗಳಿಗೂ ಅನ್ವಯವಾಗುವುದು. ದ್ವಿತೀಯಾರ್ಥ ಅಪ್‌ಶಬ್ದವಾಚ್ಯನಾದ ಪರಮಾತ್ಮನಿಗೆ ಸೂರ್ಯ, ಅಗ್ನಿ ಮೊದಲಾದ ಸರ್ವಶಬ್ದವಾಚ್ಯನಾದ ಪರಮಾತ್ಮನಿಗೆ ಅನ್ವಯವಾಗುವುದು. ಆಪಾತತಃ ಕಾಣಬರತಕ್ಕ ಅರ್ಥವನ್ನೇ ಪ್ರಥಮದಲ್ಲಿ ಹೇಳೋಣ-ವಾಗಿದೆ. ಆದರೆ ಅದು ನಮಗೆ ಮುಖ್ಯಾಭೀಷ್ಟ ಅಲ್ಲದ ಕಡೆಯಿಂದ ಪ್ರತಿಶಬ್ದವನ್ನು ಸಪ್ರಮಾಣಗಳಿಂದ ಪರಮಾತ್ಮನಲ್ಲಿ ಸಮನ್ವಯಮಾಡಿ ತತ್ವ್ರಯುಕ್ತ ಅರ್ಥವನ್ನು ದ್ವಿತೀಯದಲ್ಲಿ ಹೇಳೋಣವಾಗಿದೆ. ಆ ಪ್ರಕಾರ ಯತ್ನಮಾಡಿರುವುದು ಯಾಕೆಂದರೆ ಈ ಋಕ್ಕುಗಳು ವೇದಗರ್ಭಿತ-ವಾದವು. ''ನಾರಾಯಣ ಪರೋ ವೇದಾಃ' ಎಂಬ ಪ್ರಮಾಣವಿರುವುದರಿಂದ ಆಪಾತತಃ ಏನು ಅರ್ಥವಾದರೂ ವೈದಿಕವಾದ ಅರ್ಥ ಒಂದೇ. ಅದು ಯಾವುದೆಂದರೆ ಶ್ರೀಪರಮಾತ್ಮನಿಗೆ ಅನ್ವಯವಾಗಿರುವುದು.

**ಶ್ರೀತಿಮ್ಮಣ್ಣಾರ್ಯರು:-** ತತಃ ಆಪೋಹಿಷ್ಠೇತಿ ತಿಸೃಭಿಃ ಶನ್ನೋದೇವೀರಿತಿ ಷಡ್ಭಿರ್ಮಿಲಿತ್ವಾ ನವಭಿಃ ಋಗ್ಭಿಃ ನವಮಾರ್ಜನಾನಿ ಕುರ್ಯಾತ್ । ಆಪೋಹಿಷ್ಠೇತಿ ಸೂಕ್ತೇನ ಮಾರ್ಜನಂ ಹಿ ದ್ವಿತೀಯಕಂ । ಸೂಕ್ತಾದೌ ಪ್ರಣವಂ ಚೋಕ್ತ್ವಾ ಋಗಂತೇ ಮಾರ್ಜನಂ ಚರೇದಿತಿ । ಯಜುರ್ವೇದಿನಾಂ ತು ದಧಿಕ್ರಾವ್ಣೇತಿ ದ್ವಿಮಾರ್ಜನಂ । ಹಿರಣ್ಯವರ್ಣೇತಿ ಚತ್ವಾರಿ ಮಾರ್ಜನಾನಿ । ತದುಕ್ತಂ ॥ ಹಿರಣ್ಯವರ್ಣಚತ್ವಾರಿ ದಧಿ ಮಂತ್ರಂ ದ್ವಿಮಾರ್ಜನಂ । ಅಂಗುಷ್ಠೇನೋದಕಂ ಸ್ಪೃಷ್ಟ್ವಾ ದಧಿಮಂತ್ರೇಣ ಮಾರ್ಜಯೇದಿತಿ । ಅರ್ಧಮಂತ್ರಂ ಪೂರ್ಣಮಂತ್ರಂ ಪಾದಮಂತ್ರಂ ಚ ಮಾರ್ಜನಂ । ಅರ್ಧಮಂತ್ರಂ ದಧಿಕ್ರಾವ್ಣೇತಿ ಪೂರ್ಣಮಂತ್ರಂ ಹಿರಣ್ಯಗರ್ಭ ಇತಿ । ಪಾದಮಂತ್ರಂ ಆಪೋಹಿಷ್ಠೇತಿ । ಹಿರಣ್ಯೇತಿ ಚತುಷ್ಟಯಂ । ಕಾಮಕ್ರೋಧಾದಿಷಡ್ವರ್ಗಂ ಏತತ್ಸರ್ವಂ ವಿನಾಶಯೇತ್ । ಪಾದಮಂತ್ರಂ ಚಾರ್ಧಮಂತ್ರಂ ಪೂರ್ಣಮಂತ್ರಂ ವಿಶೇಷತಃ । ಸರ್ವಸಾಮೇಕಶಾಖಾನಾಂ ಮಾರ್ಜನಂ ತ್ರಿವಿಧಂ ಸ್ಮೃತಂ ಇತ್ಯುಕ್ತೇಃ । ಋಗ್ವೇದಿನಾಮಪಿ ದ್ವಿತೀಯಮಾರ್ಜನೇ ಆಪೋಹಿಷ್ಠೇತಿ ಷಡ್ಭಿರರ್ಧರ್ಚೈಃ ಷಣ್ಮಾರ್ಜನಮಿತ್ಯಾಹುಃ । ಆಪೋಹಿಷ್ಠೇತ್ಯುಕ್ತಾರ್ಥಃ । ಆಪೋಹಿಷ್ಠೇತಿ ನವರ್ಚಸ್ಯ ಸೂಕ್ತಸ್ಯ ನವಋಗಾತ್ಮಕಸೂಕ್ತಸ್ಯ । ಸಿಂಧುದ್ವೀಪೋ ಅಂಬರೀಷೋ ವಾ ಋಷಿಃ । ಆಪ ಗಾಯತ್ರೀ । ಆಪ ಅಬ್ದೇವತಾಕ ಗಾಯತ್ರಂ ಗಾಯತ್ರೀಛಂದೋಬದ್ಧಂ । ಅನುಷ್ಟುಪಂತಂ । ಅನುಷ್ಟುಪ್ ಛಂದೋಬದ್ಧಂ ಋಗತಂ । ಅಂತ್ಯೇದ್ವೇ ಅನುಷ್ಟುಭಾವಿತ್ಯರ್ಥಃ । ಆಪಮಿತ್ಯಾದೀನಿ ಸೂಕ್ತವಿಶೇಷಾನಿ । ಗಾಯತ್ರೀ ಛಂದೋಬದ್ಧನೃಚಾಂ ವಿಶೇಷಮಾಹ ।ಪಂಚಮೀ ವರ್ಧಮಾನಾ ವರ್ಧಮಾನಾಖ್ಯ ಗಾಯತ್ರೀ । ಸಪ್ತಮೀಪ್ರತಿಷ್ಠಾ । ಪ್ರತಿಷ್ಠಾಖ್ಯಾ । ಷಡಕ್ಷರಸಪ್ತಾಕ್ಷರಾಷ್ಟಾಕ್ಷರ ಪಾದಕ್ರಮವತೀ ವರ್ಧಮಾನಾ । ಅಷ್ಟಸಪ್ತಷಡಕ್ಷರ ಪಾದಕ್ರಮವತೀ ಪ್ರತಿಷ್ಠಾ । ತದುಕ್ತಮನುಕ್ರಮಣಿಕಾಯಾಂ । ಯಸ್ಯಾಶ್ಚಷಡ್ಸಪ್ತಮಾಷ್ಟಮಾ ಸಾ ವರ್ಧಮಾನಾ ವಿಪರೀತಾ ಪ್ರತಿಷ್ಠೇತಿ ।

**ಪಾಪಪುರುಷ ವಿಸರ್ಜನ ॥**

**ಕನ್ನಡಾರ್ಥ: ಋತಂಚ ಸತ್ಯಂಚೇತ್ಯಸ್ಯ ಮಂತ್ರಸ್ಯ ಅಘಮರ್ಷಣ ಋಷಿಃ । ಭಾವವೃತ್ತೋ ದೇವತಾ । ಅನುಷ್ಟುಪ್ ಛಂದಃ । ಪಾಪಪುರುಷ ಜಲವಿಸರ್ಜನೇ ವಿನಿಯೋಗಃ ।**

ಶ್ರೀಮದ್ಧ್ವಾಂತರ್ಯಾಮಿನ್ **ಶ್ರೀ ಹರಿಃ॥ ಓಂ ॥ ಋತಂ ಚ ಸತ್ಯಂಚಾಭೀದ್ಧಾತ್ ತಪಸೋಽಧ್ಯಜಾಯತ । ತತೋರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ ॥ ಸಮುದ್ರಾದರ್ಣವಾದಧಿಸಂವತ್ಸರೋ ಅಜಾಯತ । ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ ॥ ಸೂರ್ಯಾಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂಚಾಂತರಿಕ್ಷಮಥೋಸ್ವಃ ॥**

(ಋ.ಮಂ.10-190-1-3)

ಅನಂತರ ''ಋತಂ ಚ'' ಮೊದಲಾದ ಮಂತ್ರಗಳಿಂದ ದೇವತೋತ್ಪತ್ತಿ ಪ್ರತಿಪಾದಕ ಅಘಮರ್ಷಣ ಋಕ್ ಮಂತ್ರವನ್ನು ಪಠನಮಾಡಿ ಆ ಮಂತ್ರದಿಂದ ಉದಕವನ್ನು ನಾಸಿಕಾಗ್ರದಲ್ಲಿ ಸಮರ್ಪಣೆ ಮಾಡಿ ತನ್ನ ಎಡಭಾಗಕ್ಕೆ ಭೂಮಿಯಲ್ಲಿ ಹಾಕಬೇಕು. ಆ ಅಘಮರ್ಷಣ ಮಂತ್ರಕ್ಕೆ ದೇವತಾ ಋಷಿಛಂದಸ್ಸುಗಳನ್ನು ವಿವರಣೆ ಮಾಡುತ್ತೇವೆ. ಅಘಮರ್ಷಣ ಋಷಿಃ= ಪಾಪಪರಿ- ಹಾರಕನೆಂದರ್ಥವುಳ್ಳ ಹೆಸರುಳ್ಳವನಾದ ಋಷಿಯು; ಭಾವವೃತ್ತೋ ದೇವತಾ=( ಭಾವ ಎಂದರೆ ಭಕ್ತಿ, ವೃತ ಎಂದರೆ ಸತ್ಯ) ಸತ್ಯಭಕ್ತಿಪ್ರದನಾದ ಪರಮಾತ್ಮನು ದೇವತಾ। ಅನುಷ್ಟುಪ್ ಛಂದಃ। ಮಂತ್ರದ ಛಂದಸ್ಸು ಅನುಷ್ಟುಪ್. ಪಾಪಪುರುಷ ವಿಸರ್ಜನಾರ್ಥಂ=ಪಾಪಪುರುಷನನ್ನು ಈ ದೇಹದಿಂದ ಹೊರಗೆಹಾಕುವುದಕ್ಕೋಸ್ಕರ ; ಜಲ= ಉದಕವು; ವಿನಿಯೋಗಃ= ಉಪಯೋಗ ಮಾಡುತ್ತೇನೆ.

''ಅಘಮರ್ಷಣಸೂಕ್ತಸ್ಯ ಋಷಿರೇವಾಘಮರ್ಷಣಂ। ಅನುಷ್ಟುಪ್ಚಭವೇಚ್ಛಂದೋ ಭಾವವೃತ್ತಸ್ತು ದೈವತಂ।' ಎಂದು ಅಗ್ನಿಪುರಾಣದಲ್ಲಿ ಪ್ರಮಾಣವುಂಟು.

**ಮಂತ್ರಾರ್ಥ:- (1) ಋತಂ ಚ ಸತ್ಯಂಚಾಭೀದ್ಧಾತ್ ತಪಸೋಽಧ್ಯಜಾಯತ । ತತೋರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ**

ಅಭೀದ್ಧಾತ್= ಸರ್ವರಲ್ಲಿಯೂ ಪ್ರಕಾಶಮಾನನಾಗಿರುವ ಬ್ರಹ್ಮನಿಂದ; ತಪಸಃ=ತಪಸ್ಸಕ್ಕಿಂತಲೂ ( ಆಲೋಚನೆಗಿಂತಲೂ); ಅಧಿ=ತರುವಾಯದಲ್ಲಿ; ಋತಂ ಚ=( ಯಥಾವಸ್ಥಿತ) ಸತ್ಯಸಂಕಲ್ಪವು (ಕಾರಣವೂ)( ಅಥವಾ ವಿಕಾರರಹಿತವಾದ ಈಶ್ವರವತಾರಾದಿಗಳು) ಸತ್ಯಂ ಚ= ಸತ್ಯವಾದ (ಕಾರ್ಯವು)(ವಾಕ್ಯವು)(ಬಾಧಕರಹಿತವಾದಂಥಾ ಸಮಸ್ತ ಜಗತ್ತೂ) ; ಅಜಾಯತ= ಉತ್ಪನ್ನವಾಯಿತು; ತತಃ=ತತ್ ಶಬ್ದವಾಚ್ಯನಾದ ಆ ಪರಬ್ರಹ್ಮನಿಂದ; ರಾತ್ರಿ= ರಾತ್ರಿಕಾಲವೂ ( ರಾತ್ರಿ ಅಭಿಮಾನಿ ದೇವತೆಯೂ)( ರಾತ್ರಿಶಬ್ದವಾಚ್ಯವಾದ ಗಾಯತ್ರೀ,ಸಾವಿತ್ರೀ,ಸರಸ್ವತಿಯೂ) ಅಜಾಯತ= ಇವರುಗಳು ಉತ್ಪನ್ನರಾದರು; ತತಃ=ಅನಂತರ ಆ ಪರಬ್ರಹ್ಮನಿಂದ; ಅರ್ಣವಃ=ಉದಕ ಸಹಿತವಾದ; ಸಮುದ್ರಃ=ಸಮುದ್ರವೂ( ತದಭಿಮಾನಿ ದೇವತೆಯೂ)(ಮಹತ್ತತ್ತ್ವಾಭಿಮಾನಿ ಆದ ಅತಿಶಯಿತಜ್ಞಾನಸುಖಬಲರೂಪನಾದ ಚತುರ್ಮುಖಬ್ರಹ್ಮನು) ಅಜಾಯತ= ಉತ್ಪನ್ನರಾದರು.

**( 2)ಸಮುದ್ರಾದರ್ಣವಾದಧಿಸಂವತ್ಸರೋ ಅಜಾಯತ । ಅಹೋರಾತ್ರಾಣಿ ವಿದಧದ್ವಿಶ್ವಸ್ಯ ಮಿಷತೋ ವಶೀ ॥**

**ಅರ್ಣವಾತ್=**(ಮೇಲೆಕಂಡ ಪರಮಾತ್ಮನಿಂದ) ಉದಕಪೂರವಾದ; ಸಮುದ್ರಾತ್ ಅಧಿ= ಸಮುದ್ರದಕ್ಕಿಂತಲೂ(ಸಮುದ್ರಅಭಿಮಾನಿ ದೇವತೆಗಿಂತಲೂ)ಅನಂತರ; ಸಂವತ್ಸರಃ= ಸಂವತ್ಸರವು, ತದಭಿಮಾನಿಯಾದ ಬ್ರಹ್ಮಾಂಡಾಭಿಮಾನಿ ಚತುರ್ಮುಖಬ್ರಹ್ಮನು; ಅಜಾಯತ= ಉತ್ಪನ್ನನಾದನು; ಸಃ=ಆ ಬ್ರಹ್ಮನು; ಅಹೋರಾತ್ರಾಣಿ=ಹಗಲು ರಾತ್ರಿಗಳನ್ನು; ವಿದಧತ್= ಉತ್ಪತ್ತಿ( ಬ್ರಹ್ಮಾಂಡಾಂತಃ ಸೃಷ್ಟಿ) ಮಾಡಿದವನಾಗಿ; ಮಿಷತಃ=ನಿಮೇಷಾದಿಗಳ ಸಹಿತಕೂಡಿರುವ; ವಿಶ್ವಸ್ಯ=ಸಮಸ್ತ ಪ್ರಾಣಿಗಳಿಗೆ; ವಶೀ=ಸ್ವಾಮಿಯಾಗಿ; ವರ್ತತೇ=ಇದ್ದಾನೆ.

**(3)ಸೂರ್ಯಾಚಂದ್ರಮಸೌ ಧಾತಾ ಯಥಾ ಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂಚಾಂತರಿಕ್ಷಮಥೋಸ್ವಃ ॥**

ಅರ್ಥ:- ಧಾತಾ=ಸೃಷ್ಟಿಕರ್ತನಾದ ಬ್ರಹ್ಮನು ಅಥವಾ ಪರಮಾತ್ಮನು; ಸೂರ್ಯಾಚಂದ್ರಮಸೌ= ಸೂರ್ಯಚಂದ್ರರಿಬ್ಬರನ್ನು ; ಯಥಾಪೂರ್ವಂ=ಮುಂಚಿನಂತೆ(ಪೂರ್ವಕಲ್ಪದಲ್ಲಿದ್ದಂತೆ) ಅಕಲ್ಪಯತ್=ಸೃಷ್ಟಿಮಾಡಿದನು; ಅಥೋ=ಅನಂತರದಲ್ಲಿ; ದಿವಂ ಚ= ಸ್ವರ್ಗಲೋಕವನ್ನು ; ಪೃಥಿವೀಂ ಚ=ಭೂಮಿಯನ್ನೂ ; ಅಂತರಿಕ್ಷಂ= ಆಕಾಶವನ್ನು ; ಸ್ವಃ=ಸ್ವರ್ಗಲೋಕದಲ್ಲಿ ಆಗತಕ್ಕ ಸ್ವರ್ಗಭೋಗಗಳನ್ನೂ( ಅತಿಶಯ ಸುಖೋಪೇತಗಳಾದ ಮಹರಾದಿ ಲೋಕಗಳನ್ನು ತದಭಿಮಾನಿ ದೇವತೆಗಳನ್ನು ಕೂಡಾ) ಅಕಲ್ಪಯತ್ =ಸೃಷ್ಟಿಮಾಡಿದನು.

**ಜ್ಞಾಪಿಕಾ:-** ಮೇಲೆಕಂಡ ಪ್ರಕಾರ ಈ ಮೂರುಸಂಖ್ಯಾಋಕ್‌ಗಳನ್ನು ಪಠನಮಾಡಿ ನೀರನ್ನು ನಾಸಾಗ್ರಕ್ಕೆ ತೋರಿಸಿ ಭೂಮಿಯಲ್ಲಿ ಹಾಕಬೇಕು. ಅನಂತರ ಎರಡಾವರ್ತಿ ಆಚಮನ ಮಾಡತಕ್ಕದ್ದು. ಇದಕ್ಕೆ ಪ್ರಮಾಣವೇನೆಂದರೆ,''ಜಲಪೂರ್ಣಂ ತಥಾ ಹಸ್ತಂ। ನಾಸಿಕಾಗ್ರೇ ಸಮರ್ಪಯೇತ್। ಋತಂಚೇತಿ ಪಠಿತ್ವಾತು ತಜ್ಜಲಂ ತು ಕ್ಷಿತೌ ಕ್ಷಿಪೇತ್ ।''

''ದೇವ್ಯಾಃ ಪಾದೈಸ್ತ್ರಿಭಿಃ ಪೀತ್ವಾವ್ಯಬ್ಲಿಂಗೈರ್ನವಧಾ ತಥಾ। ಪುನರ್ವ್ಯಾಹೃತಿಗಾಯತ್ರೀ ಶಿರೋಮಂತ್ರೈಶ್ಚಸಂಸ್ಪೃಶೇತ್। ಏವಂ ಯಃ ಕುರುತೇ ವಿಪ್ರೋ ಮಹಾಪಾಪೈಃ ಪ್ರಮುಚ್ಯತೇ।'' ಎಂಬುವ ಭಾರದ್ವಾಜವಚನದಿಂದಲೂ ಮೇಲೆಕಂಡಋಕ್‌ಗಳನ್ನು ಪಠನಮಾಡಿ ಮಾರ್ಜನವನ್ನು ಮಾಡಿ ಕಡೆಗೆ ನೀರು ನಾಸಾಗ್ರವನ್ನು ತೋರಿಸಿ ಭೂಮಿಯಲ್ಲಿ ಎಡಗಡೆ ಹಾಕಬೇಕು.


**ಶ್ರೀತಿಮ್ಮಣ್ಣಾರ್ಯರು:-**ಋತಂಚೇತ್ಯಸ್ಯ ಮಂತ್ರಸ್ಯ ಅಘಮರ್ಷಣ ಋಷಿಃ ಭಾವವೃತ್ತೋ ದೇವತಾ ಅನಷ್ಟುಪ್ ಛಂದಃ ಪಾಪಪುರುಷಜಲವಿಸರ್ಜನೇ ವಿನಿಯೋಗಃ ॥ ಋತಂ ಚೇತ್ಯಮನೇನ ಜಲಮಭಿಮಂತ್ರ್ಯ ನಾಸಿಕಾಯೈ ಸಮರ್ಪ್ಯ ವಾಮಭಾಗೇ ಕ್ಷಿತೌ ಕ್ಷಿಪೇತ್। ತದುಕ್ತಂ ಜಲಪೂರ್ಣಂ ತಥಾ ಹಸ್ತಂ ನಾಸಿಕಾಯೈ ಸಮರ್ಪಯೇತ್। ಋತಂ ಚೇತಿ ಪಠಿತತ್ವಾತ್ ಜ್ಜಲಂ ವಾಮೇಕ್ಷಿತೌ ಕ್ಷಿಪೇತ್। ಭಾವಾನ್ ಪದಾರ್ಥಾನ್ ವರ್ತಯತಿ ಪ್ರವರ್ತಯತಿ ಭಾವವೃತ್ತೋ ಶ್ರೀಹರಿಃ ಋತಂ ಚೇತ್ಯಸ್ಯಾಯಮರ್ಥಃ॥

ಇಂಧೀ ದೀಪ್ತಾವಿತಿ ಧಾತೋಃ। ಅಭೀದ್ಧಾತ್ ಅಭಿತೋ ಇದ್ಧಾತ್ ಪ್ರಕಾಶಮಾನಾತ್ ತಪಸೋ ಆಲೋಚನರೂಪಾದ್ಬ್ರಹ್ಮಣಃ ಸಕಾಶಾತ್ ಋತಂ ಸತ್ಯಂ ಚ ಅಧ್ಯಜಾಯತ ಪ್ರಾದುರ್ಭೂತಮಭೂತ್ । ಋತಂ ಯಥಾರ್ಥಂ ವಿಜ್ಞಾನಂ ಸತ್ಯಂ ತತ್ಪೂರ್ವಿಕಾಕೃತಿರಿತ್ಯುಕ್ತೇಃ । ಯಥಾರ್ಥಜ್ಞಾನ ತತ್ಪೂರ್ವಿಕಕ್ರಿಯಾಕರಣವೇದಾಃ ವೇದಾಭಿಮಾನಿ ರಮಾ ಚ ಸರ್ವ ಸತ್ಕರ್ಮಣಾಂ ವೇದಮೂಲತ್ವಾತ್ ವೇದೋ ಬಭೂವೇತಿ ಭಾವಃ। ತತಃ ಬ್ರಹ್ಮ ತದನಂತರಂ ವಾ ರಾತ್ರಿಃ ತದುಪಲಕ್ಷಿತ ಕಾಲಃ ಕಾಲಮೂಲತ್ವಾತ್ ಸತ್ಕರ್ಮಣಾಸೋಽಪ್ಯಜಾಯತ। ತತಃ ಸಮುದ್ರಃ ಸಮುದ್ರಿಕ್ತಃ ಭೂಯಾನ್ ಭೂಯಸ್ತ್ವಾಚ್ಚಾಪಮಿತ್ಯುಕ್ತೇಃ । ಅರ್ಣವಃ ಅರ್ಣಸಮೂಹಃ ಅಧ್ಯಜಾಯತ । ಜಲಂ ವಿನಾ ಕರ್ಮಣಾಮಭಾವಾತ್ ಜೀವನಾಭಾವಾಚ್ಚ ತದಪ್ಯಜಾಯತ । ಅಪ ಏವ ಸಸರ್ಜಾದೌ ತಾಸು ವೀರ್ಯಮವಾಸೃಜದಿತ್ಯುಕ್ತೇಃ । ಸಮುದ್ರಾದರ್ಣವಾದಧಿ। ತಾದೃಶಂ ಸಲಿಲಮಧಿಕೃತ್ಯ ಸಂವತ್ಸರಃ ಸಂವತ್ಸರಃ ನಾಮಾ ವಿರಾಡಜಾಯತ। ಸ ಕೀದೃಶಃ। ಅಹೋರಾತ್ರಾಣಿ ವಿದಧತ್ ಕುರ್ವಾಣಃ ತದಭಿಮಾನಿನೌ ಸೂರ್ಯಾಚಂದ್ರಮಸೌ ವಾಯುಸರಸ್ವತೀ।'ಸವಾಯುಂ ಸೂರ್ಯನಾಮಾನಂ ಚಂದ್ರನಾಮ್ನೀ ಸರಸ್ವತೀ'ಮಿತ್ಯುಕ್ತೇಃ। ತತಃ ವಿಶ್ವಸ್ಯ ಮಿಷತಃ ಪಶ್ಯತಃ ಸರ್ವಜ್ಞಸ್ಯ ಹರೇಃ ವಶೀ ಅಧೀನಃ ಧಾತಾ ಯಥಾ ಪೂರ್ವಂ ಪೂರ್ವಕಲ್ಪ ಇವ ದಿವಂ ಚ ಪೃಥಿವೀಂಚಾಂತರಿಕ್ಷಂ ಭೂರ್ಭುವಸ್ವರ್ಲೋಕಾನ್ ಅಧಃ ಲೋಕಾದಧಃ ಪಾತಾಲಾದೀನ್ ಸ್ವಃ ಸ್ವರ್ಗಲೋಕಾದೂರ್ಧ್ವಂ ಮಹರಾದಿ

ತತ್ತಲ್ಲೋಕಗಾನಕಲ್ಪಯತ್ ॥ ಅಸೃಜತ್ । ಸರ್ವ ಸ್ರಷ್ಟತ್ವೇನ ಶ್ರೀಹರಿಸರ್ವೋತ್ತಮತ್ವಾನುಸಂಧಾನೇನ ಸರ್ವಪಾಪನಿವೃತ್ತಿಃ । ಹರಿರ್ಹರತಿ ಪಾಪನೀತಿ ಪ್ರಮಾಣಸಿದ್ಧಂ ॥

**ಅಥ ಅರ್ಘ್ಯಪ್ರದಾನ॥**

ಪ್ರಾತಸ್ಸಂಧ್ಯಾಂಗಭೂತವಾದ ಅರ್ಘ್ಯಪ್ರದಾನವನ್ನು ಮಾಡುತ್ತೇನೆಂದು ಮುಂದೆ ಹೇಳುವ ಪ್ರಕಾರ ಸಂಕಲ್ಪಮಾಡಿ ಪ್ರತ್ಯೇಕ ಶುದ್ಧೋದಕವನ್ನು ತೆಗೆದುಕೊಂಡು ಅದರಲ್ಲಿ ಈ ಕೆಳಗೆ ಹೇಳುವ ಪ್ರಕಾರ ವ್ಯಾಹೃತಿಯಂತ್ರವನ್ನು ಬರೆಯಬೇಕು.




''ತ್ರಿಕೋಣಂ ದೀರ್ಘರವ್ಯಂ ಚ । ದೇವಾನಾಂ ಸಿದ್ಧಿದಾಯಕಂ । ಕೋಣಮಧ್ಯೇಚ ಹ್ರೀಂಕಾರಂ ಕೋಣಾಗ್ರೇ ಪ್ರಣವಂ ನ್ಯಸೇತ್ । ದಂಡೇಷು ವ್ಯಾಹೃತಿಂ ಚೈವ ಮಧ್ಯೇ ವರುಣಬೀಜಕಂ। ಕನಿಷ್ಠಾಗ್ರೇಣ ವೈ ತತ್ರ। ಉಲ್ಲಿಖೇತ್ತು ಯಥಾ ಕ್ರಮಂ। ಲಿಖಿತ್ವಾ ಯಂತ್ರರಾಜಂ ತು ಪಶ್ಚಾತ್ ಅರ್ಘ್ಯಂ ಸಮಾಚರೇತ್ । ದೈತ್ಯಾನಾಂ ಚ ವಧಾರ್ಥಾಯ ಗಾಯತ್ರ್ಯಾ ಅಭಿಮಂತ್ರಯೇತ್ ।'' ಎಂದು ಪ್ರಮಾಣವಿರುವುದರಿಂದ ಈ ಯಂತ್ರವನ್ನು ಬಲಗೈಯಿನ ಕಡೆಯಬೆಟ್ಟು( ಕಿರುಬೆಟ್ಟು) ಕೊನೆಯಿಂದ ಬರೆಯಬೇಕು. ಈ ಯಂತ್ರಕ್ಕೆ ಯಂತ್ರರಾಜವೆಂದು ಹೆಸರು. ಬರೆದನಂತರ ಗಾಯತ್ರೀ ಅಭಿಮಂತ್ರಣ ಮಾಡಿದ ನಂತರ ಆ ಉದಕವನ್ನು ಅರ್ಘ್ಯ ಕೊಡತಕ್ಕದ್ದು. ವರುಣಬೀಜ= ವಕಾರ, ವ್ಯಾಹೃತಿಗಳು= ಭೂಃ ಭುವಃ ಸ್ವಃ ಹ್ರೀಂಕಾರ ಲಕ್ಷ್ಮೀಬೀಜ ಅಥವಾ ಲಜ್ಜಾಬೀಜ.

ಅರ್ಘ್ಯ ಈ ಕೆಳಗೆ ಹೇಳುವ ರೀತಿಯಿಂದ ಕೊಡತಕ್ಕದ್ದು.

'ಕರಾಭ್ಯಾಂ ತೋಯಮಾದಾಯ ಗಾಯತ್ರ್ಯಾಚಾಭಿಮಂತ್ರಿತಂ । ಆದಿತ್ಯಾಭಿಮುಖಸ್ತಿಷ್ಠನ್ ತ್ರಿರೂರ್ಧ್ವಮಥಚೋಕ್ಷಿಪೇತ್ । ' ಎಂದು ವ್ಯಾಸಸ್ಮೃತಿಯಲ್ಲಿಪ್ರಮಾಣವಿರುವುದರಿಂದ ಎರಡು ಕೈಗಳಿಂದ ಉದಕವನ್ನು ತೆಗೆದುಕೊಂಡು ಗಾಯತ್ರಿಯಿಂದ ಅಭಿಮಂತ್ರಣಮಾಡಿ ಸೂರ್ಯನಿಗೆ ಎದುರಾಗಿ ನಿಂತುಕೊಂಡು ಸೂರ್ಯನನ್ನು ನೋಡುತ್ತಾ ಮೂರಾವರ್ತಿ ಊರ್ಧ್ವಭಾಗಕ್ಕೆ ಎತ್ತಿ ಅರ್ಘ್ಯಪ್ರದಾನೋದಕ ಕೊಡಬೇಕು.

'ಪ್ರಾತರ್ಮಾಧ್ಯಾನ್ಹಯೋಸ್ತಿಷ್ಠನ್ ಸಾಯಮಾಸೀನ ಏವಚ' ಎಂದು ಪ್ರಮಾಣವಿರುವುದರಿಂದ ಪ್ರಾತಃ ಮತ್ತು ಮಧ್ಯಾನ್ಹಸಂಧ್ಯಾಂಗ ಅರ್ಘ್ಯವನ್ನು ನಿಂತು ಕೊಡಬೇಕು. ಸಾಯಂಕಾಲ ಅರ್ಘ್ಯ ಕೂತುಕೊಂಡು ಕೊಡಬೇಕು.

**ಪ್ರಶ್ನೆ:- ಅರ್ಘ್ಯಪ್ರದಾನವನ್ನು ಮೂರಾವರ್ತಿ ಯಾಕೆ ಕೊಡಬೇಕು?**

**ಉತ್ತರ:-** ''ಏಕಂ ವಾಹನನಾಶಾಯ। ದ್ವಿತೀಯಂ ಶಸ್ತ್ರನಾಶನೇ। ರಾಕ್ಷಸಾನಾಂ ವಧಾಯೈಕಂ। ದದ್ಯಾದರ್ಘ್ಯತ್ರಯಂ ಬುಧಃ।'' ಎಂದು ಪ್ರಮಾಣ ವಿದೆ. ಒಂದು ಅರ್ಘ್ಯ ರಾಕ್ಷಸರ ಆಯುಧ ನಾಶಮಾಡುವುದಕ್ಕೋಸ್ಕರ , ಮತ್ತೊಂದು ಅರ್ಘ್ಯ ರಾಕ್ಷಸರ ಆಯುಧನಾಶಕ್ಕಾಗಿ, ಮೂರನೇ ಅರ್ಘ್ಯ ರಾಕ್ಷಸರ ವಧೋದ್ದೇಶ ಕೊಡಬೇಕು.

**ಪ್ರಶ್ನೆ:- ಆ ರಾಕ್ಷಸರು ಯಾರು? ಎಲ್ಲಿ ಇರುತ್ತಾರೆ? ಅದರ ವಿವರಹೇಳಿರಿ**

**ಉತ್ತರ:-**''ಮಂದೇಹಾನಾಂ ವಧಾರ್ಥಾಯ। ಪ್ರಕ್ಷಿಪೇದುದಕಾಂಜಲಿಂ। ಪ್ರಾಯಶ್ಚಿತ್ತಾರ್ಥಂ ಆಚಮ್ಯ ಮುಚ್ಯತೇ ದೈತ್ಯಹತ್ಯಯಾ ॥ ಸಂಧ್ಯಾಕಾಲೇ ಚ ಸಂಪ್ರಾಪ್ತೇ। ಘೋರೇಪರಮದಾರುಣೇ ಮಂದೇಹರಾಕ್ಷಸಾಘೋರಾಃ। ಸೂರ್ಯಮಿಚ್ಛಂತಿ ಖಾದಿತುಂ। ಪ್ರಜಾಪತಿಕೃತಃ ಶಾಪಸ್ತೇಷಾಮ್ಮೈರೇಯರಕ್ಷಸಾಂ। ಅಕ್ಷಯತ್ವಂ ಶರೀರಾಣಾಂ। ಮರಣಂ ಚ ದಿನೇ ದಿನೇ॥ ತತಸ್ಸೂರ್ಯಸ್ಯ ತೈರ್ಯುದ್ಧಂ ಭವತ್ಯೇವ ಸುದಾರುಣಂ। ತತೋ ದ್ವಿಜೋತ್ತಮಸ್ತತೋಯಂ। ಪ್ರಕ್ಷಿಪೇತಹಮುನೇ ಓಂ ಕಾರ ಬ್ರಹ್ಮಸಂಯುಕ್ತಂ। ಗಾಯತ್ರ್ಯಾಚಾಭಿಮಂತ್ರಿತಂ। ತೇನ ದಹ್ಯಂತಿ ತೇ ಪಾಪಾಃ ವಜ್ರೀಭೂತೇನ ವಾರಿಣಾ। ಅಥಃ ಪ್ರಯಾತಿ ಭಗವಾನ್ ಬ್ರಾಹ್ಮಣೋರಭಿರಕ್ಷಿತಃ। ವಾಲಖಿಲ್ಯಾದಿಭಿಶ್ಚೈವ ಜಗತಃ ಪಾಲನೋದ್ಯತಃ'' ಎಂದು ಪ್ರಮಾಣವಿದೆ.

ಇದರ ಅಭಿಪ್ರಾಯವೇನೆಂದರೆ:- 'ಮಂದೇಹರೆಂಬುವ ರಾಕ್ಷಸರು ಮಹಾಬಲವಂತರು. ಪರಮದಾರುಣರೂಪರು. ಸಂಧ್ಯಾಕಾಲಪ್ರಾಪ್ತವಾಗುತ್ತಲೇ, ಸೂರ್ಯನಸಹಿತ ಯುದ್ಧಮಾಡಿ ಆತನನ್ನು ಭಕ್ಷಣಮಾಡಬೇಕೆಂದು ಉದ್ಯುಕ್ತರಾಗಿ ಬರುತ್ತಾರೆ. ಅವರುಗಳಿಗೆ ಬ್ರಹ್ಮದೇವರ ವರವೂ, ಶಾಪವೂ ಇದೆ. ಏನೆಂದರೆ, ಶರೀರದಲ್ಲಿ ಪ್ರತಿನಿತ್ಯಮರಣವು ಮತ್ತು ಅಕ್ಷಯತ್ವ. ಈ ಪ್ರಕಾರ ಇರೋಣದರಿಂದಲೇ ಆ ರಾಕ್ಷಸರ ವಧಾರ್ಥವಾಗಿ ಓಂಕಾರ ಬ್ರಹ್ಮಸಂಯುಕ್ತವಾಗಿಯೂಗಾಯತ್ರಿ ಮಂತ್ರ ಅಭಿಮಂತ್ರಿತವಾಗಿಯೂ ವಜ್ರೀಭೂತವಾಗಿರತಕ್ಕಂಥಾ ಅರ್ಘ್ಯ ಉದಕದಿಂದ ಅವರು ದಗ್ಧರಾಗಿ ವಾಲಖಿಲ್ಯಾದಿ ಬ್ರಾಹ್ಮಣರಿಂದ ಸೂರ್ಯನು ರಕ್ಷಿತನಾಗಿ ಪ್ರಪಂಚದಲ್ಲಿ ಪಾಲನ ಉದ್ಯೋಗ ಮಾಡುತ್ತಾನೆಂದು ವಿಷ್ಣುಪುರಾಣ 8ನೇ ಅಧ್ಯಾ

ಯದಲ್ಲಿ ಹೇಳಿರುತ್ತದೆ.

**ಪ್ರಶ್ನೆ:- ಮೇಲೆ ಹೇಳಿದ ಪ್ರಮಾಣದಲ್ಲಿ ವ್ಯಾಹತಿಯಂತ್ರವನ್ನೇ ಉದಕ ದಲ್ಲಿ ಬರೆಯಬೇಕೆಂದರೆ ಅದಕ್ಕೆ ಪ್ರಮಾಣವೇನು?**

**ಉತ್ತರ:-** 'ದೈತ್ಯಾನಾಂ ರಕ್ಷಣಾರ್ಥಾಯ। ವೇತ್ರಪಾಖ್ಯೋ ಮಹಾಸುರಃ। ಶುಕ್ರಸ್ಯಚಾಜ್ಞಯಾ ತತ್ರ। ಜಲೇತಿಷ್ಠತಿ ಸರ್ವದಾ। ಅತಸ್ತಸ್ಯಾಪಕಾರಾರ್ಥಂ। ಲಿಖೇದ್ವ್ಯಾಹೃತಿಯಂತ್ರಕಂ॥' ಎಂದು ಪ್ರಮಾಣವಿದೆ. ಉದಕಗಳಲ್ಲಿ ಮೇಲೆಕಂಡ ದೈತ್ಯರರಕ್ಷಣಾರ್ಥವಾಗಿ ದೈತ್ಯಗುರುಗಳಾದ ಶುಕ್ರಾ-ಚಾರ್ಯರ ಆಜ್ಞಾದಿಂದ ವೇತ್ರಪ ಎಂಬ ಹೆಸರುಳ್ಳ ಮಹಾ ಅಸುರನು ಇದ್ದಾನೆ. ಅವನ ವಧಾರ್ಥವಾಗಿ ಆ ಯಂತ್ರವನ್ನು ಬರೆಯಬೇಕು.

ಕಾಲಾತೀತ ವಿಶುದ್ಧ್ಯರ್ಥಂ ದತ್ವಾ ಸಂಧ್ಯಾಂ ಸದಾಚರೇತ್। ಕಾಲಾತೀತೇ ತು ಗಾಯತ್ರ್ಯಾ ಪ್ರಾಯಶ್ಚಿತ್ತಮುದಾಹೃತಂ ಚತುರರ್ಘ್ಯಂತು ಗಾಯತ್ರ್ಯಾ ಶಿರೋವ್ಯಾಹೃತಿ ಸಂಪುಟಂ। ದದ್ಯಾತ್ಕೇವಲ ಗಾಯತ್ರ್ಯಾ ಮೂಢೋಹ್ಯರ್ಘ್ಯಂ ದದಾತಿಯಃ। ಸವೈದುರ್ಬ್ರಾಹ್ಮಣೋನಾಮ ಸರ್ವಕರ್ಮಬಹಿಷ್ಕೃತಃ। ಶಿರಸಾಯುಕ್ತಂ ಚತುರ್ಥ್ಯಾರ್ಘ್ಯಂ ವಿನಿಕ್ಷಿಪೇತ್। ಹೃದಂತಂ ಸರ್ವಲೋಕಸ್ತಂ ಮಂಡಲಾಂತಸ್ಥಿತಂಹರಿಂ॥ ಚಿಂತಯನ್ ಪರಮಾತ್ಮಾನಾಂ ಆಪ ಊರ್ಧ್ವಂ ವಿನಿಕ್ಷಿಪೇತ್।''

ಈ ಮಂತ್ರದಿಂದ ಒಂದಾವರ್ತಿ ಪ್ರಾಯಶ್ಚಿತ್ತಾರ್ಘ್ಯಪ್ರದಾನಮಾಡಿ, ನಂತರ ಗಾಯತ್ರಿ ಪ್ರಾರ್ಥನಮಾಡುವುದು.

**ಪ್ರಶ್ನೆ:-ವಾಲಖಿಲ್ಯರೆಂಬುವರು ಯಾರು? ಇವರು ಎಲ್ಲಿರುತ್ತಾರೆ? ಅವರ ವಿವರ ಹೇಳಿರಿ?**

**ಉತ್ತರ:-** 'ವಾಲಖಿಲ್ಯಾಸ್ಸಹಸ್ರಾಣಿ ಷಷ್ಟಿರ್ಬ್ರಹ್ಮರ್ಷಯೋಽಖಿಲಾಃ। ಪುರತೋಽಭಿಮುಖಂ ಯಾಂತಿ ಸ್ತುವಂತಿ ಸ್ತುತಿಭಿರ್ವಿಭುಂ।' ಎಂದು ವ್ಯಾಸಸ್ಮೃತಿಯಲ್ಲಿ ಹೇಳುತ್ತದೆ. ವಾಲಖಿಲ್ಯರೆಂಬುವರು ಅರವತ್ತುಸಹಸ್ರ ಋಷಿಗಳು. ಅವರು ಸೂರ್ಯನನ್ನು ಪರ್ವಕಾಲದಲ್ಲಿಯೂ ಸ್ತೋತ್ರಮಾಡುತ್ತಾ ಸೂರ್ಯನಿಗೆ ಅಭಿಮುಖರಾಗಿ ಸೂರ್ಯನ ರಥದಮುಂದೆ ನಡೆಯುತ್ತಾ ಇರುತ್ತಾರೆಂದು ಹೇಳುತ್ತದೆ.

''ಈಷನ್ನಮ್ರಪ್ರಭಾತೇತು ಮಧ್ಯಾನ್ಹೇ ಹೃದಿಸನ್ನಿಧೌ। ಅರ್ಘ್ಯಂ ಚ ಪ್ರಕ್ಷಿಪೇದಪ್ಸುಸಾಯಂ ತೂಪವಿಶದ್ಭುವಿ।'' ಎಂದು ಕೂಡಾ ವ್ಯಾಸಸ್ಮೃತಿಯಲ್ಲಿ ಪ್ರಮಾಣವಿರುತ್ತದೆ। ಆದಕಾರಣ ಪ್ರಾತಸ್ಸಂಧ್ಯಾರ್ಘ್ಯವನ್ನುಸ್ವಲ್ಪಬಗ್ಗಿ ಮಧ್ಯಾನ್ಹ ಅರ್ಘ್ಯಹೃದಯದವರೆಗೆ ಎತ್ತಿ ನೀರಿನಲ್ಲಿ ಹಾಕಬೇಕೆಂತಲೂ, ಸಾಯಂಕಾಲ ಕೂತು ಭೂಮಿಯಲ್ಲಿ ಹಾಕಬೇಕೆಂತಲೂ ಕೂಡಾ ಕಾಣುತ್ತದೆ.

''ಚತುರ್ಥಾರ್ಘ್ಯಂತು ಗಾಯತ್ರ್ಯಾ। ಶಿರೋವ್ಯಾಹೃತಿಸಂಪುಟಂ। ಕಾಲಾತೀತವಿಶುದ್ಧ್ಯರ್ಥಂ ತ್ರಿಸಂಧ್ಯಂತು ಸಮಾಚರೇತ್।'' ಎಂದು ಪ್ರಮಾಣವಿರುವುದರಿಂದ ಮೂರುಸಂಧ್ಯಾಕಾಲಗಳಲ್ಲಿಯೂ ಕಾಲಾತೀತವಾಗಿದ್ದ ಪಕ್ಷಕ್ಕೆ ದೋಷಪರಿಹಾರಾರ್ಥವಾಗಿ ಪ್ರಾಯಶ್ಚಿತ್ತಾರ್ಘ್ಯ ಎಂಬುವ ನಾಲ್ಕನೇ ಅರ್ಘ್ಯಕೊಡಬೇಕು. ಸಕಾಲಕ್ಕೆ ಅರ್ಘ್ಯಪ್ರದಾನಮಾಡಿದ ಪಕ್ಷಕ್ಕೆ ಪ್ರಾಯಶ್ಚಿತ್ತಾರ್ಘ್ಯ ಅವಶ್ಯವಿಲ್ಲ.

**ಪ್ರಶ್ನೆ:- ಅರ್ಘ್ಯಪ್ರದಾನ ಯಾವಕ್ರಮದಿಂದ ಮಾಡಬೇಕು?**

**ಉತ್ತರ:-** ''ಉತ್ಥಾಯಾರ್ಕಂ ಪ್ರತಿಪ್ರೇಕ್ಷ್ಯ। ಗಾಯತ್ರ್ಯಾತ್ರ್ಯಂಜಲೀನ್ ದ್ವಿಜಃ। ಆದಿತ್ಯ ಮಂಡಲಾತಸ್ಥಂ। ಧ್ಯಾತ್ವಾವಿಷ್ಣುಂ ಸನಾತನಂ। ಗೋಶೃಂಗಮಾತ್ರಮುದ್ಧೃತ್ಯ। ರವಿಂ ವೀಕ್ಷ್ಯ ಜಲಾಂಜಲಿಂ ದ್ವೌ ಪಾದೌ ಚ ಸಮೌಕೃತ್ವಾ। ಪಾಣಿಮುದ್ಧೃತ್ಯ ನಿಕ್ಷಿಪೇತ್।' ಎಂದು ಪ್ರಮಾಣವಿರುವು-ದರಿಂದ ಎದ್ದುನಿಂತುಕೊಂಡು, ಎರಡುಪಾದಗಳನ್ನು ಸಮವಾಗಿ ಮಾಡಿಕೊಂಡು ಬೊಗಸೆ ಒಳಗೆ ಅಭಿಮಂತ್ರಿತವಾದ ನೀರನ್ನು ತೆಗೆದುಕೊಂಡು ಗೋಶೃಂಗದಷ್ಟು ಎತ್ತರ ಬೊಗಸೆ ಎತ್ತಿ ಸೂರ್ಯನನ್ನು ನೋಡುತ್ತಾ ಸೂರ್ಯಮಂಡಲಾಂತರ್ಗತ ಪರಮಾತ್ಮನಧ್ಯಾನವನ್ನು ಮಾಡುತ್ತಾ ಅರ್ಘ್ಯವನ್ನು ಕೊಡತಕ್ಕದ್ದು.

''ಅಸಾವಾದಿತ್ಯೋ ಬ್ರಹ್ಮೇತಿ। ಕೃತ್ವಾತ್ಮಾನಂ ಪ್ರದಕ್ಷಿಣಂ। ದೈತ್ಯಹಿಂಸಾನಿವೃತ್ಯರ್ಥಂ ಉಪವಿಶ್ಯದ್ವಿರಾಚಮೇತ್।'' ಎಂದು ಪ್ರಮಾಣವಿದ್ದ ಕಡೆಯಿಂದ 'ಅಸಾವಾದಿತ್ಯೋಬ್ರಹ್ಮ' ಎಂದು ಉಚ್ಚಾರ ಮಾಡುತ್ತಾ ಆತ್ಮಪ್ರದಕ್ಷಿಣವನ್ನು ಮಾಡಿ ದೈತ್ಯಹಿಂಸಾಪ್ರಯುಕ್ತದೋಷನಿವಾಹರಣಾರ್ಥವಾಗಿ ಕೂತುಕೊಂಡು ಎರಡಾವರ್ತಿ ಆಚಮನ ಮಾಡತಕ್ಕದ್ದು.

**ಪ್ರಶ್ನೆ:- ಅರ್ಘ್ಯಪ್ರದಾನಮಾಡಿದ ಉದಕ ಎಲ್ಲಿ ಹಾಕಬೇಕು?**

**ಉತ್ತರ:-** 'ಜಲಮಧ್ಯೇಜಲಂ ಕ್ಷಿಪೇತ್। ಜಪ್ತ್ವಾರ್ಘ್ಯಂ ಚ ಪ್ರದಾತವ್ಯಂ। ಜಲಾಭಾವೇ ಶುಚಿ ಸ್ಥಲಂ। ಸಂಪ್ರೋಕ್ಷ್ಯವಾರಿಣಾಸಮ್ಯಕ್ ತತೋರ್ಘ್ಯಾಣಿ ಪ್ರದಾಪಯೇತ್।' ಎಂದು ಪ್ರಮಾಣ ವಿರುವುದರಿಂದ, ಅರ್ಘ್ಯಪ್ರದಾನೋದಕವನ್ನು ಪ್ರತ್ಯೇಕ ಉದಕದಲ್ಲಿ ಹಾಕಬೇಕು. ಆ ಪ್ರಕಾರ ಪ್ರತ್ಯೇಕ ಉದಕವಿಲ್ಲದಿದ್ದರೆ ಪ್ರತ್ಯೇಕ ಶುಚಿಸ್ಥಳವನ್ನು ಉದಕದಿಂದ ಚೆನ್ನಾಗಿ ಪ್ರೋಕ್ಷಣೆ ಮಾಡಿ ಆ ಸ್ಥಳದಲ್ಲಿ ಆ ಉದಕವನ್ನು ಹಾಕಬೇಕು.

**ಶ್ರುತಿಮೃಣ್ಣಾರ್ಯರು:-** ಅಥ ದ್ವಿರಾಚಮನಂ॥ 'ರಕ್ಷಾಂಸಿ ಹವಾ ಪುನೋನುವಾಕೇ' ಇತಿ ಶ್ರುತೇಃ। 'ಸಂಧ್ಯಾವಂದನವೇಲಾಯಾಂ ದದಾದರ್ಘ್ಯತ್ರಯಂ ಬುಧಃ। ಸಾಯಂ ಪ್ರಾತಃ ಸಮಾನಂ ಸ್ಯಾತ್ ಮಧ್ಯಾನ್ಹೇ ಚ ಪೃಥಗ್ವಿಧಂ। ಏವಂ ಮಧ್ಯಾನ್ಹಕಾಲೇ ತು ಸಾಯಂ ಪ್ರಾತಸ್ತ್ರಯಸ್ತ್ರಯಃ

। ಏವಂ ಜ್ಞಾತ್ವಾ ತ್ಯಜೇದರ್ಘ್ಯಂ ಲುಪ್ತನಕ್ಷತ್ರಪೂರ್ವಕಂ । ಏಕಂ ಶಸ್ತ್ರಾಸ್ತ್ರನಾಶಾಯ ಏಕಂ ವಾಹನನಾಶನೇ ಅಸುರಾಣಾಂ ವಧಾಯೈಕಂ ದದ್ಯಾದರ್ಘ್ಯತ್ರಯಂ ಕ್ರಮಾತ್ '' ಇತಿ ಸ್ಮೃತೇಃ ॥ 'ಗಾಯತ್ರ್ಯಾ ಚಾಂಜಲಿಂ ದತ್ವಾ ಧ್ಯಾತ್ವಾಸೂರ್ಯಗತಂ ಹರಿಂ। ಇತ್ಯಾಚಾರ್ಯೋಕ್ತೇಶ್ಚ॥ ಅರ್ಘ್ಯಪ್ರದಾನ ಸಮಯೇ ನದ್ಯಾದಿಷು ಜಲೇ ವ್ಯಾಹೃತಿತ್ರಯಂ ಲಿಖಿತ್ವಾ ಅರ್ಘ್ಯಪ್ರದಾನಂ ಕುರ್ಯಾತ್ ತದುಕ್ತಂ ವ್ಯಾಸೇನ - ''ತ್ರಿಕೋಣದೀರ್ಘಂ ನಮ್ಯಂ ಚ ರೇಖಾತ್ರಯ ಸಮನ್ವಿತಂ। ದಂಡೇಷು ವ್ಯಾಹೃತೀ ಸ್ತ್ರಿಸ್ರಮಧ್ಯೇವರುಣಬೀಜಕಂ। ಕನಿಷ್ಠಾಗ್ರೇಣ ವೈ ತತ್ರ ಉಲ್ಲಿಖೇತ್ತು ಯಥಾಕ್ರಮಂ॥ ಕೋಣಮಧ್ಯೇತು ಹ್ರೀಕಾರಂ ಕೋಣಾಗ್ರೇ ಪ್ರಣವಂ ಲಿಖೇತ್। ದೈತ್ಯಾನಾಂ ರಕ್ಷಣಾರ್ಥಾಯ ವೇತ್ರಪಾಖ್ಯೋ ಮಹಾಸುರಃ। ಶುಕ್ರಸ್ಯೈವಾಜ್ಞಯಾ ತತ್ರ ಜಲೇ ತಿಷ್ಠತಿ ಸರ್ವದಾ । ಅಥ ತಸ್ಯಾಪಕಾರಾರ್ಥಂ ಲಿಖೇದ್ವ್ಯಾಹೃತಿ ಯಂತ್ರಕಂ ।ಪ್ರಣವೇನ ಸಹೈವೇದಂ ದೇವಾನಾಂ ಸಿದ್ಧಿದಾಯಕಂ। ಲಿಖಿತ್ವಾ ಮಂತ್ರರಾಜಂ ತು ಪಶ್ಚಾದರ್ಘ್ಯತ್ರಯಂ ಸೃಜೇತ್। ಏಕಂ ಶಸ್ತ್ರಂ ಬುಧ ಇತ್ಯಾದಿ ಪೂರ್ವವತ್। ಪ್ರತ್ಯರ್ಘ್ಯಂ ತು ಜಲೇ ಸಮ್ಯಕ್ ಪ್ರತಿಚಕ್ಷ್ವೇತಿ ವೈ ನೃಚಂ। ಪುನರರ್ಘ್ಯಾಧಿಕಾರಾರ್ಥಂ ಆತ್ಮಸಂರಕ್ಷಣಾಯ ಚ॥ ತಿಷ್ಠನ್ನರ್ಘ್ಯತ್ರಯಂ ದದ್ಯಾತ್ ತ್ರಿಷುಕಾಲೇಷು ಬಹ್ವೃಚಃ। ಪ್ರಾತರ್ಮಧ್ಯಾನ್ಹಯೋಪ್ಸು ಸಾಯಾನ್ಹೇ ಭುವಿ ನಿಕ್ಷಿಪೇತ್। ಕರಾಭ್ಯಾಂ ತೋಯಮಾದಾಯ ಬ್ರಹ್ಮಾಸ್ತ್ರಂ ತು ಪ್ರಯೋಜಯೇತ್। ಬ್ರಹ್ಮಾಸ್ತ್ರಂ ಬ್ರಹ್ಮದಂಡಂ ಚ ಬ್ರಹ್ಮಶೀರ್ಷಂ ಚ ಸಂಯುತಂ। ಅರ್ಘ್ಯತ್ರಯ ಪ್ರಯೋಗಾರ್ಥಮೇಕಮೇಕಮುದಾಹೃತಂ। ಅಸ್ತ್ರಮಾದೌ ತಥಾ ದಂಡಂ ರೇಖಾಂ ತ್ರೀಣಿ ಸಮಾಚರೇತ್। ಪರ್ಯಾರ್ಯಣತ್ರಿಷೂಚ್ಚಾರ್ಯದ್ಯಂ ಜಲೌ ಜಲಮಾಹರೇತ್। ಪಾಣಿಭ್ಯಾಂ ಜಲಮಾದಾಯ ಗಾಯತ್ರ್ಯಾ ಚ ಜಲಂ ಕ್ಷಿಪೇತ್। ಜಲೇತ್ವರ್ಘ್ಯಂ ಪ್ರದಾತವ್ಯಂ ಜಲಾಭಾವೇ ಚ ತತ್ ಸ್ಥಳೇ। ಸಂಪ್ರೋಕ್ಷ್ಯ ವಾರಿಣಾ ಸಮ್ಯಕ್ ಪಶ್ಚಾದರ್ಘ್ಯಂ ಯಥಾ ವಿಧಿ॥ ನಿಕ್ಷಿಪೇದ್ಯದಿ ಮೂಢಾತ್ಮಾ ರೌರವಂ ನರಕಂ ವ್ರಜೇತ್। ಮೂಢಾತ್ಮಾವಿಧಾನಾಜ್ಞಃ ನ ಯದಿ ತೂಷ್ಣೀಂ ನಿಕ್ಷಪೇದ್ರೌರವಂ ನರಕಂ ವ್ರಜೇತ್ ಇತ್ಯರ್ಥಃ। ಕರಾಭ್ಯಾಂ ತೋಯಮಾದಾಯ ಗಾಯತ್ರ್ಯಾ ಚಾಭಿಮಂತ್ರಿತಂ। ಗೋಶೃಂಗಮಾತ್ರಮುದ್ಧೃತ್ಯ ಮಧ್ಯೇ ಜಲಂ ಕ್ಷಿಪೇತ್। ಪ್ರಾಙ್ಮುಖಃ ಸತತಂ ವಿಪ್ರಃ ಸಂಧ್ಯೋಪಾಸನಮಾಚರೇತ್। ಅರ್ಘ್ಯಂ ಪ್ರಕ್ಷೇಪಣಂ ಕುರ್ಯಾತ್ ಆದಿತ್ಯಾಭಿಮುಖೋದ್ವಿಜಃ। ಪ್ರಾತಃ ಪ್ರಹ್ವಃ ಕ್ಷಿಪೇದರ್ಘ್ಯಂ ಮಧ್ಯಾನ್ಹೇ ಋಜುಸಂಸ್ಥಿತಃ। ಅರ್ಘ್ಯಪ್ರಕ್ಷೇಪಣಂ ಕುರ್ಯಾತ್ ಸಾಯಂ ತು ಉಪವಿಶೇದ್ಭುವಿ। ಸಾಯಮುಪವಿಶ್ಯಾರ್ಘ್ಯಪ್ರದಾನಂ ಯಜುರ್ವೇದಿ ವಿಷಯಂ। ತಿಷ್ಠನ್ನರ್ಘ್ಯತ್ರಯಂ ದದ್ಯಾತ್ರಿಷುಕಾಲೇಷು ಬಹ್ವೃಚಃ ಇತಿ ಋಗ್ವೇದೀನಾಂ ವಿಶೇಷೋಕ್ತೇಃ। ಅರ್ಘ್ಯಪ್ರದಾನ- ಸಮಯೇ ಅಂಜಲಿಕರಣೇ ವಿಶೇಷಃ ॥ ಪಾಣಿದ್ವಯಂ ಕಿಂಚಿತ್ ಸಂಕುಚ್ಯಾಷ್ಟಾಂಗುಲಿಂ ಕಿಂಚಿದಾಕುಂಚ್ಯ ಅಂಗುಷ್ಠದ್ವಯಂ ಯಥಾ ತರ್ಜನೀಯುಕ್ತಂ ನ ಸ್ಯಾತ್ ಅಂಗುಷ್ಠದ್ವಯಂ ಛಾಯಾ ಯಥಾ ಜಲೇ ಪತತ್ ತಥಾ ಅಂಜಲ್ಯೋಪರಿ ಆಕುಂಚ್ಯ ಅರ್ಘ್ಯಪ್ರದಾನಂ ಕುರ್ಯಾತ್। ತರ್ಜನ್ಯಂಗುಷ್ಠಯೋಗೇನ ರಾಕ್ಷಸೀಮುದ್ರಾಭವೇತ್। ರಾಕ್ಷಸೀಮುದ್ರಿಕಾ-ದತ್ತಂ ತತ್ತೋಯಂ ರುಧಿರಂ ಭವೇತ್। ನಿಕ್ಷಿಪೇತ್ ಯದಿ ಮೂಢಾತ್ಮಾ ರೌರವಂ ನರಕಂ ವ್ರಜೇತ್। ಅಂಗುಷ್ಠಛಾಯಯಾ ತೋಯಂ ದೇವತಾಮುದ್ರಿಕಾಭವೇತ್। ಜಪವಿಷಯೇ ಯಾವತೀಗಾಯತ್ರೀ ತಾವದ್ಗಾಯತ್ರ್ಯಾ ದತ್ವಾ ಪ್ರಾಯಶ್ಚಿತ್ತಾರ್ಘ್ಯಂ ಸಪ್ತವ್ಯಾಹೃತಿ ಶಿರೋಯುಕ್ತ ಗಾಯತ್ರ್ಯಾ ಪ್ರಾಣಾನಾಯಮ್ಯ ತಯಾ ಗಾಯತ್ರ್ಯಾ ದದ್ಯಾತ್ ॥ ತದುಕ್ತಂ ॥ ಚತುರರ್ಘ್ಯಂ ತು ಗಾಯತ್ರ್ಯಾ ಶಿರೋವ್ಯಾಹೃತಿ ಸಂಪುಟಂ। ಕಾಲಾತೀತವಿಶುದ್ಧ್ಯರ್ಥಂ ತ್ರಿಸಂಧ್ಯಾಸು ಸಮಾಚರೇತ್। ಆಚಾಂತೋ ವಿಧಿವತ್ಪ್ರಾಣಾನಾಯಮ್ಯ ಚತುರ್ಥಕಂ। ಕಾಲಾತೀತವಿಶುದ್ಧ್ಯರ್ಥಂ ದತ್ವಾ ಸಂಧ್ಯಾಂ ಸಮಾಚರೇತ್। ಕಾಲಾತೀತಂ ತು ಗಾಯತ್ರ್ಯಾ ಪ್ರಾಯಶ್ಚಿತ್ತಮುದಾಹೃತಂ। '' ಚತುರರ್ಘ್ಯಂ ತು ಗಾಯತ್ರ್ಯಾ ಶಿರೋವ್ಯಾಹೃತಿಪೂರ್ವಕಂ । ಸಂಧ್ಯಾವಂದನವೇಲಾಯಾಂ ಪ್ರಾಯಶ್ಚಿತ್ತಾರ್ಘ್ಯ ಸಂಯುತಂ। ದದ್ಯಾತ್ಕೇವಲ ಗಾಯತ್ರ್ಯಾ ಮೂಢೋಹ್ಯರ್ಘ್ಯಂತು ಯೋ ದ್ವಿಜಃ। ನ ವೈದುರ್ಬ್ರಾಹ್ಮಣೋ- ನಾಮ ಸರ್ವೈ ಕರ್ಮ ಬಹಿಷ್ಕೃತಃ। ಶಿರಸಾ ಶಿಖಯಾಯುಕ್ತಂ ಚತುರರ್ಘ್ಯಂ ವಿನಿಕ್ಷಿಪೇತ್। ಹೃದಿಸ್ಥಂ ಸರ್ವಲೋಕಸ್ಥಂ ಮಂಡಲಾಂತರ್ವ್ಯವಸ್ಥಿತಂ। ಚಿಂತಯನ್ ಪರಮಾತ್ಮಾನಂ ಆಪಮೂರ್ಧ್ವಂ ವಿನಿಕ್ಷಿಪೇತ್ ॥

**ಅರ್ಘ್ಯಪ್ರದಾನಾಂಗ ಸಂಕಲ್ಪಃ**

ಓಂ ಪ್ರಣವಸ್ಯ ಪರಬ್ರಹ್ಮ ಋಷಿಃ- ಪರಮಾತ್ಮಾದೇವತಾ- ದೈವೀ ಗಾಯತ್ರೀ ಛಂದಃ- ಪ್ರಾಣಾಯಾಮೇ ವಿನಿಯೋಗಃ॥

(ಎಂದು ಅನಾಮಿಕ, ಕನಿಷ್ಠ ಮತ್ತು ಅಂಗುಷ್ಠಗಳಿಂದ ಮೂಗಿನ ತುದಿಯನ್ನು ಹಿಡಿದುಕೊಂಡು)

ಶ್ರೀ ಮಧ್ವಾಂತರ್ಯಾಮಿನ್ ಓಂ ಭೂಃ। ಓಂ ಭುವಃ। ಓಂ ಸ್ವಃ। ಓಂ ಮಹಃ। ಓಂ ಜನಃ। ಓಂ ತಪಃ। ಓಂ ಸತ್ಯಂ। ಓಂ ತತ್ಸವಿತುರ್ವರೇಣ್ಯಂ- ಭರ್ಗೋ ದೇವಸ್ಯಧೀಮಹಿ- ಧಿಯೋ ಯೋ ನಃ ಪ್ರಚೋದಯಾತ್॥ ಓಂ ಆಪೋ ಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಸ್ವಃ ಓಂ॥

(ಎಂದುಮನಸ್ಸಿನಲ್ಲೇ ಹೇಳಿಕೊಂಡು, ಬಲತೊಡೆಯಮೇಲೆ ಎಡಗೈ ಅಂಗೈಯ ಮೇಲೆ ಬಲಗೈ ಅಂಗೈಯನ್ನು ಇಟ್ಟುಕೊಂಡು)

ಇತಿ ಪೂರ್ವೋಚ್ಚರಿತ -ಏವಂ ಗುಣ ವಿಶೇಷಣ-ವಿಶಿಷ್ಟಾಭ್ಯಾಂ- ಶುಭತಿಥೌ- ಶ್ರೀ ಮಧ್ವಾಂತರ್ಯಾಮಿನ್ ಶ್ರೀ ಸವಿತೃನಾಮಕ ಶ್ರೀ ಲಕ್ಷ್ಮೀನಾರಾಯಣ ಪ್ರೇರಣಯಾ- ಶ್ರೀ ಲಕ್ಷ್ಮೀನಾರಾಯಣ ಪ್ರೀತ್ಯರ್ಥಂ- ಪ್ರಾತಃ (ಸಾಯಂ) ಸಂಧ್ಯಾವಂದನಾಂಗ ಅರ್ಘ್ಯಪ್ರದಾನಂ ಕರಿಷ್ಯೇ॥

(ಎಂದು ನೀರನ್ನು ತೆಗೆದುಕೊಂಡು ಪಾತ್ರೆಯಲ್ಲಿ ಬಿಡುವುದು)

ಶ್ರೀ ಮಧ್ವಾಂತರ್ಯಾಮಿನ್ ಪ್ರಣವಸ್ಯ-ಪರಬ್ರಹ್ಮಋಷಿಃ- ಪರಮಾತ್ಮಾ- ದೇವತಾ-ದೇವೀ ಗಾಯತ್ರೀ ಛಂದಃ -ವ್ಯಾಹೃತೀನಾಂ ಪ್ರಜಾಪತಿ ಋಷಿಃ- ಅಗ್ನಿವಾಯುಸೂರ್ಯಾ ದೇವತಾಃ। ಗಾಯತ್ರಿ- ಉಷ್ಣಿಗನುಷ್ಟು ಭಃ ಛಂದಾಂಸಿ। ಗಾಯತ್ರ್ಯಾಃ ವಿಶ್ವಾಮಿತ್ರಋಷಿಃ। ಸವಿತಾ ದೇವತಾ। ಗಾಯತ್ರೀ ಛಂದಃ। ಪ್ರಾತಃ(ಸಾಯಂ) ಅರ್ಘ್ಯಪ್ರದಾನೇ- ವಿನಿಯೋಗಃ॥ (ಎಂದು ನೀರು ಉದ್ಧರಣೆಯಲ್ಲಿ ತೆಗೆದುಕೊಂಡು)

''ಶ್ರೀ ಮಧ್ವಾಂತರ್ಯಾಮಿನ್‌ಹರಿಃ **ಓಂ ॥ ಭೂರ್ಭುವ ಸ್ವಃ - ತತ್‌ಸವಿತು- ರ್ವರೇಣ್ಯಂ-ಭರ್ಗೋ ದೇವಸ್ಯಧೀಮಹಿ- ಧಿಯೋ ಯೋ ನಃ ಪ್ರಚೋದಯಾತ್॥** '' (ಎಂದು ಹೇಳಿ ಅರ್ಘ್ಯವನ್ನು ಕೊಟ್ಟು)

ಓಂ ಪ್ರತಿಚಕ್ಷ್ವೇತಿ ಮಂತ್ರಸ್ಯ । ಬ್ರಹ್ಮಾಋಷಿಃ । ಗಾಯತ್ರೀಛಂದಃ । ಸವಿತಾ ದೇವತಾ । ಅರ್ಘ್ಯಾದಿಕಾರ ಸಿದ್ಧ್ಯರ್ಥೇ ಆತ್ಮಸಂರಕ್ಷಣಾರ್ಥೇ ಜಪೇ ವಿನಿಯೋಗಃ ।

**ಶ್ರೀಮಧ್ವಾಂತರ್ಯಾಮಿನ್ ಹರಿಃ ಓಂ ॥ ಪ್ರತಿಚಕ್ಷ್ವ ವಿಚಕ್ಷ್ವೇಂದ್ರಶ್ಚ ಸೋಮಜಾಗೃತಂ । ರಕ್ಷೋಭ್ಯೋ ವಧಮಸ್ಯತಮಶನಿಂ ಯಾತುಮದ್ಭ್ಯಃ ॥ ಹರಿಃ ಓಂ ॥**(ಋ. 5 ಅ॥ 7ಅ ॥ 9ನೇ ವರ್ಗ)

**ಮಂತ್ರಾರ್ಥ:-** ಪ್ರತಿಚಕ್ಷ್ವ ಎಂಬ ಮಂತ್ರಕ್ಕೆ ಬ್ರಹ್ಮನು ಋಷಿಯು । ಸವಿತೃನಾಮಕ ಶ್ರೀಲಕ್ಷ್ಮೀ ನಾರಾಯಣನು ದೇವರು । ಗಾಯತ್ರೀ ಛಂದಸ್ಸು। ಅರ್ಘ್ಯಕೊಡುವುದರ ಅಧಿಕಾರ ಸಿದ್ಧ್ಯರ್ಥ ವಾಗಿಯೂ ಮತ್ತು ಆತ್ಮಸಂರಕ್ಷಣೆಗೂ ಜಪವನ್ನು ಮಾಡುತ್ತೇನೆ.

ಇಂದ್ರಃ=ಸರ್ವೈಶ್ವರ್ಯಯುಕ್ತನಾದ ನಾರಾಯಣನೇ, ಸೋಮಜಾಗೃತಂ=ಚಂದ್ರನನ್ನು ಪ್ರಕಾಶಮಾಡಿಸುವಂಥಾ ಸೂರ್ಯನನ್ನು; ರಕ್ಷೋಭ್ಯಃ=ರಾಕ್ಷಸರುಗಳಿಂದ ಇವನಿಗೆ ಬರುವ, ವಧಂ= ಆಪತ್ತನ್ನು ; ಪ್ರತಿಚಕ್ಷ್ವ=ಮುಂದೆಯೇ ತಿಳಿದು; ವಿಚಕ್ಷ್ವ=ವಿಶೇಷವಾಗಿ ನೋಡಿ; ಅದ್ಭ್ಯಃ= ಗಾಯತ್ರೀಮಂತ್ರಜಲದಿಂದ; ಅಶನಿಂ ಇವ=ವಜ್ರಾಯುಧದಂತೆ ತೀಕ್ಷ್ಣವಾದ ಆಪತ್ತನ್ನು ; ತಂ= ಆ ಮಂದೇಹನೆಂಬ ರಾಕ್ಷಸನು; ಯಾಂತು= ಹೊಂದುವಂತೆ ಮಾಡು.

(ಈಅರ್ಥವನ್ನು ಮಲ್ಲೇಶ್ವರಂ ಮಾಧ್ವಸಂಘವತಿಯಿಂದ ಪ್ರಕಟಿತವಾದ ಸಂಧ್ಯಾವಂದನೆ ಪುಸ್ತಕದಿಂದ ಆರಿಸಿದೆ)

ಅಸ್ಯ ಶ್ರೀಶಿರೋಮಂತ್ರಸ್ಯ । ಬ್ರಹ್ಮಾಋಷಿಃ ಆಪೋ ದೇವತಾ ಗಾಯತ್ರೀಛಂದಃ ಗಾಯತ್ರ್ಯಾಕರ್ಷ -ಣೇವಿನಿಯೋಗಃ ।

ಶ್ರೀಮಧ್ವಾಂತರ್ಯಾಮಿನ್ ॥ **ಹರಿಃ ಓಂ ॥ಓಂ ಆಪೋ ಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಸ್ವಃ ಓಂ॥** ( ಎಂದು ಆಚಮನಾರ್ಥ ಬಲಗಿವಿಯನ್ನು ಬಲಗೈಯಿಂದ ಮುಟ್ಟಬೇಕು. ಇದು ಮೊದಲನೇ ಅರ್ಘ್ಯಪ್ರದಾನವು)

ಮತ್ತೆ ಇದೇರೀತಿ ಎರಡು ಅರ್ಘ್ಯಗಳನ್ನು ಕೊಡಬೇಕು.

ಸಂಧ್ಯಾವಂದನೆ ಹೊತ್ತು ಮೀರಿದ್ದರೆ ''ಯದದ್ಯಕಚ್ಚೇತಿ ಮಂತ್ರಸ್ಯ ಸುಕಾಕ್ಷಃಋಷಿಃ । ಸೂರ್ಯೋ ದೇವತಾ ತ್ರಿಷ್ಟುಪ್ ಛಂದಃ । ಕಾಲಾತೀತ ದೋಷ ಪ್ರಾಯಶ್ಚಿತ್ತಾರ್ಥಂ ಪುನಃಅರ್ಘ್ಯ ಪ್ರದಾನೇ ವಿನಿಯೋಗಃ ॥

ಶ್ರೀಮಧ್ವಾಂತರ್ಯಾಮಿನ್ **ಶ್ರೀಹರಿಃ ಓಂ ॥ ಯದದ್ಯಕಚ್ಚವೃತ್ರಹನ್ನುದಗಾ ಅಭಿಸೂರ್ಯ । ಸರ್ವಂ ತದಿಂದ್ರತೇ ವಶೇ ॥** (ಋ. 6ಅ॥ ಅ॥6 ॥ 21 ವ॥) **ಓಂ ಭೂಃ । ಓಂ ಭುವಃ । ಓಂ ಸ್ವಃ । ಓಂ ಮಹಃ ।ಓಂ ಜನಃ । ಓಂ ತಪಃ । ಓಂ ಸತ್ಯಂ ।ಓಂ ತತ್‌ಸವಿತು- ರ್ವರೇಣ್ಯಂ-ಭರ್ಗೋ ದೇವಸ್ಯಧೀಮಹಿ- ಧಿಯೋ ಯೋ ನಃ ಪ್ರಚೋದಯಾತ್॥** '' ಎಂದು ನಾಲ್ಕನೇ ಅರ್ಘ್ಯವನ್ನು ಕೊಡಬೇಕು.

ಪ್ರಾತರ್ದೇವೀತ್ಯಸ್ಯ ಮಂತ್ರಸ್ಯ ಅಕ್ಷೋಕ್ಷಋಷಿಃ ಬ್ರಹ್ಮಾದೇವತಾ ತ್ರಿಷ್ಟುಪ್ ಛಂದಃ । ಅದಿತಿ ಶಬ್ದವಾಚ್ಯ ಭಗವದಾಹ್ವಾನೇ ವಿನಿಯೋಗಃ ॥

**ಶ್ರೀಮಧ್ವಾಂತರ್ಯಾಮಿನ್ । ಹರಿಃ ಓಂ ॥ ಪ್ರಾತರ್ದೇವೀ ಮದಿತಿಂ ಜೋಹವೀಮಿ ಮಧ್ಯಂದಿನ ಉದಿತಾ ಸೂರ್ಯಸ್ಯ । ರಾಯೇ ಮಿತ್ರಾವರುಣಾ ಸರ್ವತಾತೇಳೇತೋಕಾ-ಯ ತನಯಾಯ ಶಂಯೋಃ ॥ ಹರಿಃ ಓಂ ॥**

**ಶ್ರೀಮಧ್ವಾಂತರ್ಯಾಮಿನ್ ಹರಿಃ ಓಂ ॥ ಹೃದಯಸ್ಥಾತು ಗಾಯತ್ರೀ ಹೃದ್ಗುಹಾ ಮುಖನಿಸ್ಸೃತಾ । ಹತ್ವಾ ಆದಿತ್ಯಶತ್ರೂಂಶ್ಚ ಪ್ರವಿಶ್ಯ ಹೃದಯಂ ಮಮ ॥ ಹರಿಃ ಓಂ ॥ ಓಂ ಭೂರ್ಭುವಸ್ವಃ ಓಂ ॥ ಅಸಾವಾದಿತ್ಯೋ ಬ್ರಹ್ಮ ॥**

''ಹೃದಯಸ್ಥಾ=ನನ್ನ ಹೃದಯದಲ್ಲಿದ್ದು; ಮುಖನಿಸ್ಸೃತಾ=ಮುಖದಿಂದ ಹೊರಟು; ಹೃದ್ಗತಾ =ಹೃದಯದಲ್ಲಿರುವ; ಭೂರ್ಭುವಸ್ವರೋಮ್=ಗುಣ ಪೂರ್ಣನಾದ; ಗಾಯತ್ರೀ=ಗಾಯತ್ರಿಯೇ, ಆದಿತ್ಯಶತ್ರೂಂಶ್ಚ= ಸೂರ್ಯನ ಶತ್ರುಗಳನ್ನು; ಹತಾ=ನಾಶಮಾಡಿ, ಮಮ=ನನ್ನ; ಹೃದಯಂ= ಹೃದಯವನ್ನು; ಪ್ರವಿಶ್ಯ=ಪ್ರವೇಶಮಾಡು.

ಅಸೌ= ಈ ; ಆದಿತ್ಯಃ= ಸೂರ್ಯಾಂತರ್ಗತ ಸೂರ್ಯನಿಯಾಮಕನಾದ ಪರಮಾತ್ಮನು; ಬ್ರಹ್ಮ=ಗುಣಪೂರ್ಣನು ;

**ತದನಂತರ ಏನು ಮಾಡಬೇಕು?**

**ಉ:-** ವಾರಾಭಿಮಾನಿ ದೇವತೆಗಳಿಗೆ, ನವಗ್ರಹಗಳಿಗೆ; ಕೇಶವಾದಿ ದಾಮೋದರಪರ್ಯಂತ ವರೆಗೂ ಶುಕ್ಲಪಕ್ಷದಲ್ಲಿ; ಸಂಕರ್ಷಣಾದಿ ಕೃಷ್ಣಪರ್ಯಂತ ಕೃಷ್ಣಪಕ್ಷದಲ್ಲೂ ಭಗವದ್ರೂಪಗಳಿಗೆ ಅರ್ಘ್ಯ ಷಾಡ್ಗುಣ್ಯಾರ್ಥವಾಗಿ ತರ್ಪಣವನ್ನು ದೇವತೀರ್ಥದಿಂದ ಕೊಡಬೇಕು.

**ನವಗ್ರಹಗಳಿಗೂ ಭಗವದ್ರೂಪಗಳಿಗೂ ತರ್ಪಣ ಬಿಡಲಿಕ್ಕೆ ಪ್ರಮಾಣವೇನು?**

**ಉ:-** 'ಮಂತ್ರತಃ ಪರಿವೃತ್ಯಾಥ। ಸಮಾಚಮ್ಯ ಸುರಾದಿಕಾನ್, ತರ್ಪಯಿತ್ವಾ।' ಎಂದು ಶ್ರೀಮದಾಚಾರ್ಯರು ಸದಾಚಾರಸ್ಮೃತಿಯಲ್ಲಿ ಹೇಳಿದ್ದಾರೆ. 'ಪಾಣಿನಾ ಜಲಮಾದಾಯ। ಪ್ರವತ್ಯುಯಾತ್ಪ್ರದಕ್ಷಿಣಂ। ಆದಿತ್ಯಾದಿ ಗ್ರಹಂಸ್ತತ್ರ। ತರ್ಪಯೇತ್ಸುಸಮಾಹಿತಃ॥ ಪರಿಷ್ಷೇಕಂತತಃ ಕುರ್ಯಾತ್ಪ್ರಾದಕ್ಷಿಣ್ಯಂ ಸಮಾಚರೇತ್। ಸಂತಪ್ಯ ಕೇಶವಾದೀನ್‌ಸ್ತಾನಾಚಮಂತು ಸಮಾಚರೇತ್॥ ಗ್ರಹಾನ್ ವಾರಾದಿ ದೇವಾಂಶ್ಚ॥ ............. ಶುಚಿಸ್ಸಂಧ್ಯಾಮುಪಾಸೀತ। ಕುರ್ಯಾದ್ದೇವರ್ಷಿ ತರ್ಪಣಂ॥ ಎಂದು ಕೂರ್ಮಪುರಾಣದಲ್ಲಿದೆ.

॥ ಇತಿ ಶಂ॥ ಶ್ರೀಭಾರತೀರಮಣಮಧ್ವಾಂತರ್ಯಾಮಿನ್ ಶ್ರೀಕೃಷ್ಣಾರ್ಪಣಮಸ್ತು॥

''ಶ್ರೀತಿಮ್ಮಣ್ಣಾರ್ಯರಿಗೆ ನಮಸ್ಕಾರಗಳು; ಶ್ರೀಗುರುರಾಜಾ ವೆಂಕೋಬರಾವ್ ರವರಿಗೆ ನಮಸ್ಕಾರಗಳು; ಭೂಮಂಡಲಸ್ಥ ಸದ್ವೈಷ್ಣವರಿಗೆ ನಮಸ್ಕಾರಗಳು''

**'' ಭಾರತೀರಮಣೋ ಮಧ್ವೋ ಸೃಷ್ಟಿಸ್ಥಿತ್ಯಂತಕಾರಕಃ ।**
**ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ ॥''**

(ಈ ಹೊತ್ತಿಗೆಯಲ್ಲಿ ಅರ್ಘ್ಯಪ್ರದಾನದವರೆಗೆ ಬರೆದಿದೆ. ಮುಂದಿನ ಭಾಗದಲ್ಲಿ ಸಂಧ್ಯಾವಂದನೆಯ ಮುಂದಿನಭಾಗಗಳನ್ನು ಬರೆಯಲಾಗುತ್ತೆ.)

(ಈ ಪ್ರತಿಯಲ್ಲಿರತಕ್ಕ ದೋಷಗಳಿಗೆ ಕ್ಷಮೆ ಇರಲಿ. ಸೂಚನೆಗಳನ್ನು ಕೊಡಿರಿ.)

ಕೆ. ಸುಬ್ಬಣ್ಣ.

Email: anandsib@vsnl.com